॥ ಶ್ರೀ ॥

ಕೀರ್ತನಸಂಕಲನಾಭರಣ — ಎರಡನೆ ಭಾಗ

ಭಾರತದ ಕೆಲವು ಕಥೆಗಳು

ಲೇಖಕ

ಹೊಸಕೆರೆ ಚಿದಂಬರಯ್ಯ

ಭಕ್ತಬಂಧುಕಾರ್ಯಾಲಯ, ಬಸವನಗುಡಿ, ಬೆಂಗಳೂರು ಸಿಟಿ

ಮೊದಲನೆ ಮುದ್ರಣ ೧,೦೦೦ ಪ್ರತಿಗಳು

ಪ್ರಕಾಶಕ

ಮಂಚಲದೊರೆ ರಾಮರಾವ್

ಎಸ್. ಎಸ್. ಎನ್. ಬುಕ್ ಡಿಪೊ, ಬಸವನ ಗುಡಿ, ಬೆಂಗಳೂರು ಸಿಟಿ

[ಶಾ. ೧೮೭೬] ಬೆಲೆ ೧ ರೂ. [ಕ್ರಿ. ೧೯೫೪

ಮುನ್ನುಡಿ

ಭಗವಂತನ ಪ್ರೇರಣೆಯಿಂದ ಸರ್ವಾಂಗಸಂಪೂರ್ಣವಾದ-ಕೀರ್ತನ-ಹರಿಕಥೆಗಳನ್ನೊಳಗೊಂಡಿರುವ **ಕೀರ್ತನಕಂಠಾಭರಣ** ವೆಂಬ ಈ ಹೊಸಬಗೆಯ ಸಾಹಿತ್ಯವನ್ನಾರಂಭಿಸಿ ಮೊದಲನೆಯ ಭಾಗವಾಗಿ ಸಂಪೂರ್ಣರಾಮಾಯಣದ ಗ್ರಂಥವನ್ನು ಎರಡು ವರ್ಷಗಳ ಹಿಂದೆ ಪ್ರಕಟಿಸಿದ್ದೆನಷ್ಟೆ. ವಾಚಕರೆಲ್ಲರೂ ಅವನ್ನು ಆದರದಿಂದ ಬರಮಾಡಿಕೊಂಡು ಅದರ ವಿಷಯವಲ್ಲಿ ತಮ್ಮ ಹೆಚ್ಚು ಹೆಚ್ಚಿನ ಮೆಚ್ಚುಗೆಯನ್ನು ತೋರಿಸಿದ್ದರಿಂದಲೂ ಕರ್ಣಾಟಕಸಾಹಿತ್ಯಪರಿಷತ್ತಿನವರೂ ಮದರಾಸಿನ ಲಿಟರೇಚರ್ ಸೊಸೈಟಿಯವರೂ ಸಂಭಾವಿಸಿ ದ್ರವ್ಯಸಹಾಯವನ್ನು ಮಾಡಿದ್ದರಿಂದಲೂ ಉತ್ತೇಜನವನ್ನು ಹೊಂದಿದ ನಾನು ಆ ಸೇವೆಯನ್ನು ಮುಂದುವರಿಸಿ ಭಾರತದಲ್ಲಿ ಆರಿಸಿದ ಹತ್ತು ಕಥೆಗಳುಳ್ಳ ಎರಡನೆಯ ಭಾಗವಾದ ಇದನ್ನು ಈಗ ವಾಚಕರಮುಂದಿಟ್ಟಿದ್ದೇನೆ. ಮೊದಲನೆಯ ಭಾಗದ ವಿಮರ್ಶೆಯಲ್ಲಿ ಬಂದ ಸೂಚನೆಗಳನ್ನೆಲ್ಲ ಕೃತಜ್ಞತಾಪೂರ್ವಕವಾಗಿ ಆದರಿಸಿ ಈ ಗ್ರಂಥವಲ್ಲಿ ಅವುಗಳನ್ನು ಆದಷ್ಟುಮಟ್ಟಿಗೆ ನಡೆವಳಿಕೆಗೆ ತಂದುಕೊಂಡಿರುತ್ತೇನೆ.

ಈ ಗ್ರಂಥದಲ್ಲಿರುವ ಕಥೆಗಳಿಗೆ ಆಯಾಸ್ಥಲಕ್ಕೆ ತಕ್ಕ ಮಟ್ಟುಗಳನ್ನು ಸೂಚಿಸಿ ಎಲ್ಲಹಾಡುಗಳ ರಾಗತಾಲಗಳನ್ನೂ ಸರಿನೋಡಿ ತಿದ್ದಿಕೊಡುವದರಮೂಲಕ ಶ್ರೀಯುತ ಸೂಲಕುಂಟೆ ಹನುಮಂತರಾಯರು ನನಗೆ ತುಂಬ ನೆರವಾಗಿದ್ದಾರೆ. ಮುನ್ನುಡಿಯಲ್ಲಿ ಹೇಳಬೇಕಾದ್ದೆಲ್ಲವೂ ಒಂದನೆಯ ಭಾಗದಲ್ಲಿ ವಿಸ್ತೃತವಾಗಿರುವದರಿಂದ ಇಲ್ಲಿ ಹೆಚ್ಚಾಗಿ ಹೇಳಬೇಕಾದ್ದೇನೂ ಇರುವದಿಲ್ಲ. ವಾಚಕರು ಈ ನನ್ನ ಸೇವೆಯನ್ನು ಸಾರ್ಥಕಗೊಳಿಸುವರೆಂದು ನಂಬುತ್ತೇನೆ.

ಬೆಂಗಳೂರು
ಪ್ರಮೋದೂತ—ಆಶ್ವಿನ

ಹೊಸಕೆರೆ ಚಿದಂಬರಯ್ಯ

ಸಂಜ್ಞೆಗಳ ವಿವರಣೆ

ಸಾಲುಗಳ ಮೊದಲಲ್ಲಿ ಉಪಯೋಗಿಸಿರುವವು

ಅ	ಅರ್ಥ	ತ್ರಿ	ತ್ರಿಪದಿ	ಶ್ಲೋ	ಶ್ಲೋಕ
ಉ	ಉಗಾಭಾಗ	ದಿಂ	ದಿಂಡಿ	ಷ	ಷಟ್ಪದಿ
ಕಂ	ಕಂದ	ದ್ವಿ	ದ್ವಿಪದಿ	ಸಾ	ಸಾಕಿ
ಕೀ	ಕೀರ್ತನಕಾರರ ಆರ್ಯಾ	ರ	ರಗಳೆ	ಸಾಂ	ಸಾಂಗತ್ಯ
ಚೂ	ಚೂರ್ಣಿಕೆ	ವ	ವಚನ	ಸೀ	ಸೀಸಪದ್ಯ
ಚೌ	ಚೌಪದಿ	ವೃ	ವೃತ್ತ	ಸೂ	ಸೂತ್ರ
ಟಿ	ಟಿಪ್ಪಣಿ	ಶ್ರು	ಶ್ರುತಿ		

ಸಾಲುಗಳ ಕೊನೆಯಲ್ಲಿ ಉಪಯೋಗಿಸಿರುವವು.

ಅ. ಗೀ	ಅಧ್ಯಾತ್ಮಗೀತಾವಳಿ	ಕ. ಉ	ಕಠೋಪನಿಷತ್
ಅ. ಮು	ಅನುಭವಮುದ್ರೆ	ಕ. ಭಾರ	ಕನ್ನಡ ಭಾರತ
ಅ. ಶ	ಅಪರಾಜಿತೇಶ್ವರಶತಕ	ಕ. ಸ. ಸಾ	ಕಥಾಸರಿತ್ಸಾಗರ
ಆ. ಪು	ಆದಿಪುರಾಣ	ಕಾದಂ. ಕ.	ಕಾದಂಬರೀ ಕಥೆ
ಏ. ಶ. ಸ್ಥ	ಏಕೋತ್ತರಶತಸ್ಥಲ	ಕಾ. ಕ	ಕಾಮನ ಕಥೆ
ಐ. ಉ	ಐತರೇಯೋಪನಿಷತ್	ಕೈ. ಕ	ಕೈವಲ್ಯಕಲ್ಪವಲ್ಲರಿ

ಗೀ. ಗೋ	ಗೀತಗೋಪಾಲ	ಮುಂ	ಮುಂಡಕೋಪನಿಷತ್ತು
ಗು. ಬೋ	ಗುರುಬೋಧಾಮೃತ	ಯೋ. ಸೂ	ಯೋಗಸೂತ್ರ
ಗು. ಶಂ. ಶ	ಗುರುಮೂರ್ತಿಶಂಕರಶತಕ	ರ. ಶ	ರತ್ನಾಕರಾಧೀಶ್ವರಶತಕ
ಜ. ವಿ.	ಜಗನ್ನಾಥವಿಜಯ	ರಾ. ವಿ	ರಾಜಶೇಖರವಿಲಾಸ
ತ್ರಿ. ಶ	ತ್ರಿಲೋಕಶತಕ	ವಿ. ಪು	ವಿಷ್ಣುಪುರಾಣ
ದಾ	ದಾಸರ ಪದಗಳು	ವಿ. ಶ	ವಿರೂಪಾಕ್ಷಶತಕ
ದ್ವಾ. ಅ	ದ್ವಾದಶಾನುಪ್ರೇಕ್ಷೆ	ವೀ. ವ. ಶಾ	ವೀರಶೈವವಚನಶಾಸ್ತ್ರ
ದೂ. ವಾ	ದೂತವಾಕ್ಯ	ವೈ. ಪಂ	ವೈರಾಗ್ಯಪಂಚಕ
ಧ. ಅ	ಧರ್ಮಾಮೃತ	ಶ. ಶಂ. ವಿ	ಶಬರಶಂಕರವಿಲಾಸ
ನ. ಶ	ನಯಶತಕ	ಶಾ. ನಾ	ಶಾಕುಂತಲನಾಟಕ
ನಾ. ಭ. ಸೂ	ನಾರದಭಕ್ತಿಸೂತ್ರ	ಶಿ. ಭ ಸಾ	ಶಿವಭಕ್ತಿಸಾರ
ನೀ. ಮಂ	ನೀತಿಮಂಜರಿ	ಶಿ. ಚಿಂ	ಶಿವತತ್ತ್ವಚಿಂತಾಮಣಿ
ನೀ. ಸಾ	ನೀತಿಸಾರ	ಶ್ರೀ. ಚೆ. ನಾ	ಶ್ರೀಚೆಲ್ವನಾರಾಯಣಶತಕ
ಪಾಂ. ಗೀ	ಪಾಂಡವಗೀತೆ	ಶ್ರೀ. ರಾ	ಶ್ರೀಮದ್ರಾಮಾಯಣ
ಪ್ರಾ. ಟೀ	ಪ್ರಾಯಶ್ಚಿತ್ತದಟೀಕು	ಶ್ರು	ಶ್ರುತಿ
ಪು. ಚ	ಪುಷ್ಪೋದ್ಭವಚರಿತ	ಸ. ಪ	ಸರ್ವಜ್ಞಪದಗಳು
ಭಕ್ತಿ. ಗೀ	ಭಕ್ತಿಗೀತಾವಳಿ	ಸಂ. ಭಾರ	ಸಂಸ್ಕೃತಭಾರತ
ಭ. ಗೀ	ಭಗವದ್ಗೀತೆ	ಸು	ಸುಭಾಷಿತ
ಭ. ಗೋ. ಸ್ತೋ	ಭಜಗೋವಿಂದ ಸ್ತೋತ್ರ	ಸು. ಲಾ	ಸುಶ್ಲೋಕಲಾಘವ
ಭ. ನೀ	ಭರ್ತೃಹರಿನೀತಿಶತಕ	ಸೂ. ತಾ	ಸೂಕ್ತಿತಾರಾವಳಿ
ಭ. ವೈ	ಭರ್ತೃಹರಿವೈರಾಗ್ಯಶತಕ	ಸೋ. ಶ	ಸೋಮೇಶ್ವರಶತಕ
ಭಾರ. ಚಂ	ಭಾರತಚಂಪು	ಸೌ. ವಿ	ಸೌಂದರವಿಲಾಸ
ಭೋ. ಪ್ರ	ಭೋಜಪ್ರಬಂಧ	ಹ. ಭ. ಸಾ	ಹರಿಭಕ್ತಿಸಾರ
ಮ. ಸ್ಮೃ	ಮನುಸ್ಮೃತಿ	ಹ. ರಾ. ಪ್ರ	ಹರೇರಾಮಮಂತ್ರಪ್ರಶಂಸೆ
ಮಂ. ಗೀ	ಮಂಗಲಗೀತಾವಳಿ		

ವಿಷಯಸೂಚಿಕೆ

ಭಾರತದ ಕೆಲವು ಕಥೆಗಳು

ಭೀಷ್ಮರ ಬ್ರಹ್ಮಚರ್ಯ

ಪೀಠಿಕೆ--ಬ್ರಹ್ಮಚರ್ಯ

ಅಠಾಣ--ಅಟತಾಳ

ಬ್ರಹ್ಮಚರ್ಯವ ಪಾಲಿಸೊ। ಹೇ ಮಾನವ,। ಬ್ರಹ್ಮರೂಪವ ಧ್ಯಾನಿಸೊ। ನಿರಂತರ ॥ಪ॥ ಚಿರಬ್ರಹ್ಮಚರ್ಯವ। ಪೊರೆಯುವ ಮನುಜನು। ಹೊರಗಣ ವಿಷಯವ। ತೊರೆಯೆ ಹಿಂದೆಗೆಯನು ॥೧॥ ಇರೆ ಬ್ರಹ್ಮಚರ್ಯದಿ। ನೆರೆ ಸಂಕಲ್ಪಿಸಿದರೆ। ಸುರರು ಮನ್ನಿಸುವರು;। ಮರಣ ಹಿಂಜರಿವುದು ॥೨॥ ವರಬ್ರಹ್ಮಚರ್ಯದಿ। ನುರುಶಕ್ತಿ ದೊರೆವುದು ;। ಧರಣಿಯೊಳಗೆ ಪೇರ್ಮೆ। ಹರಡಿಕೊಂಡಿರುವದು॥೩॥

ಮನುಷ್ಯನು ತಾನೂ ಜಗತ್ತೂ ಎಂದೆಂದಿಗೂ ಚಿರಸ್ಥಾಯಿಯೆಂದು ತಿಳಿದು ಜಗತ್ತಿನ ಸಂಬಂಧದ ಸುಖವನ್ನು ಗಳಿಸುವದರಲ್ಲಿ ತತ್ಪರನಾಗಿ ಅದಕ್ಕಿಂತ ಹೆಚ್ಚಿನದೊಂದುಂಟೆಂಬ ಕಲ್ಪನೆಯನ್ನೇ ತಂದುಕೊಳ್ಳದೆ ತನ್ನ ಜನ್ಮವನ್ನು ವ್ಯರ್ಥಮಾಡಿಕೊಳ್ಳುತ್ತಿರುವದನ್ನು ನೋಡಿ ಕನಿಕರದಿಂದ ಭಗವದ್ಭಕ್ತರು ಪ್ರಾಪಂಚಿಕರಿಗೆ ಒಮ್ಮೊಮ್ಮೆ ನೆನಪು ಕೊಡುವದೇನೆಂದರೆ—

ಶ್ಲೋ॥ ಪಥಿ ಚ್ಯುತಂ ತಿಷ್ಠತಿ ದಿಷ್ಟರಕ್ಷಿತಮ್ ;। ಗೃಹಸ್ಥಿತಂ ತದ್ವಿಹತಂ ವಿನಶ್ಯತಿ ;। ಜೀವತ್ಯನಾಥೋಽಪಿ ತದೀಕ್ಷಿತೋ ವನೇ;। ಗೃಹೇಽಪಿ ಗುಪ್ತೋಽಸ್ಯ ಹತೋ ನ ಜೀವತಿ ॥ —(ಸು)

ಅ॥ ಪೂರ್ವಪುಣ್ಯದ ಬಲವಿದ್ದರೆ ದಾರಿಯಲ್ಲಿ ಬಿದ್ದದ್ದಾದರೂ ಅಲ್ಲಿಯೇ ಇರುತ್ತದೆ. ಅದಿಲ್ಲದಿದ್ದರೆ ಮನೆಯಲ್ಲಿದ್ದರೂ ಹಾಳಾಗುತ್ತದೆ. ಸುದೈವದ ಕಣ್ಣು ಬಿದ್ದರೆ ದಿಕ್ಕಿಲ್ಲದವನು ಕೂಡ ಕಾಡಿನಲ್ಲಾದರೂ ಬದುಕುತ್ತಾನೆ. ಅದಿಲ್ಲದವನು ಮನೆಯಲ್ಲಿದ್ದರೂ ಬದುಕುವದಿಲ್ಲ.

ಈ ಅನಿತ್ಯತ್ವದ ಮಾತೂ ಇರಲಿ. ಇವುಗಳಿಂದ ಕ್ಷಣಕಾಲವಾಗುವ ಸುಖವೂ ಕೂಡ ಸುಖವಲ್ಲವೆಂದು ಒಬ್ಬ ಕವಿ ಹೇಳಿರುವದೇನೆಂದರೆ—

ವೃ॥ ತಣಿವುಂಟೇ ? ಪೆರತೊಂದಪೂರ್ವರಸಮೇಂ ಕೈಸಾರ್ಗುಮೇ? ಮತ್ತಮಾ। ವುಣಿಸಾ ತಂಬುಲಮಾ ವಿದಗ್ಧಗೋಷ್ಠೀಸಂಭೋಗವಮಾ ವಸ್ತ್ರಮಾ

ಶ್ಲೋ॥ ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ । ಸ ಗುಣಾನ್ಸಮತೀತ್ಯೈತಾನ್ಬ್ರಹ್ಮಭೂಯಾಯ ಕಲ್ಪತೇ ॥ —(ಭ. ಗೀ)

ಅ॥ ನನ್ನನ್ನು ಯಾವನು ಪೂರ್ಣವಾದ ಭಕ್ತಿಯಿಂದ ಸೇವಿಸುತ್ತಾನೊ ಅವನು ಗುಣಗಳನ್ನು ದಾಟಿ ಮೋಕ್ಷವನ್ನು ಪಡೆಯುತ್ತಾನೆ.

ಪೂರ್ಣವಾದ ಭಕ್ತಿಯಿಂದ ಪರಮಾತ್ಮನನ್ನು ಭಗವದ್ಭಕ್ತರು ಧ್ಯಾನಮಾಡಿ ಕೋರಿಸಿರುವ ದೆಂತೆಂದರೆ—

ಕಾಂಬೋದಿ—ಆದಿತಾಳ

ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ ॥ ಪ ॥ ಮಸ್ತಕದಲಿ ಮಾಣಿಕದ ಕಿರೀಟ । ಕಸ್ತೂರಿತಿಲಕದಿ ಹೊಳೆವ ಲಲಾಟ ॥ ಹಸ್ತದಿ ಕೊಳಲ ನೂದುವ ಓರೆನೋಟ । ಕೌಸ್ತುಭ ಎಡಬಲದಲಿ ಓಡಾಟ ॥ ೧ ॥ ಮುಗಮುಗಿಸುವ ಸೊಬಗಿನ ಸುಳಿಗುರುಳು । ಚಿಗುರ ತುಲಸಿ ವನಮಾಲೆಯ ಕೊರಳು ॥ ಬಗೆಬಗೆ ಹರಳಿನುಂಗುರವಿಟ್ಟ ಬೆರಳು । ಸೊಗಸಿನ ನಗೆಮೊಗ ತಾವರೆಯರಳು ॥ ೨ ॥ ಉಡುದಾರ ಒಡ್ಯಾಣ ನಿಖಿಲಾಭರಣ । ಬೆಡಗಿನ ಪೀತಾಂಬರ ರವಿಕಿರಣ ॥ ಕಡಗ ನೂಪುರ ಗೆಜ್ಜೆಗಳನಿಟ್ಟ ಚರಣ । ಒಡೆಯ ಶ್ರೀಪುರಂದರ ವಿಠಲನ ಕರುಣ ॥ ೩ ॥ —(ದಾ)

ಇಂಥ ಭಕ್ತಿಯಿಲ್ಲದ ಬಾಳೇತಕ್ಕೆಂದು ನೀತಿಶಾಸ್ತ್ರಕಾರರು ಹೇಳುವದೇನೆಂದರೆ—

ವೃ॥ ನಿನ್ನ ಪದಾಬ್ಜಭಕ್ತಿ, ವಿಷಯಾರ್ಥವಿರಕ್ತಿ, ತಪೋಭರಕ್ಕೆ ಸಂ ॥ ಪನ್ನತೆವೆತ್ತ ರಕ್ತಿ, ತನುವಂ ಸಲೆ ಭೇದಿಸಿ ತನ್ನರೂಪನ ॥ ಚ್ಛನ್ನದೆ ಕಾಣ್ಬ ಯುಕ್ತಿ, ಗುಣದಲ್ಲನುರಕ್ತಿಯಿವಾಗೆ ಮುಕ್ತಿ; ಜೀ । ವನ್ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ ॥ —(ಆ. ಶ)

ಈ ಸ್ಥಿತಿಯನ್ನು ಪಡೆಯುವ ಯೋಗಿಯ ಮುಖ್ಯ ಲಕ್ಷಣವೇನೆಂದರೆ:—

ತ್ರಿ॥ ಓದಿ ಬೂದಿಯ ಪೂಸಿ, ತೇದು ಕಾವಿಯ ಹೊದ್ದು । ಹೋದಾತ ಯೋಗಿಯೆನಬೇಡ; ಇಂದ್ರಿಯವ । ಕಾದಾತ ಯೋಗಿ ಸರ್ವಜ್ಞ ॥ —(ಸ. ಪ)

ಈ ಜಿತೇಂದ್ರಿಯನಾಗುವದಾದರೂ ಜೀವಮಾನದ ಕೊನೆಗಾಲದಲ್ಲಲ್ಲ—

ವೃ॥ ತನುವಿದು ರೋಗದಿಂ ಮುಸುಕದನ್ನಮೆ, ಮುಪ್ಪದು ಪೊರ್ದದನ್ನಮೇ, । ಘನಮೆನಿಪಿಂದ್ರಿಯಾಳಿ ಕಿಡದನ್ನಮೆ, ಮಿೞ್ತಿಡೆವೊರ್ದದನ್ನಮೇ, ॥ ತನಗೆ ವಿಮುಕ್ತಿಯಪ್ಪುದರೊಳುಜ್ಜುಗಿಪಾತನೆ ಬಲ್ಲವಂ ಗಡಾ । ಮನೆಗುರಿ ಪತ್ತಿದಂದಳಟೆ, ಬಾವಿಯ ತೋಡಿದರುಂಟೆ ಲೋಕದೊಳ್ ?॥ —(ಭ. ವೈ)

ಟಿ॥ ಮಿೞ್ತಿಡೆವೊರ್ದದನ್ನಮೇ= ಮರಣವು ಹತ್ತಿರಕ್ಕೆ ಬರುವ ಮೊದಲೇ.

ಬಾಲ್ಯದಲ್ಲಾದರೂ ಮನುಷ್ಯನಿಗಿರುವ ಹತ್ತಿಂದ್ರಿಯಗಳಲ್ಲಿ ಯಾವದೋ ಒಂದನ್ನು ಗೆದ್ದರೂ ಸಾಲದು—

ಕಂ॥ ಪಡೆದಿಹೆನೆಂದಿ ಯದಶಕವ । ಪೊಡವಿಯೊಳೀ ಮನುಜನದರೊಳೊ

ನೊಡೆದೊಡೆ ನಿ ॥ ಕೆಡೆವಂತೆ ಛಿದ್ರಪಾತ್ರದೆ। ಕಿಡುಗುಂ ಪ್ರಜ್ಞಾಬಲಂ ಸಮಂತಾ ನರನಾ ॥ —(ನೀ. ಸಾ)

ಈ ಹತ್ತು ಇಂದ್ರಿಯಗಳಲ್ಲಿ ಜನನೇಂದ್ರಿಯವನ್ನು ಗೆಲ್ಲುವದು ಬಹು ಕಷ್ಟವಾದ್ದರಿಂದ ಅದಕ್ಕಾಗಿ ಪೂರ್ವಿಕರು ನಿಯಮಿಸಿರುವದೇನೆಂದರೆ—

ಶ್ಲೋ ॥ ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾಸನೋ ಭವೇತ್ ॥ —(ಮ.ಸ್ಮೃ)

ಅ॥ ಏಕಾಂತದಲ್ಲಿ ತಾಯೊಡನೆ, ತಂಗಿಯೊಡನೆ ಅಥವಾ ಮಗಳೊಡನೆ ಆದರೂ ಜೊತೆಯಲ್ಲಿ ಕೂಡಬಾರದು. ಏಕೆಂದರೆ—

ಶ್ಲೋ ॥ ಅಗ್ನಿಕುಂಡಸಮಾ ನಾರೀ ಘೃತಕುಂಭಸಮಃ ಪುಮಾನ್॥ —(ಸು)

ಅ॥ ಸ್ತ್ರೀಯು ಅಗ್ನಿಕುಂಡದಂತೆ; ಪುರುಷನು ತುಪ್ಪದ ಗಡಿಗೆಯಂತೆ.

ಇಂದ್ರಿಯಗಳನ್ನು ಗೆಲ್ಲುವ ಯೋಗ್ಯತೆ ಬರುವದಕ್ಕೆ ಸಾಧನವೇನೆಂದರೆ ಬ್ರಹ್ಮಚರ್ಯ-ಎಂದರ ಪರಬ್ರಹ್ಮಸ್ವರೂಪದಲ್ಲಿಯೇ ಮನಸ್ಸಿಡುವದು. ಇಂಥವರೇ ಜಗತ್ತಿನಲ್ಲಿ ಹಿರಿಯರೆನಿಸಿಕೊಳ್ಳುವರು. ಅವರ ಲಕ್ಷಣಗಳೇನೆಂದರೆ ನೋಡಿರಿ—

ರೇಗುಪ್ತಿ—ಆದಿತಾಳ

ಇವರೇ ಹಿರಿಯವರು । ಲೋಕದೊ । ಳಿವರೇ ಹಿರಿಯವರು ॥ ಪ ॥
ಸತ್ಯವ ಬಿಡದಿಹರು । ಅಸತ್ಯಕೆ । ಮೃತ್ಯುವೆಂದೆನಿಸಿಹರು ॥ ಕೃತ್ಯಾಕೃತ್ಯವಿವೇಕವ ನಡೆಯೊಳು । ನಿತ್ಯ ತೋರಿ ಪುರುಷೋತ್ತಮರೆನಿಸರು ॥ ೧ ॥ ಧರ್ಮಕೆ ನೆರೆಯಹರು । ಬರು ಹೆಮ್ಮೆಯ । ಕರ್ಮಕೆ ಮರೆಯಹರು ॥ ಹಮ್ಮನುಳಿಯುವಾ ಕರ್ಮಯೋಗದೊಳ । ಮರ್ಮವ ಲೋಕಕೆ ಕೆಮ್ಮನೆ ಸಾರುವ ॥ ೨ ॥ ಗರುವವನುಳಿದಿಹರು । ಪರರೇಳಿಗೆ । ಗಿರದೆ ಹಿಗ್ಗುತಿಹರು ॥ ಧರೆಯುಪಕಾರಕೆ ತುರುವ ಕಾಯ್ದು ಶ್ರೀ । ಹರಿಯ ಪೋಲ್ವ ಶಂಕರಚರಿತರು ಧರೆಗಿವರೇ ॥ ೩ ॥ —(ಅ. ಗೀ)

ಟಿ॥ ನೆರೆ—ಸಹಾಯ. ಹಮ್ಮನು—ಅಹಂಕಾರವನ್ನು. ಕೆಮ್ಮನೆ—ಸುಮ್ಮನೆ. ಉಳಿದಿಹರು—ಬಿಟ್ಟಿರುವರು. ತುರು—ಹಸು. ಶಂಕರಚರಿತರು—ಮಂಗಲವಾದ ನಡತೆಯವರು.

ಆದ್ದರಿಂದಲೇ ಕೀರ್ತನಾರಂಭದಲ್ಲಿ ಭಾಗವತಶಿರೋಮಣಿಗಳು 'ಬ್ರಹ್ಮಚರ್ಯವ ಪಾಲಿಸೊ' ಎಂದುಪದೇಶ ಮಾಡಿರುವರು. ಇದಕ್ಕೆ ಉದಾಹರಣೆಯಾಗಿ ನೈಷ್ಠಿಕಬ್ರಹ್ಮಚರ್ಯದ ವಿಷಯದಲ್ಲಿ ಪ್ರಸಿದ್ಧವಾಗಿರುವ **"ಭೀಷ್ಮರ ಬ್ರಹ್ಮಚರ್ಯ"** ಎಂಬಾಖ್ಯಾನವು ನಿರೂಪಣ ಮಾಡಲಾಗುವದು.

ಕೊಂಡು ರಾಜ್ಯಭಾರಮಾಡುತ್ತಿದ್ದಾನೆ. ಆ ಹುಡುಗನು ದೇವವ್ರತನೆಂಬ ಹೆಸರಿನಿಂದ ಅಭಿವೃದ್ಧಿಗೆ ಬರುತ್ತಿದ್ದಾನೆ—

ದಿಂ॥ ಕಲಿತನಾ ವೇದಂಗಳ ವಸಿಷ್ಠನಿಂದ । ಸಲೆ ಧನುರ್ವಿದ್ಯೆಯ ಪರಶುರಾಮನಿಂದ ॥ ಕೆಳಗು ಗೆಯ್ದಿರ್ದಂ ಗುರುವ ಶುಕ್ರನನ್ನೂ । ಇಳೆಯೊಳೆನ್ನಾರೈ ಸಮರು ಹೇಳಲಿನ್ನು ॥

ದೇವವ್ರತನು ಹೀಗೆ ಬೆಳೆಯುತ್ತಿದ್ದಾಗ ಶಂತನುರಾಜನು ಒಂದು ದಿನ ಯಮುನಾತೀರದಲ್ಲಿ ಬೇಟೆಯಾಡುತ್ತ ಬಂದು ಸುವಾಸನೆಯನ್ನು ಹಿಡಿದುಕೊಂಡು ಹೋಗಿ ಒಬ್ಬ ಬೆಸ್ತರ ಹುಡುಗಿಯನ್ನು ಕಂಡು ತನ್ನಲ್ಲಿ ತಾನು ಯೋಚಿಸಿದ್ದೇನೆಂದರೆ—

ಕಂ॥ ಮರೆಸುವಳಿವಳೀ ದೇಹದ । ನರುಗುಂಪಿನ ಭರದಿ ಗಂಗೆಯಂ ತಾನಿವಳಿಂ ॥ ಸ್ಮರತಾಪಕ್ಕೊಳಗಾದೆಂ। ನೆರೆ ಕಾದಿಹುದೇನು ಸುಖವೊ ದುಃಖವೊ ಕಾಣೆಂ ॥

ಮತ್ತು—

ಶ್ಲೋ॥ ಸೇಯಂ ಸೀಧುಮಯೀ ವಾ । ಸುಧಾಮಯೀ ವಾ ಹಲಾಹಲಮಯೀ ವಾ ॥ ದೃಗ್ಭ್ಯಾಂ ನಿಪೀತಮಾತ್ರಾ । ಮದಯತಿ ಮೋದಯತಿ ಮೂರ್ಛಯತಿ ॥ —(ಸು)

ಅ॥ ಇವಳೇನು ಮದ್ಯಮಯಳೋ ಅಮೃತಮಯಳೋ ವಿಷಮಯಳೋ! ಕಣ್ಣಿಂದ ಕುಡಿದ ಮಾತ್ರಕ್ಕೆ ಮದವನ್ನೂ ಮೋದವನ್ನೂ ಮೂರ್ಛೆಯನ್ನೂ ಉಂಟುಮಾಡುವಳು.

ಹೀಗೆಲ್ಲ ಯೋಚಿಸಿ—

ಶ್ಲೋ॥ ರೂಪಮಾಧುರ್ಯಗಂಧೈಸ್ತಾಂ ಸಂಯುಕ್ತಾಂ ದೇವರೂಪಿಣೀಮ್ । ಸಮೀಕ್ಷ್ಯ ರಾಜಾ ದಾಶೇಯೀಂ ಕಾಮಯಾಮಾಸ ಶಂತನುಃ ॥ —(ಸಂ. ಭಾರ)

ಅ॥ ಮಧುರವಾದ ರೂಪದಿಂದಲೂ ಸುಗಂಧದಿಂದಲೂ ಕೂಡಿ ದೇವಸ್ತ್ರೀಯಂತಿದ್ದ ಆ ಬೆಸ್ತರ ಕನ್ಯೆಯನ್ನು ಶಂತನುರಾಜನು ಕಾಮಿಸಿದನು.

ಆಗ ಅವನು ಆಕೆಯ ಕುಲಗೋತ್ರಾದಿಗಳನ್ನೆಲ್ಲ ಕೇಳಿ ತನ್ನ ಇಚ್ಛೆಯನ್ನು ವ್ಯಕ್ತಗೊಳಿಸಲು ಆಕೆ ಹೇಳಿದ್ದೇನೆಂದರೆ—

ಸಾಂ॥ ಎಲೆ ನರಪಾಲನೆ, ದಾಶರಾಯನ ಹೊಟ್ಟೆ । ಯೊಳಗುದಿಸಿರುವಳ್ಳ ನಾನು ॥ ಕುಲಹೀನೆಯೆನ್ನದೆ ಕ್ಷತ್ರಿಯಚಿತ್ತವ : ಕಲಕಬಹುದೆ ಪೇಳು ನೀನು ॥

ಅದಕ್ಕೆ ರಾಜನ ಉತ್ತರ—

ಸಾಂ ॥ ಕುಲಧರ್ಮನಿರತನಾದೆನ್ನ ಚಿತ್ತವು ನಿನ್ನೊ । ಳೊಲಿದಿಹ ಕಾರಣದಿಂದ ॥ ಕುಲಹೀನೆ ನೀನಲ್ಲ ; ಕ್ಷತ್ರಿಯೆ ನೀಂ ಶಕುಂ । ತಲೆಯಂತೆಂಬೆನು ನಿಜದಿಂದ ॥

ಆಗ ಬೆಸ್ತರ ಕನ್ಯೆಯ ಮಾತು—

ಸಾಂ॥ ತಂದೆಯಧೀನದ ಕನ್ಯೆಯು ನಾ ನೀನೈ । ತಂದೆನ್ನ ತಂದೆಯ ಕೇಳು॥ ತಂದುಕೊಳ್ಳುವದವನಿತ್ತರೆ ಯುಕ್ತವು । ತಂದೆಯ ಮಾರಲು ಕೇಳು ॥

ಆಗ ಶಂತನುರಾಜನು ಬೆಸ್ತರ ದೊರೆಯ ಬಳಿಗೆ ಹೋಗಿ ಕನ್ಯಾಭಿಕ್ಷವನ್ನು ಬೇಡಿ ಹೇಳಿದ್ದೇನೆಂದರೆ—

ಶ್ಲೋ॥ ....ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ —(ಶಾ. ನಾ.)

ಅ॥ ಸಂದೇಹಾಸ್ಪದವಾದ ವಸ್ತುಗಳ ವಿಷಯದಲ್ಲಿ ಸತ್ಪುರುಷರಿಗೆ ತಮ್ಮ ಮನಸ್ಸಿನ ಪ್ರವೃತ್ತಿಯೇ ಪ್ರಮಾಣವು.

ಆದ್ದರಿಂದ ತಾನು ಆ ಕನ್ಯೆಯನ್ನು ಬಯಸಿರುವೆನೆನ್ನಲು ಬೆಸ್ತರ ದೊರೆಯು ಹೇಳುತ್ತಾನೆ—

ಕಂ॥ ಅದು ನಿಜ; ಭೂಭುಜಸುತೆಯಿಾ । ಸುದತಿಯಿವಳ್ವತ್ಸಮಾನಕುಲ ಸಂಭೂತಳ್ ॥ ಚದುರಿಂದೆ ಸಾಕಿದವ ನಾ । ನದರಿಂದೆನ್ನಿಚ್ಛೆಯಂತೆ ನಡೆಸುವೆನಿವಳಂ ॥

ತನಗೆ ಕೊಟ್ಟರೆ ತಾನು ಬೇಕಾದಷ್ಟು ಭಾಗ್ಯವನ್ನು ಕೊಡುತ್ತೇನೆಂದು ಶಂತನುರಾಜನು ಬೆಸ್ತರ ದೊರೆಗೆ ಆಶೆಯನ್ನು ಹಚ್ಚಲು ಅವನು ಹೇಳಿದ್ದೇನೆಂದರೆ—

ಶ್ಲೋ॥ ಅಸ್ಯಾಂ ಜಾಯೇತ ಯಃ ಪುತ್ರಃ ಸ ರಾಜಾ ಪೃಥಿವೀಪತೇ । ತ್ವದೂರ್ಧ್ವಮಭಿಷೇಕ್ತವ್ಯೋ ನಾನ್ಯಃ ಕಶ್ಚನ ಪಾರ್ಥಿವ ॥ —(ಸಂ. ಭಾರ.)

ಅ॥ ಹೆ, ರಾಜ, ನಿನ್ನ ತರುವಾಯ ಇವಳಲ್ಲಿ ಹುಟ್ಟಿವ ಮಗನಿಗೇ ಪಟ್ಟವಾಗಬೇಕೇಹೊರತು ಬೇರೆಯವರಿಗೆ ಆಗಕೂಡದು.

ಬೆಸ್ತರ ದೊರೆಯ ಬಾಯಿಂದ ಈ ಮಾತುಗಳು ಬರುತ್ತಲೆ ಕಿವಿಗಳನ್ನು ಮುಚ್ಚಿಕೊಂಡು ಶಂತನುರಾಜನು ಮನಸ್ಸಿನಲ್ಲಿ ಹಂಬಲಿಸಿದ್ದೇನೆಂದರೆ—

ತೋಡಿ—ಆದಿತಾಳ

ಮಾಡಿಕೊಳ್ವೆನೆಂತೊ । ಈ ಕನ್ಯೆಯನ್ನು ॥ಪ॥ ರೂಢಿಯೊಳಗಿಂತು । ಮಾಡಲಪ್ಪುದೆಂತು ॥ಅ. ಪ॥ ಮನೆಯಲ್ಲಿ ದೊಡ್ಡ ಮಗನಿರುವನು ॥ ಜನರಲ್ಲಿ ಪರಾಕ್ರಮಿಯಾದವನು ॥೧॥ ಮಂಗಲಾತುಮನು ಸುಂದರಾಂಗನು ॥ ಅಂಗಜಗೆ ಸಮನಾದಿಂಗಿತಜ್ಞನಿರಲು ॥೨॥ ಪ್ರಾಯವಂತನವನು ಜಾಯೆಯನ್ನು ಪಡೆಯೆ ॥ ನ್ಯಾಯವಾಗಿರಲುಪಾಯದಪ್ಪಿ ನಾನು ॥೩॥

ಈ ಪ್ರಕಾರ ದುಃಖಿಸುತ್ತ ಹಿಂದಿರುಗಿ ಹೋಗಿ ಇದೇ ಚಿಂತೆಯಿಂದ ಕೊರಗುತ್ತಿದ್ದು ದೇವವ್ರತನು ಬಂದು ಚಿಂತೆಯ ಕಾರಣವನ್ನು ಕೇಳಿದಾಗ ಶಂತನು ಹೇಳಿದ್ದೇನೆಂದರೆ—

ವೃ॥ ಮಗನೇ, ನೀನೆನಗೊಬ್ಬನೇ ಮಗನೆನಲ್ಚಿಂತಿಪ್ಪುದೀ ಮಾನಸಂ । ಮಿಗಿಲೋರ್ವಂ ಮಗನಾಗಲಿಲ್ಲೆನುತಮೆಂದುಂ ಪಂಬಲಂ ಪೊಂದುತಂ ॥ ಬಗೆಯುಲ್ಕೊಂದಹ ಕಣ್ಣುಮೊಂದೆನಿಪ ಕೈಯೊಂದಾದ ಕಾಲುಂ ಜಗ । ತ್ತಿಗೆ ಶೋಭಾವಹವಪ್ಪುವೇ ? ಕುಲಕೆ ಪುತ್ರಾನೇಕಮೇ ಭೂಷಣಂ ॥

ಇದು ಬರೀ ನನ್ನ ಅಭಿಪ್ರಾಯ ಮಾತ್ರವೇ ಅಲ್ಲ—

ಶ್ಲೋ॥ ಅನಪತ್ಯತೈಕಪುತ್ರತ್ವಮಿತ್ಯಾಹುರ್ಧರ್ಮವಾದಿನಃ ॥ —(ಸಂ.ಭಾರ)

ಅ॥ ಒಬ್ಬ ಮಗನಿರುವದೆಂಬುದು ಮಕ್ಕಳಿಲ್ಲದಂತೆಯೇ ಎಂದು ಧರ್ಮಶಾಸ್ತ್ರಜ್ಞರೂ ಹೇಳುತ್ತಾರೆ.

ಇದರ ಅರ್ಥವು ದೇವವ್ರತನಿಗೆ ಬೇಗ ಹೊಳೆಯಲಿಲ್ಲ. ಇದರ ಗುಟ್ಟನ್ನು ಸ್ಪಷ್ಟವಾಗಿಯೇ ತಿಳಿಯಬೇಕೆಂದು ದೇವವ್ರತನು ಸಾರಥಿಯನ್ನು ಕೇಳಿ ನಡೆದ ವೃತ್ತಾಂತವನ್ನೆಲ್ಲ ಅರಿತು ಒಡನೆ ಗಂಧವತಿ ಮತ್ತು ಸತ್ಯವತಿ ಎಂಬ ಹೆಸರುಳ್ಳ ಆ ಬೆಸ್ತರ ಕನ್ಯೆಯನ್ನು ತನ್ನ ತಂದೆಗಾಗಿ ಸಂಪಾದಿಸಿಕೊಂಡು ಬರುವದಕ್ಕಾಗಿ ಬೆಸ್ತರ ದೊರೆಯ ಬಳಿಗೆ ಹೋಗಿ ಕೇಳಿದಾಗ ಆ ದೊರೆಯು ದರ್ಶನಮಾತ್ರದಿಂದಲೆ ದೇವವ್ರತನಲ್ಲಿ ಪ್ರೇಮವುಳ್ಳವನಾಗಿ ಹೇಳಿದ್ದೇನೆಂದರೆ—

ಕೇ॥ ಯುವಕನೆ ನಿನಗಾದೊಡೆ ಕೊಡುತಿಹೆ ಕೇ । ಳಿವಳನು ಸಂತೋಷದಿ ನಾನು ॥ ಇವಳ ಮಗನು ದೊರೆಯಾದುದ ನೋಳ್ಪೆನು । ಬುವಿಯೊಳಿವಳ ಕೈ ಹಿಡಿ ನೀನು ॥

ಅದಕ್ಕೆ ದೇವವ್ರತನ ಉತ್ತರ—

ಸಾ॥ ತಂದೆಗಾಗಿ ನಾ ಸ್ವಾರ್ಥತ್ಯಾಗವ । ನಿಂದೇ ಗೈವೆನು ನೋಡು ॥ ತಂದೆಯ ರಾಜ್ಯಕೆ ಬರಲೊಲ್ಲೆನು ನಾ ನಿಂದೀ ಕನ್ಯೆಯ ನೀಡು ॥

ಹೀಗೆ ಬಾಹ್ಯವಿಷಯಗಳನ್ನು ತುಚ್ಛಬುದ್ಧಿಯಿಂದ ಕಾಣುವದು ಬ್ರಹ್ಮಚರ್ಯದ ಯೋಗ್ಯತೆಯ ಸೂಚಕವೆಂದು ಭಾಗವತಶಿರೋಮಣಿಗಳು ಪೀಠಿಕೆಯಲ್ಲಿ "ಚಿರಬ್ರಹ್ಮಚರ್ಯವ" ಎಂದು ಮುಂತಾಗಿ ಹೇಳಿರುವ ನುಡಿಯನ್ನು ಇಲ್ಲಿ ಲಕ್ಷ್ಯಕ್ಕೆ ತಂದುಕೊಂಡು ದೇವವ್ರತನು ಹೇಳಿದನು.

ಈ ಮಾತಿಗೆ ಬೆಸ್ತರ ದೊರೆಯು ಸಂತೋಷಗೊಂಡು ದೇವವ್ರತನನ್ನು ಶ್ಲಾಘಿಸಿ ತನ್ನ ಮತ್ತೊಂದು ಸಂಶಯವನ್ನು ಹೇಳುತ್ತಾನೆ—

ಕಂ॥ ನೀನಹುದು ಸತ್ಯಸಂಧಂ; । ತಾನದನರಿದಿರ್ಪೆನಿನ್ನು ನಿನ್ನಾತ್ಮಜರಿಂ ॥ ಕಾಣೆಂ ಕ್ಷೇಮವನೆನ್ನೀ । ಜಾಣೆಯ ಮಕ್ಕಳಿಗೆ; ಕೊಡುವೊಡಂಜುವೆನದರಿಂ॥

ಆಗ ದೇವವ್ರತನು ಪ್ರತಿಜ್ಞೆಯನ್ನು ಮಾಡುತ್ತಾನೆ—

ಷ॥ ಆದರಿಲ್ಲಿಂ ಮೇಲೆ ನಾರಿಯ । ರಾದವರು ಭಾಗೀರಥಿಗೆ ಸರಿ; । ಮೇದಿನಿಯ ಸಲಿಸುವೆನು ನಿನ್ನಯ ಮಗಳ ಮಕ್ಕಳಿಗೆ ; ॥ ಈ ದಿವಿಜರೀ ಹರಿಹರಬ್ರ । ಹ್ಮಾದಿದೇವರು ಸಾಕ್ಷಿ ಹೋಗೆಂ । ದಾ ದಯಾಂಬುಧಿ ನಗುತ ನಿನ್ನಯ ಮಗಳ ಕರಸೆಂದ —(ಕ. ಭಾರ)

ಅಂತರಿಕ್ಷದಿಂದ ದೇವವ್ರತನ ಮೇಲೆ ಹೂವಿನ ಮಳೆಯಾಯಿತು; ದೇವವ್ರತನ ಭಯಂಕರವಾದ ಪ್ರತಿಜ್ಞೆಯನ್ನು ಕೇಳಿ ದೇವತೆಗಳೆಲ್ಲರೂ "ಭೀಷ್ಮ" ಎಂದು ಅವನನ್ನು ಹೊಗಳಿದರು.

ಶ್ರು॥ ಪರೋಕ್ಷಪ್ರಿಯಾ ಇವ ಹಿ ದೇವಾಃ । ಪರೋಕ್ಷಪ್ರಿಯಾ ಇವ ಹಿ ದೇವಾಃ॥ —(ಐ. ಉ)

ಅ॥ ದೇವತೆಗಳು ಪರೋಕ್ಷವಾದ ಹೆಸರಿನಲ್ಲಿ ಪ್ರೀತಿಯುಳ್ಳವರು.

ಆದ್ದರಿಂದ ಅಂದಿನಿಂದ ಅವನು ಭೀಷ್ಮನೆಂದೇ ಪ್ರಸಿದ್ಧಿಗೆ ಬಂದನು. ಭೀಷ್ಮನೆಂದರೆ ಭಯಂಕರನೆಂದರ್ಥ. ನೈಷ್ಠಿಕಬ್ರಹ್ಮಚರ್ಯವೆಂಬ ಮಾತೇ ಎಷ್ಟೋ ಜನಕ್ಕೆ ಎದೆಯೊಡೆಯುವಂತೆ ಮಾಡುವದು. ಹೀಗೆ ತನ್ನ ಯೋಗ್ಯತೆಯಿಂದ ಪಡೆದ ಹೆಸರಿನಿಂದಲೇ ಪ್ರಸಿದ್ಧನಾಗುವ ಸುಯೋಗವು ಬಹು ಸ್ವಲ್ಪಜನರಿಗೆ ಮಾತ್ರ ಲಭಿಸುವದು. ಭೀಷ್ಮನು ತೋರಿಸಿದ ಈ ಯೋಗ್ಯತೆಯಂತು ಬಹಳ ಹೆಚ್ಚಿನದು.

ವ॥ ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು ; ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು; ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು ; ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು ; ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು ; ಇಂತೀ ಪಂಚೇಂದ್ರಿಯಂಗಳಲ್ಲಿ ಬ್ರಹ್ಮಚಾರಿಯಾಗಿ ಕೂಡಲಸಂಗಮದೇವರಲ್ಲಿ ಎನ್ನನಾಗುಮಾಡಲಿಕ್ಕೆ ಬ್ರಹ್ಮಚಾರಿಯಾದರು ಪ್ರಭುದೇವರು ॥ —(ವೀ.ವ. ಶಾ)

ದೇವವ್ರತನು ಒಳ್ಳೆ ಮನೋನಿಗ್ರಹವುಳ್ಳವನಾಗಿದ್ದದರಿಂದ ಈ ಪ್ರತಿಜ್ಞೆಯನ್ನು ಮಾಡುವನಾಯಿತೇ ಹೊರತು ಬೇರೆ ಇಲ್ಲ.—

ಸಾಂ॥ ಬತ್ತಲೆ ಪೋಪವನಿಗೆ ಚೋರರ ಭಯ । ವೆತ್ತಣದೆಂಬ ದೃಷ್ಟಾಂತ ॥
ಚಿತ್ತವ ಜಯಿಸಿದ ಭಕ್ತಗೆ ಸ್ತ್ರೀಸುತ । ವಿತ್ತವ ಗೆಲಲೇನು ಚೋದ್ಯ ॥ —(ಅ.ನು)

ಶ್ಲೋ॥ ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇ ॥ —(ಸ)

ಅ॥ ಬಹಳ ಹೆಚ್ಚಿನ ಪುಣ್ಯಪಾಪಗಳಿಗೆ ಫಲವು ಇಲ್ಲಿಯೇ ಅನುಭವಕ್ಕೆ ಬರುತ್ತದೆ.

ಎಂಬ ವಾಕ್ಯದಂತೆ ಭೀಷ್ಮನು ಮಾಡಿದ ಪುಣ್ಯತಮವಾದ ಪ್ರತಿಜ್ಞೆಯು ಒಡನೆಯೆ ಫಲಿಸಿತು. ಅವನು ಆ ಸತ್ಯವತಿಯನ್ನು ಕರೆದುಕೊಂಡುಬಂದು ತಂದೆಯ ಮುಂದಿಟ್ಟು ನಮಸ್ಕರಿಸುತ್ತಲೆ ತಂದೆಯು

ಶ್ಲೋ॥ ತಚ್ಛ್ರುತ್ವಾ ದುಷ್ಕರಂ ಕರ್ಮ ಕೃತಂ ಭೀಷ್ಮೇಣ ಶಂತನುಃ ।
ಸ್ವಚ್ಛಂದಮರಣಂ ತುಷ್ಟೋ ದದೌ ತಸ್ಮೈ ಮಹಾತ್ಮನೇ ॥ —(ಸಂ ಭಾರ)

ಅ॥ ಯಾರಿಂದಲೂ ಮಾಡುವದಕ್ಕಾಗದಂಥ ಮಹತ್ಕಾರ್ಯವನ್ನು ಭೀಷ್ಮನು ಮಾಡಿದ್ದನ್ನು ಕೇಳಿ ಶಂತನುರಾಜನು ಅವನ ವಿಷಯದಲ್ಲಿ ಸಂತುಷ್ಟನಾಗಿ ಆ ಮಹಾತ್ಮನಿಗೆ ಸ್ವಚ್ಛಂದಮರಣವೆಂಬ—ಎಂದರೆ ತನ್ನ ಇಷ್ಟಬಂದಾಗ ಮಾತ್ರ ಸಾಯುವ—ವರವನ್ನು ಕೊಟ್ಟನು.

ಇದನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಈ ಕಥೆಯ ಆರಂಭದಲ್ಲಿ ಭಾಗವತಶಿರೋಮಣಿಗಳು 'ಇರೆ ಬ್ರಹ್ಮಚರ್ಯದಿ' ಎಂದು ಆರಂಭವಾಗಿರುವ ನುಡಿಯನ್ನು ಹೇಳಿರುವರು.

ನಿಜವಾಗಿ ಈ ವರವು ಕೂಡ ಹೆಚ್ಚಿನದೆ. ಹೇಗೆಂದರೆ—

ಸಾಂ ॥ ಬಾಲಕನೆಂದು ಕೃಪೆಯ ಮಾಡಿ ಬಿಡನವ ;। ಮೇಲೆಣಿಸುವ ಹಿರಿಯರನು॥ ಪಾಲಿಸಬೇಕೆಂಬುವನಲ್ಲ ಮನದಲ್ಲಿ ॥ ಕಾಲನೆಂಬುವ ಪಾತಕನು ॥—(ದ್ವಾ. ಅ)

ಇಂಥ ಯಮುನ ಬಾಧೆಯು ಕೂಡ ತನ್ನ ಕೈ ಹಿಡಿತದಲ್ಲಿರುವದೆಂಬುದೇನೂ ಸಾಮಾನ್ಯವಲ್ಲ. ಆಮೇಲೆ—

ಕೇ॥ ಶಂತನು ಸತ್ಯವತಿಯೊಡನೆ ಜಗದೊಳ । ನಂತಭೋಗಗಳನನುಭವಿಸಿ॥
ಕಂತುಸದೃಶಸುತಯುಗ್ಮವ ಪಡೆದೋ । ರಂತ್ಯೈದಿದ ನಾಕವ ಬಯಿಸಿ ॥

ಅಲ್ಲಿಂದ ಮುಂದೆ—

ಷ॥ ಹಿರಿಯ ಚಿತ್ರಾಂಗದನು ಪಟ್ಟದೊ । ಳಿರಲು ಹೆಸರಿನ ಸಾಮ್ಯದಿಂ
ಮ । ತ್ಸರಿಸಿ ಚಿತ್ರಾಂಗದನೆನಿಪ ಗಂಧರ್ವನೈತಂದು ॥ ಧುರದೊಳವನನು ಕೆಡಹೆ
ಭೀಷ್ಮನು । ಕಿರಿಯನಾದ ವಿಚಿತ್ರವೀರ್ಯನನರಸನೆನಿಸುತೆ ಜೋಕೆಯಿಂ ರಕ್ಷಿಸುತ
ಲಿರುತಿರ್ದ ॥

ಇತ್ತ ವಿಚಿತ್ರವೀರ್ಯನು ದೊಡ್ಡವನಾದಮೇಲೆ—

ಸಾ॥ ಅನುಜಗಾಗಿ ಕಾಶೀಶನ ಸುತೆಯರ । ನನುಗೊಳಿಸಲು ಬೇಕೆಂದು ॥
ಘನಸಂರಂಭದಿ ಭೀಷ್ಮನು ಮನದೊಳು । ನೆನೆದನು ಪಯಣವನಂದು ॥

ಅಲ್ಲಿ ರಾಜರ ನಡುವೆ ಮುಂಡಿಸಿದ ಭೀಷ್ಮನನ್ನು ನೋಡಿ ಎಲ್ಲರೂ ಹಾಸ್ಯಮಾಡಿದ್ದೇನೆಂದರೆ—

ದಿಂ॥ ಮುದುಕನಾಗಿರ್ಪೀತನಿಗೆ ಮದುವೆ ಬೇಕೇ ? । ಮುದದಿ ಗೈದಿರ್ಪಾ
ಪ್ರತಿಜ್ಞೆಯಿಂದು ಸಾಕೆ ? ॥ ಅದುರುತಲೆಯವಗೀ ಪಾರುಪತ್ಯವೇಕೆ ? । ಬೆದರು
ತಿರ್ಪವಗೆಂತೊಲಿವಳಯ್ಯ ಈಕೆ ! ॥

ಎನ್ನುತ್ತಿರುವಾಗ ಭೀಷ್ಮನು ಅತಿವೇಗದಿಂದ ಕಾಶೀರಾಜನ ಮೂವರು ಕನ್ಯೆಯರನ್ನೂ ಒಮ್ಮೆಗೇ ಬಲಾತ್ಕಾರದಿಂದ ಎತ್ತಿ ಕೂಡಿಸಿಕೊಂಡು ರಥವನ್ನು ತಿರುಗಿಸಿ ಎಲ್ಲರನ್ನೂ ಕುರಿತು ಹೇಳುತ್ತಾನೆ—

ರ॥ ಬಲ್ಲೆ । ಮದುವೆಯ ಭೇದಗಳನು । ಬಲ್ಲೆ ॥ ಪ ॥ ಗುಣವತಿಯರ ದಕ್ಷಿ
ಣೆಯೊಡನೀವುದು । ಗಣನೆಯೊಳಗೆ ತಾ ಬ್ರಾಹ್ಮವೆನಿಸುವದು । ಗೋವಿಗೆ ಬದಲೆನೆ
ಕನ್ಯೆಯ ಕೊಡುವದು । ಭಾವಿಸೆ ಹರ್ಷವಿವಾಹವೆನಿಸುವದು । ಹಣವ ಕೊಂಡು
ಹುಡುಗಿಯ ಕೈ ಬಿಡುವದು । ಎಣಿಕೆಯೊಳಗದಾಸುರವೆಂದೆನಿಪುದು । ಬಲುವ್ಮೆ
ಯಿಂದ ಕನ್ಯೆಯ ಕೈ ಹಿಡಿವುದು । ತಿಳಿದವರೊಳಗದು ರಾಕ್ಷಸವೆನಿಪುದು । ಒಬ್ಬ
ರೊಬ್ಬರನು ತಾವೇ ವರಿಪುದು । ನಿರ್ಭರದಿಂ ಗಾಂಧರ್ವವೆನಿಸುವದು । ಮೋಸ
ದಿಂದಲೇ ಮದುವೆಯಾಗುವದು । ಹೇಸಿಕೆಯದು ಪೈಶಾಚವೆನಿಸುವದು । ತಮ್ಮ
ತಮ್ಮ ವೆಚ್ಚಗಳಿಂಗೆಯ್ವುದು । ಧರ್ಮದಿ ದೈವವಿವಾಹವೆನಿಸುವದು ॥

ಆದರೂ ನಮ್ಮಂಥ ಕ್ಷತ್ರಿಯರಿಗೆ—

ಶ್ಲೋ॥ ಪ್ರಮಥ್ಯ ತು ಹೃತಾಮಾಹುಃ ಜ್ಯಾಯಸೀಂ ಧರ್ಮವಾದಿನಃ ॥
(ಸಂ. ಭಾರ.)

ಅ॥ ಬಲಾತ್ಕಾರದಿಂದ ಅಪಹರಿಸುವದು ಮೇಲಾದುದೆಂದು ಧರ್ಮವಾದಿಗಳು ಹೇಳುವರು.

ಆದ್ದರಿಂದ

ಕಂ॥ ಅಪಹರಿಸುವೆ ನೀ ಮೂವರ । ನುಪಹಾಸಂಗೆಯ್ದು ನಿಮ್ಮ ಮುಂದೆಯೆ; ನಿಮ್ಮೊಳ್ ॥ ತ್ರಪೆಯುಳ್ಳೊಡೆ ಕೈದೋರಿರಿ ; । ಕೃಪೆಗೇಳುವ ದೈನ್ಯವಿಲ್ಲವೆಂದಿಗು ಮೆಮ್ಮೊಳ್ ॥

ಆಗ ಎಲ್ಲ ರಾಜರೂ ಒಟ್ಟಿಗೆ ಅವನ ಮೇಲೇರಿ ಬಂದರು. ಭೀಷ್ಮನ ಮುಂದೆ ಯಾರು ನಿಲ್ಲುವದಕಾಗುತ್ತದೆ!

ಸೂ॥ ಬ್ರಹ್ಮಚರ್ಯಪ್ರತಿಷ್ಠಾಯಾಂ ವೀರ್ಯಲಾಭಃ ॥ —(ಯೋ. ಸೂ)

ಅ॥ ಬ್ರಹ್ಮಚರ್ಯೆಯು ಚೆನ್ನಾಗಿ ನೆಲೆಗೊಂಡಿದ್ದರೆ ಹೆಚ್ಚು ಸಾಮರ್ಥ್ಯವು ಬರುತ್ತದೆ.

ಎಂಬ ವಾಕ್ಯದಂತೆ ಹೆಚ್ಚು ಸಮರ್ಥನಾಗಿದ್ದ ಅವನ ಮುಂದೆ ಎಲ್ಲರೂ ಕೈಸೋತು ಹೋದರು. ಆಮೇಲೆ ಶಲ್ಯದೇಶಾಧೀಶ್ವರನೊಬ್ಬನು ದಾರಿಯನ್ನು ಕಟ್ಟಿ ಭಯಂಕರವಾದ ಯುದ್ಧವನ್ನು ಮಾಡಿದ್ದರ ಪರಿಣಾಮವೇನಾಯಿತೆಂದರೆ—

ಕೇತಾರಗೌಳ—ಅಟತಾಳ

ಸೋಲಿಸಿದನು ಭೀಷ್ಮನು । ಶಲ್ಯಾಧಿಪತಿಯನು ॥ಪ॥ ಮೇಲುಗಾಣದೆ ಮತ್ತಗಜದಂ । ತಾಲುತಲಿ ಹದವಾದಲಗಿನಿಂ । ತಾಳಲಸದಳಮಾಗೆ ನೋಯಿಪ । ಕಾಲನಂತೆ ಕರಾಳನಪ್ಪನ ॥ಅ. ಪ॥ ಕಣ್ಣ ಕೆಂಪಗೆ ಮಾಡಿ । ತಿಣ್ಣಗೆಂಡದಿ ಸರ್ಪ । ವನ್ನು ತಾ ಸುಡುವಗ್ನಿ । ಯೆನ್ನುವಂದದಿ ತಾನು ॥ ಸನ್ನುತ ಬಾಣಂಗಳ ಬಿಟ್ಟೊಡದೆಲ್ಲ । ವನ್ನು ಕತ್ತರಿಸೆ ಖಳ । ಬೇರಿಟ್ಟೆದ್ದು । ದನ್ನು ಹೂಡಲು ಜಗಳ ಭಾರಯಿಸಲು ॥ ತನ್ನ ಬಲವನು ತೋರಿ ಬಾಣಗ । ಳನ್ನು ಬಿಡೆ ಕಾಳ್ಗಿಚ್ಚು ಕಟ್ಟೆಗೆ । ಯನ್ನು ಸುಡುವಂತಾಗೆ ಶಲ್ಯನ । ಮನ್ನಣೆಯ ಭಟರೆಲ್ಲ ಹಿಂಗಲು ॥೧॥ ವಾರುಣಾಸ್ತ್ರವ ಬಿಟ್ಟು । ಗಾರುಗೆಡಿಸಿ ಶತ್ರು । ಸಾರವ ಹೀರಿ ವಿ । ಚಾರವ ಮಾಡದೆ ॥ ಭಾರಿ ಪರಾಕ್ರಮವ । ತೋರುವೆನೆಂದು । ಸಾರಥಿಗೊರೆದೆಲ್ಲವ । ಕಟ್ಟಿದ ರಥ । ವಾರುವಂಗಳ ಛಿದ್ರವ । ಮಾಡುತೆ ಮುನ್ನ ॥ ಮೀರಿಶೌರ್ಯದಿ ಶತ್ರುರಥವನು । ಚೂರುಗೆಯ್ಯಲು ರಾಜನಾಕ್ಷಣ । ಧಾರಿಣಿಯೊಳಗೆ ನಿಂತು ದೈನ್ಯವ । ತೋರಿ ತಲೆವಾಗುತ್ತ ನಿಲ್ಲಲು ॥೨॥

ಈ ರೀತಿಯಲ್ಲಿ ಶಲ್ಯನನ್ನು ಸೋಲಿಸಿ ಆ ಕನ್ಯೆಯರನ್ನು ರಥದಲ್ಲಿ ಕೂಡಿಸಿಕೊಂಡು ಬರುವದನ್ನು ಕವಿ ವರ್ಣಿಸಿರುವದೆಂತೆಂದರೆ—

ಶ್ಲೋ॥ ಸ್ನುಷಾ ಇವ ಸ ಧರ್ಮಾತ್ಮಾ ಭಗಿನೀರಿವ ಚಾನುಜಾಃ । ಯಥಾ ದುಹಿತರಶ್ಚೈವ ಪರಿಗೃಹ್ಯ ಯಯೌ ಕುರೂನ್ ॥ —[ಸಂ. ಭಾರ]

ಅ॥ ಆ ಧರ್ಮಾತ್ಮನಾದ ಭೀಷ್ಮನು ಸೊಸೆಯರಂತೆ, ಒಡಹುಟ್ಟಿದ ತಂಗಿಯರಂತೆ, ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಂತೆ (ಆ ಕನ್ಯೆಯರನ್ನು) ಕರೆದುಕೊಂಡು ತನ್ನ ದೇಶಕ್ಕೆ ಹೋದನು.

ಆಗಿನ ಭೀಷ್ಮನ ರಥಾಶ್ವಗಳ ವೇಗವನ್ನು ಕವಿ ವರ್ಣಿಸಿರುವದೆಂತೆಂದರೆ—

ಶ್ಲೋ॥ ಆಲಿಂಗಂತೋ ವಸುಧಾಂ ನಿಜಖುರದಲಿತಾಮಿವಾನುನೇತುಮಮಿಾ॥
ವದನವಿನಿರ್ಗತಚರಣಾ ಇವ ಲಕ್ಷ್ಯಂತೇ ಜವಾದಶ್ವಾಃ ॥ —(ಸು)

ಅ॥ ಕುದುರೆಗಳು ವೇಗದ ಭರದಲ್ಲಿ ತಮ್ಮ ಗೊರಸುಗಳಿಂದ ಎಬ್ಬಿದ ಭೂಮಿಯನ್ನು ತರುವದಕ್ಕಾಗಿ ಆದನ್ನು ಆಲಿಂಗನೆ ಮಾಡಿಕೊಂಡಿರುವವುಗಳಾಗಿ ಕಾಲುಗಳು ಬಾಯಿಂದ ಹೊರಟಿರುವಂತೆ ಕಾಣುತ್ತಿದ್ದವು.

ಭೀಷ್ಮನು ಆ ಮೂವರನ್ನೂ ವಿಚಿತ್ರವೀರ್ಯನಿಗೆ ಮದುವೆಯನ್ನು ಮಾಡಬೇಕೆಂದು ಯತ್ನಿಸುತ್ತಿರುವಾಗ ಹಿರಿಯವಳಾದ ಅಂಬೆ ಹೇಳಿದ್ದೇನೆಂದರೆ—

ಸಾಂ॥ ವರಿಸಿರುವೆನು ಸಾಲ್ವನ ನಾನು ಮನದೊಳು; । ವರಿಸಿಹನವನು ನನ್ನನ್ನು; ॥ ಹಿರಿಯರ ಸಮ್ಮತಿಯದಕಿದ್ದುದದನೆಲ್ಲ । ವರಿತೆಸಗುವದು ಧರ್ಮವನು ॥

ಆಗ ಭೀಷ್ಮನು ಬ್ರಾಹ್ಮಣರ ಸಭೆಯಲ್ಲಿ ಈ ವಿಚಾರವನ್ನು ತೆಗೆದಿದ್ದಾನೆ—

ಷ॥ ತರಳೆಯನ್ಯಾಸಕ್ತೆಯಾದೊಡೆ, । ನೆರೆ ವಚನದಿಂ ದತ್ತಳಾದೊಡೆ, । ಪರಿಕಿಸೆ ಮನೋಮಾತ್ರದಿಂದಮೆ ದತ್ತಳಾದೊಡೆಯುಂ, ॥ ಪರನವಳ ವರಿಸಿರ್ದೊಡಂ, ಸ । ತ್ಪುರುಷರವಳಂ ಬಿಡುವುದೆಂದಾ । ನರಿತು ಬಿಡುವೆನು ಗೆದ್ದು ತಂದೀ ಅಂಬೆಯೆಂಬುವಳ ॥

ಆಮೇಲೆ—

ಕೀ॥ ಅಂಬಿಕೆಯಂಬಾಲಿಕೆಯೆಂಬುವರನು । ಸಂಭ್ರಮದೊಳು ತನ್ನನುಜನಿಗೆ ॥ ಕುಂಭಿನಿಯೊಡನಿರೆ ಮದುವೆಯ ಗೈದನು । ತಾಂ ಭೀಷ್ಮನು ಜನ ಬೆರಗಾಗೆ॥

ಇತ್ತ ಅಂಬೆಯು ಸಾಲ್ವರಾಜನ ಬಳಿಗೆ ಬಂದು ಹೇಳಿದ್ದೇನೆಂದರೆ—

ಸಾಂ॥ ಮೊದಲೆ ನಿನ್ನನು ನಾನು ವರಿಸಿದ ಕಾರಣ। ಇದೊ ಬಂದೆ ಭೀಷ್ಮನನುಳಿದು ; ಮದುವೆಯೊಗದೆಹೋದೆನವನ ತಮ್ಮನ ನಾನು ; । ಮದುವೆಯಾಗೆನ್ನನೀ ತಿಳಿದು ॥

ಅದಕ್ಕೆ ಭೀಷ್ಮಗೆ ಹೆದರಿದ ಸಾಲ್ವನ ಉತ್ತರ—

ಕಂ॥ ಎಲೆ ತರಳೆ, ಪರರ ಹಸ್ತಕೆ । ಸಿಲುಕುತೆ ಪರಗೃಹದೊಳಿರ್ದು ಬಂದೀ ನಿನ್ನೀ ॥ ಒಲುಮೆಯ ಮನ್ನಿಸಲಾರೆಂ ; । ತಳರ್ವುದು ನೀಂ ನಿನ್ನ ಗೆಲ್ದ ಪುರುಷನ ಬಳಿಯಂ ॥

ಆಗ ಅಂಬೆಯು ಭೀಷ್ಮನ ಬಳಿಗೆ ತಿರುಗಿ ಬಂದು ಹೇಳಿಕೊಳ್ಳುತ್ತಾಳೆ—

ಮೋಹನ—ಆಟತಾಳ

ಹಿಡಿಯೆನ್ನ ಕೈಯ ನೀನು । ರಾಜಕುಮಾರ ॥ ಬಿಡುವೆ ನೀಯೆಂತೆನ್ನನು ॥ಪ॥ ಬಿಡದೆಲ್ಲರಾಜರ । ನಡುವೆ ನೀ ಯೆನ್ನನು ಹಿಡಿದು ತಂದಮೇಲೆ। ಬಿಡುವಾ..ಎನ್ನೇನು ॥ಅ. ಪ॥ ಮೊದಲು ನಾ ವರಿಸಿರ್ದ ರಾಜಪುತ್ರನು ತಾನು ।

ಹೆದರಿರುವನು ನಿನ್ನ ಭುಜವೀರ್ಯಕೆ ॥ ಮದುವೆಯಾಗನು ನನ್ನನಿನ್ನೇನಮಾಡಲಿ । ಚದುರನೆ ನೋಡೆನಗೊದಗಿಹೆ ಸ್ಥಿತಿಯನು ॥೧॥ ಕುಲದ ಕನ್ಯೆಯು ನಾನು ಕಂಡ ಕಂಡವರನು ॥ ಬಲುಹಿಂದ ವರಿಸುವದನುಚಿತವು ॥ ಗೆಲಿದಿಹೆ ನೀನೆನ್ನನದರಿಂದ ನಿನಗೆ ನಾ । ಲಲನೆಯಪ್ಪುದೆ ಯೋಗ್ಯವಾಗಿ ತೋರ್ಪುದರಿಂದ ॥೨॥

ಆಗ ಭೀಷ್ಮನು ಹೇಳಿದ್ದು

ಸಾ॥ ಮದುವೆಯಾಗಿ ನಾಂ ಬ್ರಹ್ಮಚರ್ಯವೆಂ । ಬುದ ಬಿಡೆ ಕೇಳಿದು ಸಹಜ; ॥
ಮುದದೊಳನ್ಯನನು ವರಿಸಿದವಳ ಕೈ । ಗೊಡಗುವನೆಂತೆನ್ನನುಜ ॥

ಭೀಷ್ಮರ ಈ ನಡೆವಳಿಯನ್ನು ನೋಡಿ ಬರೆದಂತೆ ಕವಿ ಚಮತ್ಕಾರವಾಗಿ ಹೇಳಿರುವದೇನೆಂದರೆ—

ಶ್ಲೋ ॥ ಉಪಸರ್ಗಪ್ರಕಾರೋಽಪಿ ನಿರ್ಮಿತಃ ಸಮ್ಮುಖೇ ಯದಿ । ನೈವ ಸ್ವಭಾವನೈಕಲ್ಯಂ ವರಾಣಾಂ ಜಾಯತೇ ಕ್ವಚಿತ್ ॥ —(ಸು. ಲಾ)

ಅ॥ (೧) ಶ್ರೇಷ್ಠಮನುಷ್ಯರ ಮುಂದೆ (ಉಪಸರ್ಗ + ಪ್ರಕಾರ) ಉಪಮರ್ದವನ್ನುಂಟು ಮಾಡಿದರೂ ಅವರ ಸ್ವಭಾವದಲ್ಲಿ ಸ್ವಲ್ಪವಾದರೂ ಹೆಚ್ಚು ಕಡಿಮೆಯಾಗುವದಿಲ್ಲ. (೨) ಹೇಗೆಂದರೆ—(ಉಪಸರ್ಗ + ಪ್ರ + ಕಾರ) ಉಪಸರ್ಗವಾದ "ಪ್ರ" ಎಂಬಕ್ಷರವನ್ನು ತಂದು "ವರ" ಎಂಬ ಶಬ್ದದ ಮುಂದಿಟ್ಟರೂ ಅದು (ಪ್ರವರ) ಹೆಚ್ಚು ಶ್ರೇಷ್ಠವೆನಿಸುವುದೇ ಹೊರತು ಕಡಿಮೆಯದೆನಿಸುವದಿಲ್ಲ.

ಭೀಷ್ಮರನ್ನು ಕುರಿತು ಅಂಬೆಯು ಕೋಪದಿಂದ ಹೇಳಿದ್ದೇನೆಂದರೆ—

ಸಾಂ॥ ತಾನಾಗಿ ಬಂದೆನಗೊಲಿಯದ ಷಂಢನೆ । ಕಾಣಿಪೆನೆನ್ನಯ ಬಲವ॥ ಮಾಣದೆನ್ನಯ ಪ್ರಾಯವನು ವ್ಯರ್ಥಗೈವನ । ದೀನಗೈವೆನು ನೋಡು ಚಲವ ॥

ಆಗ ಭೀಷ್ಮರು ಆಡಿದ ಮಾತು—

ಕಂ॥ ತಾನಾಗಿ ಬಂದ ತರುಣಿಯ ನೇನುಂ । ಲೆಕ್ಕಿಸದ ಪುರುಷನೊಬ್ಬನೆ ಪುರುಷಂ ॥ ತಾನವಳನಧೀನನಪ್ಪನ ನೀ । ನರಜನ್ಮದೊಳಗುದಿಸಿ ತೋರ್ಪ ಪುರೀಷಂ॥

ಟಿ॥ ಪುರೀಷಂ - ಮಲ.

ಇತ್ತ ಅಂಬಿಕೆಯು ಭೀಷ್ಮನನ್ನು ಹೇಗಾದರೂ ಒಲಿಸಿಕೊಳ್ಳಬೇಕೆಂದು ಅವನ ಶಸ್ತ್ರವಿದ್ಯಾ ಗುರುಗಳಾದ ಪರಶುರಾಮರ ಬಳಿಗೆ ಹೋಗಿ ಅವರ ಪರಿಚರ್ಯೆಯನ್ನು ಮಾಡಿ ಅವರ ದಾಕ್ಷಿಣ್ಯದಿಂದ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ಅವರನ್ನು ಕರೆದುಕೊಂಡು ಬಂದಾಗ ಭೀಷ್ಮನು ಅವರಿಗೆ ಕೊಟ್ಟ ಉತ್ತರ—

ಷ॥ ಸತಿಯನೊಲ್ಲೆನು ; ಬ್ರಹ್ಮಚರ್ಯ । ಸ್ಥಿತಿಗೆ ತಪ್ಪುವನಲ್ಲ ; ನೀವನು । ಚಿತವನೆನೆದರೆ ನಡೆಯಿ ; ಕೊಟ್ಟೆನು ಖಳನ ಕಾಳಗವ ॥ —(ಕ. ಭಾರ)

ಈ ಮಾತಿನ ಪರಿಣಾಮವೇನಾಯಿತೆಂದರೆ—

ಷ॥ ವ್ರತದ ನಿಧಿ ಕುರುಭೂಮಿಯಲಿ ಶರ । ತತಿಯಲಿಪ್ಪತ್ತೊಂದು ದಿನ

ಭೃಗು । ಸುತನೊಡನೆ ಕಾದಿದನು ; ವಿರಥನ ಮಾಡಿದನು ಭೀಷ್ಮ ॥ —(ಕ. ಭಾರ)

ಈ ಜಯಕ್ಕೆ ಕಾರಣವೇನೆಂದರೆ—

ಶ್ಲೋ॥ ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಜಯಃ ।
ಯೇಷಾಮಿಂದೀವರಶ್ಯಾಮೋ ಹೃದಯಸ್ಥೋ ಜನಾರ್ದನಃ —(ಸು)

ಅ॥ ಯಾರ ಹೃದಯದಲ್ಲಿ ಕನ್ನೈದಿಲೆಯ ಕಾಂತಿಯುಳ್ಳ ಪರಮಾತ್ಮನಿರುವನೊ ಅವರಿಗೆ ಲಾಭ ; ಅವರಿಗೆ ಜಯ ; ಅವರಿಗೆ ಅಪಜಯ ಹೇಗಾದೀತು !

ಬ್ರಹ್ಮಚರ್ಯವೆಂದರೆ ಬರೀ ಸ್ತ್ರೀಗೋಷ್ಠಿಯನ್ನು ಬಿಟ್ಟಿರುವದಷ್ಟೇ ಅಲ್ಲ. ಪರಬ್ರಹ್ಮಸ್ವರೂಪದಲ್ಲಿಯೇ ಮನಸ್ಸನ್ನಾಡಿಸುತ್ತಿರುವದು ಉತ್ತಮಬ್ರಹ್ಮಚರ್ಯ. ಭೀಷ್ಮರಲ್ಲಿ ಬ್ರಹ್ಮಚರ್ಯದ ಈ ಎರಡು ಮುಖಗಳೂ ತೇಜಸ್ವಿಯಾಗಿದ್ದವು. ಭೀಷ್ಮರ ಈ ಬ್ರಹ್ಮಚರ್ಯವ್ರತದ ದಾರ್ಢ್ಯದ ವಿಷಯದಲ್ಲಿ ಕವಿ ಹೇಳಿರುವದೇನೆಂದರೆ—

ಷ॥ ನುಡಿಯ ಭಂಗಿಸಲೆಂದು ಗುರುವವ । ಘಡಿಸಿ ಹೊಕ್ಕರೆ ಸರಳ ಮೊನೆಯಲಿ । ಕೊಡಹಿ ಬಿಸುಟನು ಬಿಟ್ಟುದಿಲ್ಲ ಮಹಾವ್ರತಸ್ಥಿತಿಯ ॥ —(ಕ. ಭಾರ)

ಬ್ರಹ್ಮಚರ್ಯದ ಈ ಪ್ರಭಾವವನ್ನು ತೋರಿಸುವದಕ್ಕಾಗಿಯೇ ಪೀಠಿಕೆಯಲ್ಲಿ "ವರಬ್ರಹ್ಮಚರ್ಯದಿ" ಎಂದು ಮೊದಲಾಗಿರುವ ನುಡಿಯು ಹೊರಟಿರುವದು.

ಕೊನೆಗೆ ಪರಶುರಾಮರು ಅಂಬೆಗೆ ಹೇಳಿದ್ದೇನೆಂದರೆ—

ಷ॥ ನುಡಿಯ ಮೀರದ ನಮ್ಮ ಶಿಷ್ಯನ । ನೊಡಬಡಿಸಿಕೊಳ್ಳೆಂದು ನಾರಿಗೆ । ನುಡಿದು ತನ್ನಾಶ್ರಮಕೆ ಸರಿದನು ಪರಶುರಾಮಮುನಿ॥ —(ಕ. ಭಾರ)

ಇತ್ತ ಅಂಬೆಯು ತನ್ನ ಪ್ರಯತ್ನವನ್ನು ಇನ್ನೂ ಮುಂದುವರಿಸಿ—

ಷ॥ ಸುರಿಸುತಲಿ ಕಣ್ಣೀರ ; ಮಿಂಚಿನ। ತೆರದಿ ತಿರುಗುತ; ವರಹಿಮಾದ್ರಿಯ । ನೆರೆಯ ಬಾಹುದವೆಂಬ ನದಿಯೊಂದೆಡೆಯ ತೀರದಲಿ ॥ ಕರಣಗಳ ನಿಗ್ರಹಿಸಿ ಸಕಲಾ । ಮರರು ಬೆದರುವ ತೆರದಿ ನೆಲದೊಳ । ಗಿರಿಸಿ ಹೆಬ್ಬೆಟ್ಟೊಂದ ಗೆಯ್ದಳು ಘೋರತಪವನ್ನು ॥

ಆ ಸಮಯದಲ್ಲಿ ಅವಳು ಮನಸ್ಸಿನಲ್ಲಿ ಕೃಷ್ಣನ ಧ್ಯಾನವನ್ನು ತಂದುಕೊಂಡಿದ್ದಾಳೆ. ಏಕೆಂದರೆ—

ಶ್ಲೋ ॥ ಮೃತ್ಯುದಕಾರ್ದಘಾದ್ಘೋರಾತ್ತ್ರಾತುಂ ಮುಗ್ಧಜನಂ ಪ್ರತಿ ।
ಕತಮೋ ನಾಮ ಕುಶಲೋ ವಿನಾ ಕೃಷ್ಣಂ ಕೃಪಾರ್ಣವಮ್॥ —(ಸು. ಲಾ)

ಅ॥ [೧] ಕೃಪಾಸಾಗರನಾದ ಕೃಷ್ಣನ ಹೊರತು ಮೃತ್ಯುರೂಪವಾದ ಫಲವನ್ನು ಕೊಡುವಂಥ ಭಯಂಕರವಾದ [ಅಘಾತ್] ಪಾಪದಿಂದ ಮೂಢಜನರನ್ನು ದಾಟಿಸುವ ಕುಶಲರು ಬೇರೆ ಯಾರಿದ್ದಾರೆ ? [೨] ಮುಂದರಿಯದ ಗೋಪಾಲರನ್ನು ಹಿಂಸಕನಾದ [ಅಘಾತ್] ಅಘಾಸುರನ ದೆಸೆಯಿಂದ ರಕ್ಷಣೆಮಾಡುವ ಕುಶಲರು ಬೇರೆ ಯಾರಿದ್ದಾರೆ?

ಹೀಗೆಂದು ಅವಳು ಕೃಷ್ಣನನ್ನು ಪ್ರಾರ್ಥಿಸುತ್ತಿದ್ದದ್ದೆಂತೆಂದರೆ—

ಜೊ॥ ದೇವನೊಬ್ಬನೆ ನೀನು ಈ ವಸುಂಧರೆಗೆ, ಭಾವಿಸುವ ಭಕ್ತರೊಳು ನಿನಗೆ ಬಹು ಸಲುಗೆ, ಆವನೀ ಗುಟ್ಟನರಿವನು ಧರಣಿಯೊಳಗೆ, ಕಾವವರ ಕಾವ ನೀ ದೇವತೆಗಳೊಳಗೆ, ಕೇವಲ ಸುಖಾತ್ಮನೇ ಕಾಣೆನ್ನ ಕಣ್ಗೆ, ಕೈವಲ್ಯದಾತನಲ್ಲವೆ ಮಾನವರಿಗೆ, ಜಾವಜಾವದಿ ತೋರುತಿರು ನೆನಹಿನೊಳಗೆ, ಜೀವರನು ಪೊರೆವನಲ್ಲವೆ ಗರ್ಭದೊಳಗೆ, ಠಾವ ಕರುಣಿಪುದೆನಗೆ ನಿನ್ನ ಪದದೊಳಗೆ, ಪಾವನರ ಪಾವನನೆ ನಿಲ್ಲು ಮನದೊಳಗೆ। ಮುಕ್ತರಿಗೆ ಪರಮಗತಿ ನೀನು, ಶಕ್ತರಿಗೆ ಬೆಂಬಲವು ನೀನು, ಯುಕ್ತಿಗಳ ಜೀವನವು ನೀನು,ಸೂಕ್ತಗಳ ವಿಷಯನೂ ನೀನು, ಭಕ್ತಿಭಾವನನು ನೀನು। ಪುರುಷೋತ್ತಮಾಖ್ಯನೆನಿಸಿಹನೆ, ಕರಿರಾಜವರದನಾದವನೆ, ಗರುಡವಾಹನನಾಗಿರುವನೆ, ಗುರುಕೃಪಾಲಭ್ಯನಾದವನೆ, ಗುರಿಯಾಗಿ ಮುನಿಜನದೊಳಿಹನೆ, ಚರಣದೊಳು ಗಂಗೆಯನು ಸುರಿಸಿರುವನೆ, ತಿರುಪತಿಯೊಳಾವಗಲು ನೆಲಸಿರುವನೆ, ನರಸಿಂಹರೂಪವನು ಧರಿಸಿದವನೆ, ಪರಮಪುಣ್ಯೋತ್ಕರಕೆ ನಿಲುಕುವವನೆ, ಅರಿವು ಮರವೆಗಳನ್ನು ಮೀರಿದವನೆ, ಶರಧಿಯೊಳು ಹಾಯಾಗಿ ಮಲಗಿರುವನೆ, ವರಲಕ್ಷ್ಮಿಗೆ ರೆಯನೆಂದೆನಿಸಿದವನೆ, ಹರಣಕ್ಕೆ ಸಂತಸವನೀಯುವವನೇ ॥

ಆಗ ವಿಷ್ಣುವಿನಿಂದ ಆಜ್ಞಪ್ತನಾಗಿ ಬಂದ ದೇವಸೇನಾಪತಿಯು ಪ್ರತ್ಯಕ್ಷನಾಗಿ ಅಂಬೆಗೆ ಹೇಳಿದ್ದೇನೆಂದರೆ—

ದಿಂ॥ ಚಲಿಸನಾ ಭೀಷ್ಮಂ ಬ್ರಹ್ಮಚರ್ಯದಿಂದ। ಫಲವದೇನಿನ್ನಂಥವನ ಬಯಕೆಯಿಂದ। ಚಲವು ತೀರಲ್ಕೊಳ್ಪುಷ್ಪಮಾಲೆಯನ್ನು । ತಳೆವನಾವನಿದಂ ಕೊಲ್ವನಾತನನ್ನು ॥

ಹೀಗೆ ದೇವತೆಗಳು ಪ್ರತ್ಯಕ್ಷರಾಗುವದು ಅಸಂಭವವೆಂದು ಈಗಿನವರಿಗೆ ತೋರಿದರೂ—

ಸೂ॥ ಸ್ವಾಧ್ಯಾಯಾದಿಷ್ಟದೇವತಾಸಂಪ್ರಯೋಗಃ ॥ —(ಯೋ. ಸೂ.)

ಅ॥ ಮಂತ್ರಪುರಶ್ಚರಣೆಯಿಂದ ಬೇಕಾದ ದೇವತೆಯು ಪ್ರತ್ಯಕ್ಷವಾಗುವದು.

ಅಂಬೆಯು ಕೊನೆಗೆ ಭೀಷ್ಮರಿಗೆ ಮರಣವನ್ನುಂಟುಮಾಡುವವನನ್ನಾದರೂ ಗೊತ್ತುಮಾಡಬೇಕೆಂದು ಆ ಹಾರವನ್ನು ತೆಗೆದುಕೊಂಡು ಬೇರೆಬೇರೆ ರಾಜರ ಬಳಿಗೆ ಹೋಗಿ—

ಸಾ॥ ಇದ ಧರಿಸಲು ನೀವೀಗಳೆ ಭೀಷ್ಮನ। ನೆದುರಿಸಬಹುದೆನಲಾಕೆ ॥ ಸದರವಲ್ಲವೆಂದರು ; ಹೇಡಿಗಳಿಗೆ। ಒದಗಿದ ಹೂವೇ ಸಾಕೇ? ॥

ಕೊನೆಗೇನಾಯಿತೆಂದರೆ—

ಸಾಂ॥ ಕೊನೆಗದ ಪಾಂಚಾಲರಾಯನಾಸ್ಥಾನದ। ಕೊನೆಯೊಳಗದನಿಡುತಂಬೆ ॥ ಮನಬಂದ ಕಡೆಗೆಂದು ಪೋದಳಲ್ಲಿಂದಾದು। ದನು ಮುಂದಿನ್ನೇನನಾನೆಂಬೆ॥

ಆಮೇಲೆ ದ್ರುಪದರಾಜನ ಮಗಳಾದ ಶಿಖಂಡಿನಿಯು ಅದನ್ನು ಧರಿಸಿಬಿಟ್ಟಳು. ಭೀಷ್ಮನ ಭಯದಿಂದ ದ್ರುಪದನು ಆ ಮಗಳನ್ನು ತೊರೆದನು. ಶಿಖಂಡಿನಿಯು ಗಂಗಾದ್ವಾರದಲ್ಲಿ ಗಂಧರ್ವರಾಜನಾದ ತುಂಬುರನನ್ನು ಆರಾಧಿಸಿ ಪುರುಷತ್ವವನ್ನು ಪಡೆದು ಭೀಷ್ಮನ ಮೃತ್ಯುವಾಗಿ ಬೆಳೆದನು.

ಅದರ ಮಾತಿರಲಿ. ಭೀಷ್ಮನು ತನ್ನ ಬ್ರಹ್ಮಚರ್ಯರಕ್ಷಣೆಗಾಗಿ ಅಂಬೆಯೆಂಬ ಯಾವಳೋ ಒಬ್ಬ ಸ್ತ್ರೀಯನ್ನುಲ್ಲಂಘಿಸಿದ್ದಿಷ್ಟೇ ಅಲ್ಲ ; ಮುಂದೇನಾಯಿತೆಂದರೆ—

ಷ॥ ನವಯುವತಿಯಹೆರಿಬ್ಬರೊಡನಾ । ಭುವನದೊಡೆಯ ವಿಚಿತ್ರವೀರ್ಯನು । ನವನವವಿಲಾಸದೊಳು ಕಾಮುಕನಾಗಲೆಡೆಬಿಡದೆ ॥ ಸವನಿಸಲ್ ಕ್ಷಯವ್ಯಾಧಿಯಿನದು । ಸವೆಯದಾ ನರಲೋಕಪಾಲನ । ಜವನ ನಗರಿಗೆ ಕೊಂಡು ಪೋದುದು ಮರುಗಲಬಿಳಜನ ॥

ಆಗ ಅಂಬಿಕಾಂಬಾಲೆಯರು ದುಃಖಿಸಿದ್ದೇನೆಂದರೆ—

ತೋಡಿ—ರೂಪಕ

ಎಂತು ನಾವು ಜೀವಿಸುವೆವು । ನೀನಿಂತು ಹೋದರೆ ॥ ಪ ॥ ಬಂತೆಮಗತಿ ದುಃಖದ ದೆಸೆ। ಕಾಂತನಗಲೆ ಮತ್ತೇನಾಸೆ ॥ಅ. ಪ ॥ ನೀನೆ ಎಮ್ಮ ಮಂಗಲ ಸೂತ್ರ । ನೀನೆ ಎಮ್ಮ ಪ್ರೇಮ ಪಾತ್ರ ॥ ನೀನೆ ಎಮ್ಮ ಬಿಟ್ಟು ಹೋದರೆ । ಕಾಣೆ ನೆಮ್ಮ ಗತಿ ವಿಚಿತ್ರ ॥ ೧ ॥ ದಿಕ್ಕುಗೆಟ್ಟೀಗ ನಾವು । ಕಕ್ಕುಲಿತೆಯ ತಾಳಿದೆವು ॥ ತಕ್ಕ ಗತಿಯ ಕಾಣದಾದೆವು । ದುಃಖಕ್ಕೆ ನಾವ್ ಗುರಿಯಾದೆವು ॥ ೨ ॥ ನೋಡುವೆವಿನ್ನಾರನಿನ್ನು । ಆಡುವೆವಿನ್ನೇನನಿನ್ನು ॥ ಮಾಡುವೆವಿನ್ನೇನನಿನ್ನು । ಕಾಡಪಾಲೆ ಆದೆವಿನ್ನು ॥೩॥

ಇದನ್ನು ನೋಡಿ ಸತ್ಯವತಿಯು ವಂಶೋದ್ಧಾರಕ್ಕಾಗಿ ಭೀಷ್ಮನನ್ನು ಕುರಿತು ಕೇಳಿಕೊಳ್ಳುತ್ತಾಳೆ.—

ಬೇಗಡೆ—ರೂಪಕ

ಮದುವೆಯಾಗು ಮಗನೆ ನೀನು । ಮುದದಿಂ ಕುಲವಿದು ಬೆಳೆಯಲು ॥ ಪ ॥ ಇದ ನೀನುಪೇಕ್ಷೆಗೈದರೆ । ಹದಗೆಡುವದು ಕುಲವು ಕೇಳು ॥ಅ. ಪ. ॥ ಎನ್ನ ಮಕ್ಕಳಳಿದರಿನ್ನು । ಇನ್ನು ಕಾಣೆ ಕಾವರನ್ನು ॥ ನಿನ್ನ ಮದುವೆಯಿಂದ ವಂಶ । ವನ್ನು ಮಾಡು ಧನ್ಯವನ್ನು ॥ ೧ ॥ ಕಡಿಯ ಬೇಡ ವಂಶಲತೆಯ । ತೊಡೆಯಬೇಡ ಕುಲದ ಕೀರ್ತಿಯ ॥ ನಡೆಯಬೇಡ ಹಠದ ಹಾದಿಯ । ಪಡೆಯಬೇಡ ನೀನಪಕೀರ್ತಿಯ ॥ ೨ ॥ ಮೀರಬೇಡವೆನ್ನ ಮಾತ । ತೋರು ದಯೆಯ ಯುವಕವ್ರಾತ ॥ ಧೀರ ತನವ ತೋರು ಸತಿಯ । ಸೇರಿ ನೀನು ಸುಪ್ರಖ್ಯಾತ ॥೩॥

ಆಗ ಭೀಷ್ಮನು ಹೇಳುತ್ತಾನೆ.—

ಕಂ ॥ ಪಿತಗಾಗಿ ಬ್ರಹ್ಮಚರ್ಯ । ವ್ರತಮಂ ಕೈಕೊಂಡು ನಡೆಸುತದ ಬಿಡಲೀಗಳ್ ॥ ಕ್ಷಿತಿಯೊಳಗಕೀರ್ತಿಕರಮಿದು । ಹಿತಮಿದರಿಂ ಮರಣಮೆಂದುಮೆಂಬೆಂ ಜಗದೊಳ್ ॥

ಅದಕ್ಕೆ ಸತ್ಯವತಿ ಹೇಳುತ್ತಾಳೆ—

ಸಾಂ|| ಪಿತನಂತೆ ಮಾತೆ ಸಂಭಾವ್ಯಳಲ್ಲವೆ ಧರ್ಮ |ಸ್ಥಿತಿಗತಿಗಳನೆಲ್ಲ ನೋಡು॥ ಸುತನೆಂದು ನೇಮವ ಮಾಳ್ಪೆ ನಿನಗೆ ನಾನು | ಸುತರ ಪಡೆವ ಯತ್ನಮಾಡು ॥

ಅದಕ್ಕೆ ಭೀಷ್ಮನ ಉತ್ತರ—

ಶ್ಲೋ॥ ಪರಿತ್ಯಜೇಯಂ ತ್ರೈಲೋಕ್ಯಂ ರಾಜ್ಯಂ ದೇವೇಷು ವಾ ಪುನಃ । ಯದ್ವಾಪ್ಯಧಿಕಮೇತಾಭ್ಯಾಂ ನ ತು ಸತ್ಯಂ ಕಥಂ ಚ ನ ॥ —(ಸಂ. ಭಾರ.)

ಅ॥ ಮೂರು ಲೋಕವನ್ನೇ ಆಗಲಿ, ಸ್ವರ್ಗಾಧಿಪತ್ಯವನ್ನೇ ಆಗಲಿ, ಅಥವಾ ಇವೆರಡಕ್ಕಿಂತ ಹೆಚ್ಚಿದ್ದನ್ನೇ ಆಗಲಿ ಬಿಟ್ಟೇನೇ ಹೊರತು ಎಷ್ಟು ಮಾತ್ರವೂ ಸತ್ಯವನ್ನು ಬಿಡಲಾರೆನು.

ಮತ್ತು ತಾಯೇ, ಎಷ್ಟು ಹೇಳಿ ಏನು ಪ್ರಯೋಜನ ?

ಷ॥ ನೆಲವು ಗಂಧವ, ಜಲವು ರಸವನು, | ತೊಳಪ ತೇಜವು ರೂಪವನು, ಮೇ | ಣಲೆವನಿಲನುಂ ಸ್ಪರ್ಶವನುಮಾಗಸವು ಶಬ್ದವನು || ಕಳೆದೊಡಂ,ಭೂಗೋಳಮೆ ರಸಾ | ತಳಕಿಳಿದೊಡಂ, ಹಿಡಿದ ವ್ರತವನು । ಕಳೆಯಲೊಲ್ಲೆನು; ಭೀಷ್ಮನೆಂದುಂ ಬ್ರಹ್ಮಚಾರಿಯಲೆ! ॥

ಈ ಪ್ರಕಾರ ಭೀಷ್ಮನ ಮನಸ್ಸನ್ನು ಬಹಿರಂಗಪರಿಸ್ಥಿತಿಗಳು ಎಷ್ಟು ಸೆಳೆದರೂ ಕೂಡ ಭೀಷ್ಮನು ತನ್ನ ನಿಶ್ಚಯವನ್ನು ಕದಲಗೊಡಲಿಲ್ಲ. ಇದೇ ಉತ್ತಮರ ಲಕ್ಷಣ.

ಕಂ॥ ಚಿತ್ತದ ತೆರದಿಂ ನುಡಿ, ಮೇ । ಣ್ಗೊತ್ತಾದಾ ನುಡಿಯ ತೆರದೆ ನಡೆಯುಂ ಮತ್ತಂ ॥ ಚಿತ್ತಂ, ನಡೆ, ನುಡಿ– ಮೂರುಂ | ಪತ್ತುಗೆಗೊಂಡಿರ್ಪುವೆಂದು ಮುತ್ತಮಜನರೊಳ್ ||. —(ನ. ಶ.)

ಇಂಥ ಉತ್ತಮತ್ವವನ್ನು ಎಲ್ಲರೂ ಪಡೆಯಲೆಂದೇ ಕೀರ್ತನಾರಂಭದಲ್ಲಿ ಭಾಗವತಶಿರೋಮಣಿಗಳು 'ಬ್ರಹ್ಮಚರ್ಯವ ಪಾಲಿಸೊ' ಎಂದು ಮೊದಲಾಗಿ ಉಪದೇಶವನ್ನು ಮಾಡಿರುವರು.

ಭಜನಾವಲಿ

(೧) ರಾಧಾಕೃಷ್ಣ, ಜಯ ಕುಂಜವಿಹಾರೀ, ಮುರಲೀಧರ, ಗೋವರ್ಧನಧಾರೀ।
ಶಂಖಚಕ್ರ ಪೀತಾಂಬರಧಾರೀ, ಕರುಣಾಕರ, ಶ್ರೀಕೃಷ್ಣ, ಮುರಾರಿ ||

(೨) ನಂದಕುಮಾರ, ನವನೀತಚೋರ, ಬೃಂದಾವನಲೋಲ, ।
ಬೃಂದಾವನದಲಿ ತಾಂಡವವಾಡುವ ವೇಣುಗಾನಲೋಲ ॥

(೩) ಸೀತಾಪತೇ, ದಾಶರಥೇ, ರಾಮ, ದಶರಥನಂದನ, ದಯಾನಿಧೇ ।
ರಾಧಾಪತೇ, ಪಾರ್ಥಸಖೇ, ಕೃಷ್ಣ, ದೇವಕೀನಂದನ, ದಯಾನಿಧೇ ॥

(೪) ಜಯಜಯ ನರಹರಿ, ನಾರಾಯಣ । ಪಾಹಿ ವಿಭೋ ಮಾಂ ಕೃಪಾಘನ ॥

(೫) ಶ್ರೀನಾರಾಯಣ,ಜಯನಾರಾಯಣ, ಜಯಜಯನಾರಾಯಣ,ನಾರಾಯಣ॥

ದ್ರೌಪದೀಜನ್ಮ

ಪೀಠಿಕೆ—ಗುಣಗ್ರಹಣೆ.

ಕಮಾಚು—ಅಟತಾಳ

ಬಹು ದೊಡ್ಡ ಗುಣವಿದು ಜಗದೊಳಗೆ | ಗುಣ | ಗ್ರಹಣತತ್ಪರನಾಗುವದ ನೆಟ್ಟಗೆ ॥ ಪ ॥ ಸಿರಿ ಬಂದ ಕಾಲದಿ ಮರೆತರೆ ಗುಣಗಳ । ದೊರೆವುದು ತಪ್ಪದೆ ಪರಿಭವವು ॥ ೧ ॥ ಶತ್ರುವೆನ್ನದೆ ಮಿತ್ರನೆನ್ನದೆ ಗುಣಿಯ ಸ | ತ್ಪಾತ್ರನೆಂಬುದೆ ಸುಪವಿತ್ರತೆಯು ॥ ೨ ॥

ಸಾಮಾನ್ಯ ಜನರು ಜಗತ್ತಿನಲ್ಲಿ ಜೀವಿಸುವಿಕೆಯನ್ನು ಎಂದೂ ಆಶ್ಚರ್ಯವಾಗಿ ಭಾವಿಸುವುದಿಲ್ಲ. ಯಾರಾದರೂ ಮರಣವನ್ನು ಹೊಂದಿದಾಗ ಅದನ್ನು ಕುರಿತು ಎಲ್ಲರೂ ಆಶ್ಚರ್ಯಗೊಳ್ಳುತ್ತಾರೆ. ಆದರೆ ವಿವೇಕಿಗಳು ಈ ವಿಷಯದಲ್ಲಿ ಎಚ್ಚರಿಸಿರುವದೇನೆಂದರೆ—

ಶ್ಲೋ॥ ಉದ್ಘಾಟಿತನವದ್ವಾರೇ ಪಂಜರೇ ವಿಹಗೋಽನಿಲಃ । ಯತ್ತಿಷ್ಠತಿ ತದಾಶ್ಚರ್ಯಂ ಪ್ರಯಾಣೇ ವಿಸ್ಮಯಃ ಕುತಃ ॥ —(ಸು.)

ಅ॥ ಒಂಬತ್ತು ಬಾಗಿಲುಗಳೂ ಹಾರಹೊಡೆದಿರುವ ಪಂಜರದಲ್ಲಿ ಪ್ರಾಣವಾಯುವೆಂಬ ಪಕ್ಷಿಯು ಒಳಗಿರುವದೇ ಆಶ್ಚರ್ಯವೇ ಹೊರತು ಅದು ಹೊರಬೀಳುವದರಲ್ಲೇಕೆ ಆಶ್ಚರ್ಯ ? ॥

ಹೀಗೆ ಈ ಶರೀರವು ಯಾವ ಕ್ಷಣದಲ್ಲಿಯೋ ಅಮಂಗಲವಸ್ತುವಾಗುವಂಥದ್ದು. ಇಂಥದ್ದರ ಸುಖಕ್ಕಾಗಿ ಜನರು ಪಾಪಮಾಡುವದನ್ನು ನೋಡಿ ದೊಡ್ಡವರು ಕನಿಕರಪಡುವದೆಂತೆಂದರೆ—

ಶ್ಲೋ॥ ಸರ್ವಾಶುಚಿನಿದಾನಸ್ಯ ಕೃತಘ್ನಸ್ಯ ವಿನಾಶಿನಃ । ಶರೀರಕಸ್ಯಾಪಿ ಕೃತೇ ಮೂಢಾಃ ಪಾಪಾನಿ ಕುರ್ವತೇ ॥ —(ಸು.)

ಅ॥ ಸಮಸ್ತ ಹೊಲಸುಗಳಿಗೂ ತೌರುಮನೆಯಾದಂಥ, ಉಪಕಾರವನ್ನೆಣಿಸದಿರುವಂಥ, ನಾಶವಾಗುವಂಥ ಕ್ಷುದ್ರವಾದ ಶರೀರಕ್ಕಾಗಿ ತಿಳಿವಳಿಕೆಯಿಲ್ಲದ ಜನರು ಪಾಪಗಳನ್ನು ಮಾಡುತ್ತಾರೆ.

ಶರೀರದ ಮೂಲಕವಾಗಿ ಸುಖವು ಅನುಭವಸಿದ್ಧವಾಗಿರುವದೆಂದು ಭಾವಿಸುವವರಿಗೆ ಆ ಖದ ಹಣೆಯಬರಹವೆಷ್ಟೆಂಬ ವಿಷಯದಲ್ಲಿ ನೀತಿಶಾಸ್ತ್ರಜ್ಞರು ಹೇಳಿರುವದೇನೆಂದರೆ—

ಶ್ಲೋ॥ ಗತಸಾರೇಽತ್ರ ಸಂಸಾರೇ ಸುಖಭ್ರಾಂತಿಃ ಶರೀರಿಣಾಮ್ । ಲಾಲಾಪಾನಮಿವಾಂಗುಷ್ಠೇ ಬಾಲಾನಾಂ ಸ್ತನ್ಯವಿಭ್ರಮಃ ॥ —(ಸು.)

ಅ॥ ಹುರುಳಿಲ್ಲದ ಈ ಸಂಸಾರದಲ್ಲಿ ದೇಹಿಗಳಿಗೆ ಸುಖವೆಂಬ ಭ್ರಾಂತಿಯಿರುವದನ್ನು ನೋಡಿದರೆ ಹುಡುಗರು ಹೆಬ್ಬೆಟ್ಟನ್ನು ಚೀಪುವದರಿಂದ ನಾಲಿಗೆಯಿಂದೊಸರುವ ರಸವನ್ನು ಮೊಲೆಹಾಲೆಂದು ತಿಳಿಯುವಂತೆಯೇ ಸರಿ.

ಹೆಬ್ಬೆಟ್ಟನ್ನು ಚೀಪುವದರಿಂದ ಬರುವ ರಸವಲ್ಲದೆ ನಾಲಿಗೆಗೆ ಮೊಲೆಹಾಲಿನಂಥ ಉತ್ತಮ ಪೋಷಕವಾದ ರಸವು ಯಾವದೆಂದರೆ ಭಾಗವತ ಶಿರೋಮಣಿಗಳು ಹೇಳುತ್ತಾರೆ—

ಬೇಹಾಗ್—ಆದಿತಾಳ

ನಾಲಗೆಯೇ, ಹರಿನಾಮಾಮೃತವನು ಕುಡಿಕುಡಿ ಬೇಗ । ಕುಡಿಕುಡಿ ಬೇಗ ॥ ಪ ॥ ನಾಳೆನಾಡಿದು ಎನಬೇಡ, ಕೆಡಬೇಡ ॥ ಅ. ಪ. ॥ ಸವಿಸವಿಯೂಟವ । ಸವಿದೊಡದೇನೊ ॥ ಸವೆಯಲು ತೇಜವು ಸಪ್ಪೇ । ಛಿ! ಬೆಪ್ಪೇ ॥ ೧ ॥ ರುಚಿಯೆಲ್ಲಕೆ ರುಚಿ । ಶುಚಿ, ಬಲಕಾರಿ ॥ ಉಚಿತವೆ ಬಿಡುವದು ನೋಡು । ತ್ವರೆಮಾಡು ॥ ೨ ॥ ಮಂಕ ಬಿಡಿಸುವದು । ಸಂಕಟಹಾರಿ ॥ ಶಂಕರ ಪಾನವ ಗೈದ । ಶಿವನಾದ ॥೩॥

—(ಅ.ಗೀ.)

ಟಿ॥ ತೇಜವು= ನಾಲಗೆಯ ಬಲ.

ಯಾವ ದೇವರ ನಾಮಸ್ಮರಣೆಯನ್ನು ಮಾಡಬೇಕೆಂದರೆ—

ಶ್ಲೋ ॥ ನರಕೇ ಪಚ್ಯಮಾನಾನಾಂ ಯಮೇನ ಪರಿಭಾಷಿತಮ್ । ಕಿಂ ತ್ವಯಾ ನಾರ್ಚಿತೋ ದೇವಃ ಕೇಶವಃ ಕ್ಲೇಶನಾಶನಃ ॥ —(ಪಾಂ.ಗೀ)

ಅ॥ ನರಕದಲ್ಲಿ ಬೇಯುತ್ತಿರುವವನನ್ನು ನೋಡಿ ಯಮನು "ನೀನು ಸರ್ವದುಃಖಹರನಾದ ಕೇಶವನನ್ನು ಪೂಜೆಮಾಡಲಿಲ್ಲವೊ ?" ಎಂದು ಕೇಳುತ್ತಾನೆ.

ಆ ಕೇಶವನು ಎಲ್ಲಿರುವನೆಂಬ ವಿಷಯದಲ್ಲಿ ಭಗವದ್ಭಕ್ತರು ಹೇಳಿರುವದೇನೆಂದರೆ—

ಮುಖಾರಿ—ಝಂಪೆ

ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ । ಎಲ್ಲಿ ಭಕ್ತರು ಕರೆಯೆ ಅಲ್ಲಿ ಬಂದೊದಗುವನು ॥ಪ॥ ತರಳ ಪ್ರಹ್ಲಾದ ಶ್ರೀಹರಿ ವಿಶ್ವಮಯನೆಂದು । ನೆರೆ ಪೇಳಲವನ ಪಿತ ಕೋಪದಿಂದ ॥ ಸ್ಥಿರವಾದೊಡೀ ಕಂಬದಲ್ಲಿ ತೋರು ತೋರೆನಲು । ಭರದಿಂದ ಬರಲದಕೆ ವೈಕುಂಠ ನೆರೆಮನೆಯೆ? ॥ ೧ ॥ ಪಾಪಕರ್ಮವ ಮಾಡಿದಜಮಿಳನ ಯಮಭಟರು । ಕೋಪದಿಂದೆಳೆವುತಿರೆ ಭೀತಿಯಿಂದ ॥ ತಾ ಪುತ್ರನನು ಕರೆಯೆ ಕೇಳಿ ರಕ್ಷಿಸೆ ಶ್ವೇತ । ದ್ವೀಪ ಈ ಧರೆಗೆ ಸಮೀಪದಲ್ಲಿಹುದೆ? ॥೨॥ ಕರಿರಾಜನನು ನೆಗಳು ನುಂಗುತಿರೆ ಭಯದಿಂದ । ಮೊರೆಯಿಡಲು ಕೇಳಿ ತ್ವರಿತದಲಿ ಬಂದು॥ ಕರುಣದಲಿ ಬಂಧನವ ಪರಿಹರಿಸೆ ಗಜರಾಜ । ನಿರುವ ಸರಸಿಯು ಅನಂತಾಸನಕೆ ಮುಮ್ಮನೆಯೆ? ॥ ೩ ॥ ಕುರುಪತಿಯು ದ್ರೌಪದಿಯ ಸೀರೆಯನು ಸುಲಿಸುತಿರೆ । ತರುಣಿ ಹಾ! ಕೃಷ್ಣ, ಎಂದೊದರೆ ಕೇಳ್ದು ॥ ಭರದಿಂದ ಅಕ್ಷಯಾಂಬರವೀಯೆ ಹಸ್ತಿನಾ । ಪುರಿಗೆ ದ್ವಾರಾವತಿಯು ಕೂಗಳತೆಯೇ? ॥ ೪ ॥ ಅಣುಮಹತ್ತಿನೊಳೆಲ್ಲ ಪರಿಪೂರ್ಣವಿಶ್ವಮಯ । ಗಣನೆಯಿಲ್ಲದ ಮಹಾಮಹಿಮನೆನಿಪ ॥ ಘನಕೃಪಾನಿಧಿ ಕಾಗಿನೆಲೆಯಾದಿಕೇಶವನು । ನೆನೆದವರ ಮನದೊಳಿಹನೆಂಬ ಬಿರುದುಂಟಾಗಿ ॥೫॥

—(ದಾ.)

ಹೀಗೆ ಮನಸ್ಸಿನೊಳಗೆ ಸಾಕ್ಷಾತ್ಕಾರವಾಗುವದೇ ನಿಜವಾದ ಆತ್ಮಜ್ಞಾನವೇ ಹೊರತು ಹೊರಗೆ ವಿಗ್ರಹಗಳ ಜ್ಞಾನವು ಆತ್ಮಜ್ಞಾನವಲ್ಲ. ಇದನ್ನು ಒಬ್ಬ ಕವಿ ವರ್ಣಿಸಿರುವದೆಂತೆಂದರೆ—

ಶ್ಲೋ ॥ ವಿಹೀನಃ ಸ್ನೇಹಲೇಶೇನ ನಿರ್ದಶಶ್ಚ ನಿರಂಜನಃ । ಅಧ್ಯಾತ್ಮ ಜ್ಞಾನದೀಪೋಽಯಂ ತಮೋ ಹನ್ತ್ಯಚಲಪ್ರಭಃ ॥ —(ಸು. ಲಾ)

ಅ॥ ಅಧ್ಯಾತ್ಮಜ್ಞಾನವೆಂಬುವದು ದೀಪದಂತೆ ಇದೆ. ಇದು ಎಂಥ ದೀಪವೆಂದರೆ (ವಿಹೀನಃ ಸ್ನೇಹಲೇಶೇನ) ಒಂದು ತೊಟ್ಟಾದರೂ ಎಣ್ಣೆ ಇಲ್ಲದ್ದು ; (ನಿರ್ದಶಶ್ಚ) ಬತ್ತಿ ಇಲ್ಲದ್ದು ; (ನಿರಂಜನಃ) ಕಾಡಿಗೆ ಇಲ್ಲದ್ದು ; (ಅಚಲಪ್ರಭಃ) ಅಲ್ಲಾಡದೆ ಇರುವ ಪ್ರಕಾಶವುಳ್ಳದ್ದು ; (ತಮೋಹನ್ತಿ) ಕತ್ತಲೆಯನ್ನು ಕಳೆಯುತ್ತದೆ. ಈ ದೀಪದ ಧರ್ಮಗಳು ಅಧ್ಯಾತ್ಮ ವಿದ್ಯೆಯಲ್ಲಿ ಹೇಗೆ ಹೋಲುವವೆಂದರೆ (ವಿಹೀನಃ ಸ್ನೇಹಲೇಶೇನ) ವಿಷಯಗಳ ಮೇಲೆ ಎಳ್ಳಷ್ಟು ಮಮತೆ ಇಲ್ಲದ್ದು ; (ನಿರ್ದಶಶ್ಚ) ಬಾಲ್ಯ ಮೊದಲಾದವಸ್ಥೆಗಳಿಲ್ಲದ್ದು ; (ನಿರಂಜನಃ) ವಿಷಯ ಸಂಬಂಧದ ದೋಷವಿಲ್ಲದ್ದು ; (ಅಚಲಪ್ರಭಃ) ಇದರ ಪ್ರಭಾವವು ಬದಲಾಯಿಸುವದಿಲ್ಲ ; (ತಮೋಹನ್ತಿ) ತಮೋಗುಣವನ್ನು ಹೋಗಲಾಡಿಸುತ್ತದೆ.

ಈ ಆತ್ಮವಿದ್ಯೆಗೆ ಸಾಧನವಾಗಿ ದೊಡ್ಡವರು ಉಪದೇಶಿಸುವದೇನೆಂದರೆ—

ತ್ರಿ॥ ಬಾಲ್ಯಯೌವನದೊಳಗೆ ಲೋಲುಪ್ತನಾಗಿ ನೀ । ನೇಳುತಲಿ ಮದಿಸುತಿರಬೇಡ ; ಅನುದಿನ । ಶೂಲಿಯನು ನೆನೆಯೋ ಸರ್ವಜ್ಞ ॥ —(ಸ.ಪ)

ಆ ಧ್ಯಾನದ ಪರಿಪಕ್ವಾವಸ್ಥೆಯನ್ನು ಮತ್ತೊಬ್ಬ ಕವಿ ಹೊಗಳಿರುವದೆಂತೆಂದರೆ—

ವೃ ॥ ತಡೆತಡೆದೋಡುತಿರ್ಪ ಮನಮಂ ಪಿಡಿದಾತ್ಮನೊಳಿಟ್ಟು ತನ್ನ ತಾಂ । ನುಡಿನುಡಿದಾತ್ಮನೊಳ್ ಸ್ವಪರತತ್ತ್ವರಹಸ್ಯಮನಾತ್ಮರೂಪಮಂ ॥ ಅಡಿಗಡಿಗೊಲ್ದು ನೋಡುತೆ ಶಮಾಮೃತಮಂ ಸಲೆ ಪೀರ್ದು ಪೀರ್ದು ತಂ । ಪಡರ್ದ ತಪಸ್ವಿಯೋ ಸುಖಿ ; ಪೆರಂ ಸುಖಿಯೋ ? ಅಪರಾಜಿತೇಶ್ವರಾ ॥ —(ಅ. ಶ)

ಈ ಧ್ಯಾನವು ಮೈಗೂಡುವದಕ್ಕೆ ಮೊದಲು ಮನುಷ್ಯನು ಗುಣಗ್ರಹಣತತ್ಪರತೆಯೆಂಬ ಒಂದು ಅಮೋಘವಾದ ಗುಣವನ್ನು ಪಡೆಯಬೇಕು. ಗುಣಗಳು ಯಾವವೆಂಬ ವಿಷಯದಲ್ಲಿ ಜ್ಞಾನಿಗಳು ಹೇಳಿರುವದೇನೆಂದರೆ—

ಸೌರಾಷ್ಟ್ರ—ಅಟತಾಳ

ಗುಣವೇ ಭೂಷಣವಲ್ಲದೆ ಸರ್ವಕ್ಕು । ಮಣಿಹೇಮಾದಿಗಳು ಭೂಷಣವಲ್ಲವು ॥ ಪ ॥ ಮಣಿಹೇಮಭೂಷವಾದೇಹಾಂತವಿರಲಿಂತೀ । ಗುಣಭೂಷವಾಚಂದ್ರಾರ್ಕವದಾಗಿಯೆ ॥ ಅ. ಪ ॥ ಚರಣಗಳಿಗೆ ತೀರ್ಥಯಾತ್ರೆಯೆ ಭೂಷಣ । ಕರಕೆ ಸತ್ಪಾತ್ರದಾನವೆ ಭೂಷಣ ॥ ಗುರುಪಾದಪ್ರಣತಿಯೆ ಶಿರಸಿಗೆ ಭೂಷಣ ॥ ಹರದರುಶನವೆ ನೇತ್ರಕೆ ಭೂಷಣ ॥ ೧ ॥ ಅನುಪಮ ಸತ್ಯವೆ ರಸನೆಗೆ ಭೂಷಣ । ಘನಪುಣ್ಯಕಥೆಯೆ ಕರ್ಣಕೆ ಭೂಷಣ ॥ ತನುವಿಗೆ ಪರಾರ್ಥಕ್ಕೆ ಹೆಣಗುವದೆ ಭೂಷಣ । ಮನಸಿಗೆ ಧರ್ಮಚಿಂತೆಯೆ ಭೂಷಣ ॥ ೨ ॥ ಪರಿಪೂರ್ಣವಿದ್ಯಗಗರ್ವವೆ ಭೂಷಣ । ಸಿರಿಗೆ ದೀನರ ಪೋಷಣೆ ಭೂಷಣ ॥ ನರಜನ್ಮಕಖಿಲಹಿತಕ್ರಿಯೆ ಭೂಷಣ । ದುರಿತಭೀತಿಯೆ ಸೌಜನ್ಯಕೆ ಭೂಷಣ ॥೩॥ ಧರೆಯೊಳಹಿಂಸೆಯೆ ಕರುಣೆಗೆಭೂಷಣ ।

ಪರತರತಪಕೆ ಶಾಂತಿಯೆ ಭೂಷಣ ॥ ಪರಮವಿವೇಕಕೆ ವಿರತಿಯೆ ಭೂಷಣ ।
ವಿರತಿಗೆ ಬ್ರಹ್ಮವಿದ್ಯೆಯೆ ಭೂಷಣ ॥ಳ॥ ನೆರೆ ಪೂರ್ಣಲಕ್ಷ್ಯವೆ ಯೋಗಕ್ಕೆ ಭೂಷಣ।
ವರಿವಿಗೆ ನಿರ್ವಿಕಲ್ಪವೆ ಭೂಷಣ ॥ ಗುರುಸಿದ್ಧನಮಲಕೃಪಾಲಬ್ಧಮುಕ್ತಿಯೆ ।
ಪರಿಕಿಸಲಿಂತಿವೆಲ್ಲಕೆ ಭೂಷಣ ॥ —(ಕೈ. ಕ)

ಟಿ॥ ಭೂಷಣ+ಅರಿವಿಗೆ. ನಿರ್ವಿಕಲ್ಪ =ಬೇರೆ ಕಲ್ಪನೆಗಳು ಬರದೆ ಇರುವದು.

ಈ ಜಾತಿಯ ಗುಣಗಳಲ್ಲಿ ಮತ್ತೊಬ್ಬನಲ್ಲಿರುವ ಗುಣವನ್ನು ಮೆಚ್ಚುವಂಥ ಸೌಜನ್ಯಗುಣ ವನ್ನು ಪ್ರದರ್ಶನ ಮಾಡುವದು ಬಹಳ ಹೆಚ್ಚಿನದೆಂದು ಭಗವದ್ಭಕ್ತರು ಪೀಠಿಕಾರಂಭದಲ್ಲಿ **"ಬಲು ದೊಡ್ಡ ಗುಣವಿದು ಜಗದೊಳಗೆ"** ಎಂದು ಮುಂತಾಗಿ ಉಪದೇಶಮಾಡಿ ರುವರು. ಹಾಗೆ ಗುಣಗ್ರಹಣ ಮಾಡಿ ಹೆಸರುಗೊಂಡಿರುವದಕ್ಕೆ ಉದಾಹರಣೆಯಾಗಿ ದ್ರೌಪದೀ ಜನ್ಮವೆಂಬ ಆಖ್ಯಾನವು ನಿರೂಪಿಸಲಾಗುವದು.

ಆಖ್ಯಾನ

ಕೀ॥ ಮಗನಹ ದ್ರೋಣಗೆ ಪಾಂಚಾಲೇಶನ । ಮಗನಹ ದ್ರುಪದಗೆ ಜೊತೆ
ಯಲ್ಲಿ ॥ ಬಗೆಬಗೆ ವಿದ್ಯೆಗಳ ಭರದ್ವಾಜರು । ಮಿಗೆ ಕಲಿಸಿದರಾಶ್ರಮದಲ್ಲಿ ॥

ದ್ರೋಣನಿಗೂ ದ್ರುಪದನಿಗೂ ಗೆಳೆತನವು ಬಲವಾಗಿದ್ದದರಿಂದ ದ್ರುಪದನು ವಿದ್ಯಾಭ್ಯಾಸ ವನ್ನು ಮುಗಿಸಿ ಊರಿಗೆ ಹೊರಡುವ ದಿನ ದ್ರೋಣನಿಗೆ ಹೇಳಿದ್ದೇನೆಂದರೆ—

ಸಾ ॥ ಗೆಳೆಯನೆ ಕೇಳ್ನಾನರಸನಾವ ಮೇ । ಲೊಲಿದರೆ ರಾಜ್ಯವನೀವೆ ॥
ತಿಳಿಯುವಿರಾದಿನ ರಾಜಕುಮಾರಕ । ರೊಲಿದರಾಗುವದ ನೀವೇ ॥

ಟಿ॥ ಮೇಲೆ+ಒಲಿದು+ಅರೆರಾಜ್ಯವ. ರಾಜಕುಮಾರಕರು+ಒಲಿದರೆ+ಆಗುವದ.

ಕೆಲವು ಕಾಲದ ಮೇಲೆ—

ದಿಂ॥ ಅಳಿಯೆ ಪಾಂಚಾಲಾಧೀಶ ಪೃಷತನಂದು । ನಲಿದು ಪೀಠವನೇರಿದನು
ದ್ರುಪದ ಬಂದು । ನೆಲನನಾಳುತ್ತಾ ಭರದಿ ದ್ರೋಣನನ್ನು । ಸೆಲೆಯನೇ ಮರೆ
ತಿರ್ದಂ ಗೆಳೆಯನೆಂಬುದನ್ನು ॥

ಇತ್ತ—

ಕಂ॥ ಪಿತನಳಿಯಲ್ದ್ರೋಣಂ ಮುನಿ । ಸುತೆಯಹ ಕೃಪಿಯೊಡನೆ ಮದುವೆ
ಯಾಗುತ್ತವಳೊಳ್ ॥ ಸುತನೋರ್ವನಾಗೆ ರಿಕ್ತ । ಸ್ಥಿತಿಯೊಳ್ಸಂಸಾರಗೆಯ್ಯುತಿರ್ದಂ
ಜಗದೊಳ್ ॥

ಆ ಮಗುವಿಗೆ ನಾಮಕರಣವಾದ ಕ್ರಮವೇನೆಂದರೆ—

ಶ್ಲೋ ॥ ಸ ಜಾತಮಾತ್ರೋ ವ್ಯನದದ್ಯಥೈವೋಚ್ಚೈಃಶ್ರವಾ ಹಯಃ ।
—(ಸಂ. ಭಾರ)

ಅ॥ ಅವನು ಹುಟ್ಟಿದೊಡನೆ ಇಂದ್ರನ ಉಚ್ಚೈಃಶ್ರವವೆಂಬ ಕುದುರೆಯಂತೆ ಕೂಗಿದನು.

ಆದ್ದರಿಂದ ಆಕಾಶವಾಣಿಯು ಅವನನ್ನು ಅಶ್ವತ್ಥಾಮನೆಂದು ಕರೆಯಿತು. ಆಗಿನಿಂದ ಅವನಿಗೆ ಅದೇ ಹೆಸರಾಯಿತು. ದ್ರೋಣನಿಗೆ ಬಡತನವು ಹೆಚ್ಚಾಗಿದ್ದದರಿಂದ ಒಂದು ದಿನ ಅವನು ತನ್ನಲ್ಲಿ ತಾನು ಹಂಬಲಿಸಿಕೊಂಡದ್ದೇನೆಂದರೆ—

ಶ್ಲೋ ॥ ದಾರಿದ್ರ್ಯ,ಘೋಸ್ತ್ವಂ ಪರಮಂ ವಿವೇಕಿ । ಗುಣಾಧಿಕೇ ಪುಂಸಿ ಸದಾನುರಕ್ತಮ್ ॥ ವಿದ್ಯಾವಿಹೀನೇ ಗುಣವರ್ಜಿತೇ ಚ ಮುಹೂರ್ತಮಾತ್ರಂ ನ ರತಿಂ ಕರೋಷಿ ॥ —(ಸು.)

ಅ॥ ಎಲೆ ಬಡತನವೆ, ನೀನು ಬಹಳ ವಿವೇಕಿ. ಗುಣವಂತರಾದ ಪುರುಷರನ್ನೇ ನೀನು ಯಾವಾಗಲೂ ಆಶ್ರಯಿಸಿಕೊಂಡಿರುತ್ತಿ. ವಿದ್ಯೆಯೂ ಗುಣವೂ ಇಲ್ಲದವರಲ್ಲಿ ನೀನೊಂದು ಕ್ಷಣವೂ ನಿಲ್ಲುವದಿಲ್ಲ.

ಇಷ್ಟೇ ಅಲ್ಲ; ಬಡತನವು ಗುಣವನ್ನು ಮುಚ್ಚಿಯೇ ಬಿಡುವದೆಂತೆಂದರೆ—

ಶ್ಲೋ ॥ ಗುಣಯುಕ್ತೋಽಪ್ಯಧೋ ಯಾತಿ ರಿಕ್ತಃ ಕೂಪೇ ಘಟೋ ಯಥಾ। ನಿರ್ಗುಣೋಽಪಿ ಭೃತಃ ಪಶ್ಯ ಜನೈಃ ಶಿರಸಿ ಧಾರ್ಯತೇ ॥ —(ಸು.)

ಅ॥ ಗಡಿಗೆಯು (ಗುಣಯುಕ್ತಃ) ಹಗ್ಗದಿಂದ ಕೂಡಿದ್ದರೂ ಕೆಳಕ್ಕೆ ಹೋಗುವಂತೆ ಕೈಯಲ್ಲಿ ಕಾಸಿಲ್ಲದವನು (ಗುಣಯುಕ್ತಃ) ಒಳ್ಳೇಗುಣಗಳಿಂದ ಕೂಡಿದ್ದರೂ ಹೀನಸ್ಥಿತಿಯನ್ನು ಹೊಂದುತ್ತಾನೆ. (ನಿರ್ಗುಣೋಽಪಿ) ಹಗ್ಗವಿಲ್ಲದಿದ್ದರೂ (ಭೃತಃ) ತುಂಬಿದ ಗಡಿಗೆಯು ಜನರ ತಲೆಯ ಮೇಲೇರುವಂತೆ (ನಿರ್ಗುಣೋಽಪಿ) ಒಳ್ಳೆ ಗುಣಗಳಿಲ್ಲದಿದ್ದರೂ (ಭೃತಃ) ದುಡ್ಡುಳ್ಳವನು ಉಚ್ಚಸ್ಥಿತಿಯನ್ನು ಹೊಂದುತ್ತಾನೆ.

ಒಂದು ದಿನ ಅವನಿಗೆ ಹೆಚ್ಚು ಬೇಸರವಾದ ಸಂಭವವೇನೆಂದರೆ—

ಶ್ಲೋ ॥ ದ್ರೋಣಂ ಧಿಗಸ್ತ್ವಧನಿನಂ ಯೋ ಧನಂ ನಾಧಿಗಚ್ಛತಿ । ಪಿಷ್ಟೋದಕೋ ಸುತೋ ಯಸ್ಯ ಪೀತ್ವಾ ಕ್ಷೀರಸ್ಯ ತೃಷ್ಣಯಾ। ನೃತ್ಯತಿ ಸ್ಮ ಮುದಾವಿಷ್ಟಃ ಕ್ಷೀರಂ ಪೀತಂ ಮಯಾಪ್ಯುತ ॥ —(ಸಂ. ಭಾರ)

ಅ॥ ಹಣವನ್ನು ಸಂಪಾದನೆ ಮಾಡದೆ ಇರುವ ಬಡವನಾದ ದ್ರೋಣನಿಗೆ ಧಿಕ್ಕಾರವಿರಲಿ. ಮಗನು ಹಾಲನ್ನು ಬಯಸಿ ಹಿಟ್ಟು ಕದರಿದ ನೀರನ್ನು ಕುಡಿದು ನಾನೂ ಹಾಲು ಕುಡಿದೆನೆಂದು ಆನಂದದಿಂದ ಕುಣಿಯುತ್ತಿದ್ದಾನಲ್ಲ !

ಆಗ ಅವನು ತನ್ನ ಮನಸ್ಸಿನಲ್ಲಿ ಉಂಟಾದ ವೈರಾಗ್ಯದಿಂದ ಹೇಳುತ್ತಾನೆ—

ಕಂ ॥ ಎನಿತು ಪರಿಗ್ರಹದ ತೊಡ । ರ್ಪನಿತೆ ಮನೋದುಃಖಮದರ ಕುಂದೆನಿತು ಮನ । ಕ್ಕನಿತೆ ಸುಖಮೆಂಬುದಂ ನೆ । ಟ್ಟನೆ ತಿಳಿದಂ ಜನ್ಮಜಲಧಿಯೊಳ್ಮುಳುಗುವನೇ? ॥ —(ಆ. ಪು)

ಇಷ್ಟು ಬಡತನವಿದ್ದರೂ, ತನಗೆ ದ್ರುಪದನ ನೆಸವೂ ಇದ್ದರೂ ಯಾರನ್ನೂ ಯಾಚನೆ ಮಾಡದೆ ಇರುವದೇ ಉತ್ತಮವೆಂದೂ ಯಾಚಿಸುವದಾದರೂ ಕ್ಷತ್ರಿಯನ ಧನವನ್ನು ಬಯಸುವದಕ್ಕಿಂತಲೂ ಬ್ರಾಹ್ಮಣನ ಧನವು ದೊರೆಯುವದಾದರೆ ಉತ್ತಮವೆಂದೂ ಯೋಚಿಸಿ, ಆಗ ಪರಶುರಾಮನು ತಾನು ಸಂಪಾದಿಸಿದ್ದ ಭೂಮಿಯನ್ನೆಲ್ಲ ದಾನಮಾಡುತ್ತಿರುವನೆಂದು ಕೇಳಿ ದ್ರೋಣನು ಮಗನೊಡನೆ ಮಹೇಂದ್ರಪರ್ವತಕ್ಕೆ ಪರಶುರಾಮನ ಬಳಿಗೆ ಬಂದು ಬೇಡುತ್ತಾನೆ—

ಭೈರವಿ—ರೂಪಕ

ಬೇಡುತಿಹೆನು ರಾಮದೇವ । ನೀಡಭೀಷ್ಟವ ಸುಪ್ರಭಾವ ॥ಪ॥ ನೋಡಲಿಲ್ಲ ನಿನ್ನ ಸಮಾನರ । ನಾಡಿನೊಳಗೆ ನೀನುದಾರ ॥ಅ. ಪ॥ ಇರುವೊಡೊಂದು ಮನೆಯು ಇಲ್ಲ । ತಿರಿವೊಡೊಂದು ಜೋಳಿಯಿಲ್ಲ ॥ ತರುಣನಿವನ ಕೂಡಿ ಹೊಟ್ಟೆ । ಹೊರೆವುದೆಂತೊ ಕಾಣೆನಲ್ಲ ॥ ೧ ॥ ಅಶನವಿಲ್ಲ ವಸನವಿಲ್ಲ । ಉಸಿರು ನಿಲ್ವ ದಾರಿಯಿಲ್ಲ ॥ ಅಸುವನೆಂತು ಧರಿಸಬಹುದು । ಬೆಸಸಲು ನೀ ತಕ್ಕನಹುದು ॥ ೨ ॥ ಹುಡುಗನ ಸಂತಯಿಸಲಾರೆ । ಮಡದಿಯ ಕಾಪಾಡಲಾರೆ ॥ ಬಿಡಿಸೈ ದಾರಿದ್ರ್ಯವನಿದ । ಪೊಡಮಡುವೆನು ನಿನಗೆ ವರದ ॥ ೩ ॥

ಅಷ್ಟು ಹೊತ್ತಿಗೆ ಎಲ್ಲವನ್ನೂ ದಾನವನ್ನು ಮಾಡಿ ಮುಗಿಸಿದ್ದ ಪರಶುರಾಮನು ಹೇಳಿದ್ದೇನೆಂದರೆ:—

ಶ್ಲೋ ॥ ಅಸ್ತ್ರಾಣಿ ವಾ ಶರೀರಂ ವಾ ವರಯೈತನ್ಮಯೋದ್ಯತಮ್॥

—(ಸಂ. ಭಾರ)

ಅ ॥ ನನ್ನ ಅಸ್ತ್ರಗಳು ಬೇಕೋ, ನನ್ನ ಶರೀರವು ಬೇಕೋ, ನನ್ನಲ್ಲಿ (ಉಳಿದಿ) ರುವ ಇವೆರಡರಲ್ಲಿ ಒಂದನ್ನು ಕೇಳು.

ಅವನಲ್ಲಿ ಉಳಿದಿದ್ದ ಎರಡರಲ್ಲಿ ಶರೀರವನ್ನು ಬೇಡುವದು ದ್ರೋಣನಿಗೆ ಯೋಗ್ಯವಾಗಿ ತೋರಲಿಲ್ಲ. ಏಕೆಂದರೆ ದೊಡ್ಡವರ ಶರೀರವನ್ನು ದಾಸ್ಯಕ್ಕೆ ಉಪಯೋಗಮಾಡಿಕೊಳ್ಳಬಾರದು. ಆದ್ದರಿಂದ ಅಸ್ತ್ರವಿದ್ಯೆಯನ್ನು ಪಡೆಯುವದು ಯೋಗ್ಯವಾಗಿ ತೋರಿತು. ನೀತಿಶಾಸ್ತ್ರಜ್ಞರು ಹೇಳುವದೇನೆಂದರೆ—

ಶ್ಲೋ ॥ ಗುಣೇಷ್ವೇವ ಹಿ ಕರ್ತವ್ಯಃ ಪ್ರಯತ್ನಃ ಪುರುಷೈಃ ಸದಾ । ಗುಣಯುಕ್ತೋ ದರಿದ್ರೋಽಪಿ ನೇಶ್ವರೈರಗುಣೈಸ್ಸಮಃ ॥ —(ಸು)

ಅ ॥ ಮನುಷ್ಯನು ಯಾವಾಗಲೂ ಗುಣಾಢ್ಯನಾಗುವದಕ್ಕೇ ಪ್ರಯತ್ನ ಮಾಡಬೇಕು. ಬಡತನವಿದ್ದರೂ ಗುಣವೊಂದಿದ್ದರೆ ಅವನು ಗುಣಹೀನರಾದ ಅರಸರಿಗಿಂತ ಮೇಲು.

ಆದ್ದರಿಂದ ಅಸ್ತ್ರವಿದ್ಯೆಯನ್ನು ಪಡೆಯುವದೇ ಮೇಲೆಂದು ದ್ರೋಣನಿಗೆ ತೋರಿತು. ಏಕೆಂದರೆ:—

ವೃ ॥ ಮುರಿದು ನರಾಧಿಪಂಗೆ ಕೊಳಬಾರದು; ಕಿಚ್ಚಿನೊಳ್ಬೆದೆ ಬೇಯದಿ। ತ್ತರೆ ಮರಳ್ದುತ್ತರೋತ್ತರದಿ ಪೆರ್ಚುವದಕ್ಕರವಿದ್ಯೆ ; ನೀರೊಳಂ ॥ ನೆರೆಯದು ; ಗಾಳಿಯಿಂ ಕೆಡದು; ತಕ್ಕರ ಬಾಧೆಗಸಾಧ್ಯವಿಂತಿದಂ । ಪಿರಿಯರು ನಿಚ್ಚಲೋದುವದು; ಓದಲಿಹಕ್ಕೆ ಪರಕ್ಕೆ ಸಾಧನಂ ॥ —(ಸು)

ಟಿ ॥ ನೆರೆಯದು = ಸೇರಿಹೋಗದು. ತಕ್ಕರ = ಕಳ್ಳ (ತಸ್ಕರ)

ಹೀಗೆಂದು ತಿಳಿದು ಅವನು ಪರಶುರಾಮನನ್ನು ಕೇಳಿದ್ದೇನೆಂದರೆ—

ಶ್ಲೋ ॥ ಅಸ್ತ್ರಾಣಿ ಮೇ ಸಮಗ್ರಾಣಿ ಸಸಂಹಾರಾಣಿ ಭಾರ್ಗವ । ಸಪ್ರಯೋಗರಹಸ್ಯಾನಿ ದಾತುಮರ್ಹಸ್ಯಶೇಷತಃ ॥ —(ಸು)

ಅ ॥ ಹೆ, ಪರಶುರಾಮ, ನನಗೆ ಎಲ್ಲ ಅಸ್ತ್ರಗಳನ್ನೂ ಬಿಡುವ ಮತ್ತು ತಡೆಯುವ ಗುಟ್ಟು ಗಳೊಂದಿಗೆ ಒಂದನ್ನೂ ಬಿಡದೆ ಹೇಳಿಕೊಡಬೇಕು.

ಅದರಂತೆ ಪರಶುರಾಮನಿಂದ ಉಪದೇಶವನ್ನು ಹೊಂದಿದ ಮೇಲೆಯೂ ಉಪಾಯಾಂತರ ವನ್ನು ಕಾಣದೆ ದ್ರೋಣನು ಧನಕ್ಕಾಗಿ ದ್ರುಪದನ ಬಳಿಗೆ ಬಂದು ಬಾಗಿಲಲ್ಲಿ ನಿಂದು ಗೆಳೆಯನು ಬಂದಿರುವನೆಂದು ಹೇಳಿ ಕಳುಹಿಸಲು ದ್ರುಪದನು ಮಂತ್ರಿಗಳ ಮುಂದೆ ಹರಟುತ್ತಾನೆ—

ಕೇತಾರಗೌಳ—ರೂಪಕ

ಗೆಳೆಯತನವೆ ಎನ್ನ ಕೂಡೆ । ತಿಳಿದು ನೋಡಲು ॥ ಪ ॥ ಭಲರೆ ಬಡವ ಹಾರುವನಿಗೆ । ಸಲುಗೆಯೇ, ಒಲುಮೆಯೇ, ಅಚ್ಚರಿಯೆನಿಪುದು ॥ಅ. ಪ॥ ತಿರುಕ ರೊಡನೆ ಸಲುವದೆಂತು। ಅರಸರೊಡನೆ ನಡೆವುದಿಂತು ॥ ಅರಿಯೆ ರಥಿಕರಿಗೆ ಕಾಲಾಳು । ಸರಿಯಹುದೇ, ಇರಬಹುದೇ, ಧರಣೀತಲದೊಳು ॥ ೧ ॥ ಶೂರರೊಡನೆ ಹೇಡಿ ಗಳಿಗೆ । ಸೇರುವಿಕೆಯು ಸಂಭವಿಪುದೇ ?॥ ಸೂರಿಗಳಿಗೆ ಮೂರ್ಖರಿಗೆ । ಸೇರುವದೇ, ತೋರುವದೇ, ಈ ರೀತಿಯೊಳಗೆ ॥ ೨ ॥ ಮಾನವಂತರಾದವರಿಗೆ । ಮಾನಹೀನ ರೊಡನೆ ಗಂಟೆ? ॥ ಕ್ಷೋಣಿಯೊಳೀ ರೀತಿಯುಂಟೆ ? । ಕಾಣೆನಿದ, ಪೇಳುವದ, ಏನೆಂದೆಂಬುದ ॥ ೩ ॥

ಕೊನೆಗೆ ಆದದ್ದೇನೆಂದರೆ:—

ಷ॥ ಸಿರಿಯ ಮದವಧಿಕಪ್ರತಾಪೋ । ತ್ಕರದ ಮದ ಮೊದಲಾದ ಮದ ಸಂ। ಚರಣರಜದಲಿ ಮಾಸಿತೀತನ ಮನದ ಮಡಿವರ್ಗ; ॥ ತಿರಿವ ಹಾರುವರೊಡನೆ ಭೂಮಿಶ । ಶ್ವರರಿಗೆತ್ತಣ ಮೈತ್ರಿ ; ಸೋಗಲಿ; । ಕರೆಯಬೇಡೆನೆ ಬಂದು ಬಾಗಿಲ ಲವ ನಿವಾರಿಸಿದ ॥ —(ಕ. ಭಾರ)

ದ್ವಿ ॥ ಹಿರಿಯತನ ಬಂದಾಗ ಧಿಕ್ಕರಿಸಬೇಡ । ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ॥ —(ದಾ)

ಎಂಬ ಪೂರ್ವಿಕರ ಉಕ್ತಿಯು ದ್ರುಪದನ ಮನಸ್ಸಿಗೆ ಹೊಳೆಯಲಿಲ್ಲ.

ಶ್ಲೋ ॥ ಗತಶ್ರೀರ್ಗಣಕಾನ್ದ್ವೇಷ್ಟಿ ಗತಾಯುಶ್ಚ ಚಿಕಿತ್ಸಕಾನ್ । ಗತ ಶ್ರೀಶ್ಚ ಗತಾಯುಶ್ಚ ಬ್ರಾಹ್ಮಣಾನ್ದ್ವೇಷ್ಟಿ ಭಾರತ ॥ —(ಸಂ. ಭಾರ)

ಅ॥ ಧರ್ಮರಾಯನೆ, ಕೇಳು. ಸಂಪತ್ತನ್ನು ಕಳೆದುಕೊಂಡವನು ಲೆಕ್ಕಿಗರನ್ನು ದ್ವೇಷಿಸು ತ್ತಾನೆ; ಆಯುಸ್ಸನ್ನು ಕಳೆದುಕೊಂಡವನು ವೈದ್ಯರನ್ನು ದ್ವೇಷಿಸುತ್ತಾನೆ. ಸಂಪತ್ತನ್ನು ಕಳೆದು ಕೊಂಡವನೂ ಆಯುಸ್ಸನ್ನು ಕಳೆದುಕೊಂಡವನೂ ಬ್ರಾಹ್ಮಣರನ್ನು ದ್ವೇಷಿಸುತ್ತಾನೆ.

ಅದರಲ್ಲಿಯೂ ಐಶ್ವರ್ಯಮದವಿಳಿಯುವದು ಬಲು ಕಷ್ಟ—

ಕಂ ॥ ಸಿರಿಯೆಂಬ ಸೊರ್ಕು ತಿಳಿಯದು । ಪರಿಣಾಮದಿನಂಜನಂಗಳಿಂದ ಮದೆಂತುಂ ॥ ಪರಿಹರಿಸಲರಿದೆನಿಪ್ಪುದು । ಪರಮೈಶ್ವರ್ಯಪ್ರಭೂತತಿಮಿರಾಂಧತ್ವಂ ॥ —(ಕಾ. ಕ)

ದ್ರುಪದನು ಮಾಡಿದ್ದು ಅನುಚಿತವೆಂದು ಸರ್ವಜ್ಞನ ನುಡಿಯಿಂದಲೂ ವ್ಯಕ್ತವಾಗುತ್ತದೆ.

ತ್ರಿ ॥ ಸಿರಿಯಭರವುಳ್ಳಾಗ ಮೆರೆಯುದಿರುವವ ಚಾಣ್ಕ, । ಕೊರತೆಯಾದಾಗ ಕೊಡಲೆನಗಿಲ್ಲೆಂದು । ಅರಸುವನೆ ಹೆಡ್ಡ ಸರ್ವಜ್ಞ ॥ —(ಸ.ಪ)

ಐಶ್ವರ್ಯಮದವನ್ನು ಹೊಂದಿದವರ ಹಣೆಯ ಬರೆಹವೇ ಇಷ್ಟೆಂದು ಒಬ್ಬ ಕವಿಯು ಚಮತ್ಕಾರವಾಗಿ ಹೇಳಿರುವದೇನೆಂದರೆ—

ಶ್ಲೋ ॥ ಲಕ್ಷ್ಮೀವಂತೋ ನ ಜಾನಂತಿ ಪ್ರಾಯೇಣ ಪರವೇದನಾಮ್ ।
ಶೇಷೇ ಧರಾಭರಕ್ಲಾಂತೇ ಶೇತೇ ನಾರಾಯಣಸ್ಸುಖಮ್ ॥ —(ಸು)

ಅ॥ ದುಡ್ಡಿನ ಮದವುಳ್ಳವರಿಗೆ ಮತ್ತೊಬ್ಬರ ದುಃಖವು ತಿಳಿಯುವದಿಲ್ಲ. ಭೂಮಿಯನ್ನು ಹೊತ್ತು ಬಳಲುತ್ತಿರುವ ಆದಿಶೇಷನ ಮೇಲೆ ವಿಷ್ಣು ಹಾಯಾಗಿ ಮಲಗಿದ್ದಾನೆ.

ಹೀಗೆ ಮನುಷ್ಯನು ತನ್ನನ್ನೇ ತಾನು ದೊಡ್ಡವನೆಂದು ತಿಳಿದು ನಡೆಯಬಾರದೆಂದೆಚ್ಚರಿಸುವದಕ್ಕಾಗಿ ಜ್ಞಾನಿಗಳು ಉಪದೇಶ ಮಾಡಿರುವದೇನೆಂದರೆ—

ಶಂಕರಾಭರಣ—ಝಂಪೆ

ನಿನ್ನ ಗುಣಗಳ ನೀನೆ ನುತಿಸಿ ಹಿಗ್ಗಲಿ ಬೇಡ । ಕುನ್ನಿಮನುಜನೆ, ಪೂರ್ವಿಕರನೆಲ್ಲ ಮರೆದು ॥ ಪ ॥ ನರನ ಕೀರ್ತಿಯು, ಧರ್ಮಜನ ಭೂತದಯೆ, ಭೀಮ । ನುರುತರಧೃತಿ, ರಾಘವನ ಪರಾಕ್ರಮವು, ॥ ಭರತನ ಕ್ಷಮೆ, ಹರಿಶ್ಚಂದ್ರನುನ್ನತ ಸತ್ಯ । ದಿರವು, ಕರ್ಣನ ವಿತರಣೇನು ನಿನಗುಂಟೆ? ॥ ೧ ॥ ಸನಕನದು ತಪವಗಸ್ತ್ಯನ ಪೂಜ್ಯತೆಯು, ತ್ರಿಶಂ । ಕನ ಚಿರಾಯುವು, ಸುಯೋಧನನ ಸಂಪದವು,॥ ದನುಜೇಂದ್ರನಧಟು, ಬಾಣನ ಭಕ್ತಿರತಿಯು, ಶುಕ । ಮುನಿಯ ವಿರತಿಯಭಾವವರಿಯೆ ನಿನಗುಂಟೆ ? ॥ ೨ ॥ ಕಾಳಿದಾಸನ ಕವಿತ್ವವು, ಭೋಜನೆತಿಚಾಣ್ಕ್ಮ, । ವಾಲಿಗಿಹ ಬಲುಹು, ಜನಕನ ಆತ್ಮವಿದ್ಯೆ,॥ ಕಾಲಾಂತನರಿವಿಜಯತೆಯು, ಸಗರಪುತ್ರನಾ। ಲೀಲೆ, ಹೈಹಯನ ರಾಜ್ಯವು ನಿನಗೆ ಉಂಟೇ ? ॥ ೩ ॥ ನಳನ ಚೆಲ್ವಿಕೆ, ಗೋರಕ್ಷನ ಸಿದ್ಧಿ, ವ್ಯಾಸನ ಸ । ಕಲ ಕಲಾಪರಿಣತೆಯು, । ಕೃಷ್ಣನಾ ಯುಕ್ತಿ, ॥ ಬಲಿಯ ನಂಬುಗೆ, ಭಗೀರಥನ ಯತ್ನವು, ಮೇಣ । ನಿಲತನೂಜನೆ ಸಾಹಸವು ನಿನಗೆ ಉಂಟೇ ? ॥ ೪ ॥ ಹಿಂದಣವರಾದಿವರ ಕಥೆಗೇಳಿ ಸ್ವಗುಣಂಗ । ಳಂದವನು ಹೊಗಳಲಳುಕುತ್ತೆ ಸಿರಿಯ ॥ ಮುಂದಿರ್ಪ ಸೊಣಗನಂದದಿ ನಾಚಿಕೊಳ್ಳದೆಲೆ । ಮಂದಮತಿಯೇ ನಿನಗೆ ಗುರುಸಿದ್ಧನೊಲಿಯುವನೆ? ॥ ೫ ॥ (ಕೈ. ಕ)

ದ್ರುಪದನಿಂದ ಅವಮಾನಗೊಂಡ ದ್ರೋಣನು ಈ ಅವಮಾನದಿಂದ ಆಶ್ಚರ್ಯಗೊಂಡದ್ದೆಂತೆಂದರೆ—

ಶ್ಲೋ ॥ ಅಹೋ ಕನಕಮಾಹಾತ್ಮ್ಯಂ ವಕ್ತುಂ ಕೇನಾಪಿ ಶಕ್ಯತೇ ।
ನಾಮಸಾಮ್ಯಾದಹೋ ಚಿತ್ರಂ ಧತ್ತೂರೋಽಪಿ ಮದಪ್ರದಃ ॥ —(ಸು)

ಅ॥ ಹಣದ ಮಹಿಮೆಯನ್ನು ಯಾರು ವರ್ಣಿಸುವದಕ್ಕಾದೀತು ! ಧತ್ತೂರಕ್ಕೆ ಕನಕನೆಂಬ ಹೆಸರಿರುವ ಮಾತ್ರದಿಂದಲೇ ಅದು ಮದಕಾರಿಯಾಗಿದೆ.

ಹಣದ ಮದವುಳ್ಳವರೂ ಜ್ವರಪೀಡಿತರೂ ಒಂದೇ ಎಂದು ಒಬ್ಬರು ಹೇಳಿರುವದೇನೆಂದರೆ—

ಶ್ಲೋ ॥ ಭಕ್ತೇ ದ್ವೇಷೋ, ಜಡೇ ಪ್ರೀತಿರರುಚಿರ್ಗುರುಲಙ್ಘನಮ್ । ಮುಖೇಚ ಕಟುತಾ ನಿತ್ಯಂ ಧನಿನಾಂ ಜ್ವರಿಣಾಮಿವ ॥ —(ಸು)

ಅ॥ (ಜ್ವರಪೀಡಿತರ ಪರ—೧) ಯಾವಾಗಲೂ ಅನ್ನ ಸೇರದಿರುವದು, ನೀರಿನಮೇಲೆ ಪ್ರೀತಿ, ಯಾವದೂ ರುಚಿಸುವದಿಲ್ಲ, ಹೆಚ್ಚು ಕಾಲ ಉಪವಾಸ, ಬಾಯೆಲ್ಲ ಕಹಿಯಾಗಿರುವಿಕೆ. (ಧನಮದವುಳ್ಳವರ ಪರ—೨) ಯಾವಾಗಲೂ ಭಕ್ತರನ್ನು ಕಂಡರಾಗದಿರುವದು, ಮೂರ್ಖರ ಮೇಲೆ ಪ್ರೀತಿ, ಯಾವದರಲ್ಲಿಯೂ ತೃಪ್ತಿ ಇಲ್ಲ, ದೊಡ್ಡವರ ಮಾತು ಕೇಳದಿರುವದು, ಮುತ್ತೊಬ್ಬರನ್ನು ನೋಯಿಸುವ ಮಾತು.

ಅಥವಾ ಧನಮದವನ್ನೇಕೆ ದೂರಬೇಕು? ಯಾಚನೆಯೇ ಕೆಟ್ಟದ್ದೆಂದು ಒಬ್ಬ ಕವಿ ಹೇಳಿರುವದೇನೆಂದರೆ—

ಶ್ಲೋ ॥ ಯಾಚನಾಯಾಂ ಪ್ರವೃತ್ತಸ್ಯ ಕಾ ಕಾ ನಾಮ ನ ದುರ್ದಶಾ । ಚೇತಶ್ಚೇತ್ಕ್ರಿಯತೇ ಯಸ್ಯಾಂ ಯಾತನೈವೋಪತಿಷ್ಠತೇ ॥ —(ಸು.ಲಾ)

ಅ॥ ಯಾಚನೆ ಮಾಡುವದಕ್ಕೆ ಹೊರಟವನಿಗೆ ಏನೇನು ದುರ್ದಶೆ ಬರುವದಿಲ್ಲ! ಅದರ ವಿಷಯದಲ್ಲಿ (ಚೇತಃ+ಚೇತ್) ವಿಚಾರ ಮಾಡಿದರೆ ಅದು ಯಾತನೆಯೇ ಆಗುತ್ತದೆ. ಹೇಗೆಂದರೆ (ಚೇ ತಶ್ಚೇತ್) ಯಾಚನಾ ಎಂಬ ಶಬ್ದದ ಚ ಎಂಬ ಸ್ಥಲದಲ್ಲಿ ತ ಎಂಬಕ್ಷರವನ್ನು ಹಾಕಿದರೆ ಯಾಚನೆಯೆಂಬ ಶಬ್ದವು ಯಾತನೆಯೆಂದಾಗುತ್ತದೆ.

ಅದು ಹೇಗಾದರೂ ಇರಲಿ. ಈ ಸಂದರ್ಭದಲ್ಲಿ ದ್ರುಪದನ ಅಕೀರ್ತಿಯೇನೋ ಆಚಂದ್ರಾರ್ಕವಾಗಿ ಗ್ರಂಥದಲ್ಲಿ ನಿಂತಿತು; ಹೇಗೆಂದರೆ—

ವೃ॥ ಬರೆ ದಾರಿದ್ರ್ಯದಿ ದ್ರೋಣನಂ ದ್ರುಪದ ಪೂರ್ವಸ್ನೇಹದಿಂ ಕಂಡನೇ ?। ಕುರುಭೂಪಾಲನು ಪಾಂಡುಪುತ್ರರು ಮಹಾಥರಾತ್ಮರೆಂದಿತ್ತನೇ ? ॥ ಹರಿಯಂ ತಂಗಿಯ ಬಾಲನೆಂದು ಬಗೆದೇಂ ಕಂಸಾಸುರಂ ಕಂಡನೇ? । ದೊರೆಗಳ್ಗೆತ್ತಣ ನಂಟರೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥ —(ಸೋ. ಶ)

ಹಿಂದೆ ರಾಜದ್ವಾರದಲ್ಲಿ ತಡೆಸಿಕೊಂಡ ಒಬ್ಬ ವಿದ್ವಾಂಸನು ಹೇಗೋ ರಾಜಸನ್ನಿಧಿಗೆ ಹೋಗಿ ಮತ್ತೆ ಕೇಳಿಕೊಂಡಿರುವದೇನೆಂದರೆ—

ಶ್ಲೋ ॥ ರಾಜನ್, ದೌವಾರಿಕಾದೇವ ಪ್ರಾಪ್ತವಾನಸ್ಮಿ ವಾರಣಮ್ । ಮದವಾರಣಮಿಚ್ಛಾಮಿ ತ್ವತ್ತೋಽಹಂ ಜಗತೀಪತೇ ॥ —(ಭೋ. ಪ್ರ)

ಅ॥ (೧) ರಾಜನೇ, ಬಾಗಿಲು ಕಾಯುವವನಿಂದಲೆ ನನಗೆ (ವಾರಣಂ) ತಡೆಯು ದೊರೆತಿದೆ. ನಿನ್ನಿಂದ (ಮತ್+ಅವಾರಣಂ) ನನ್ನನ್ನು ತಡೆಯದಿರುವಂತೆ ಅಪ್ಪಣೆಯಾಗಬೇಕೆಂದು ಬಯಸುತ್ತೇನೆ (೨) ರಾಜನೇ ಬಾಗಿಲು ಕಾಯುವವನಿಂದಲೇ ನನಗೆ (ವಾರಣಂ) ಆನೆಯು ದೊರೆತಿದೆ. ನಿನ್ನಿಂದ (ಮದ+ವಾರಣಂ) ಮದ್ದಾನೆಯನ್ನು ಬಯಸುತ್ತೇನೆ.

ದ್ರೋಣನು ಈ ಬಗೆಯ ದೈನ್ಯವನ್ನು ಅವಲಂಬಿಸಲಿಲ್ಲ; ರಾಜನಿಗೆ ತಕ್ಕ ಪ್ರತೀಕಾರವನ್ನೇ ಮಾಡಿಬಿಡಬೇಕೆಂದು ಆದರ ಧರ್ಮಸೂಕ್ಷ್ಮವನ್ನು ಯೋಚಿಸಿದ್ದೇನೆಂದರೆ—

ಶ್ಲೋ॥ ಆಜ್ಞಾಭಂಗೋ ನರೇಂದ್ರಾಣಾಂ ವಿಪ್ರಾಣಾಂ ಮಾನಖಂಡನಮ್ । ಪೃಥಕ್ಶಯ್ಯಾ ಚ ನಾರೀಣಾಮಶಸ್ತ್ರವಧಮುಚ್ಯತೇ ॥ . ।—೨)

ಅ॥ ರಾಜರ ಅಪ್ಪಣೆಯನ್ನು ಮೀರುವದು, ಬ್ರಾಹ್ಮಣರ ಮಾನವನ್ನು ಕಳೆಯುವದು, ಹೆಂಡತಿಯನ್ನು ಬೇರೆ ಹಾಸಿಗೆಯಲ್ಲಿ ಮಲಗಿಸುವದು— ಇವು ಶಸ್ತ್ರವಿಲ್ಲದೆ ಕೊಂದಂತೆ.

ಮತ್ತೊಂದೇನೆಂದರೆ, ಇವನನ್ನು ಈಗಲೇ ನಿಗ್ರಹಿಸಿಬಿಡುವದು ನನಗೇನೂ ದೊಡ್ಡ ಮಾತಲ್ಲ. ಆದರೆ—

ಶ್ಲೋ॥ ಅಲ್ಪಸತ್ತ್ವೇಷು ಶೂರಾಣಾಮವಜ್ಞೈವ ಹಿ ಶೋಭತೇ ॥
—(ಕ. ಸ. ಸಾ)

ಅ॥ ಅಲ್ಪಬಲವುಳ್ಳವರ ವಿಷಯದಲ್ಲಿ ಶೂರರು ತಿರಸ್ಕಾರಮಾಡಿಬಿಡುವದೇ ಚೆನ್ನಾಗಿ ಕಾಣುತ್ತದೆ.

ಆದ್ದರಿಂದ ಬ್ರಾಹ್ಮಣನಾದ ತನ್ನ ಮಾನವನ್ನು ಕಳೆದದ್ದಕ್ಕೆ ರಾಜನಾದ ದ್ರುಪದನ ಅಪ್ಪಣೆಯನ್ನು ಲಕ್ಷಿಸದೆ ಒಳಕ್ಕೆ ನುಗ್ಗಿ ಮುಯ್ಯಿಗೆ ಮುಯ್ಯಿ ತೀರಿಸಬೇಕೆಂದು ಹೋಗಿ ದ್ರೋಣನು ದ್ರುಪದನಿಗೆ ಹೇಳಿದ್ದೇನೆಂದರೆ—

ಅಠಾಣ—ಆಟತಾಳ

ಗಂಟಕ್ಕು ಮನಸಿನೊಳು । ನಾ ಹೇಳುವದ ॥ ಪ ॥ ಸುಡುವೆ ನಿನ್ನಯ ಹೊಳಲ । ಬಿಡದೆ ನಿನ್ನನು ಬಲಿ । ಗೊಡುತಿಡಗಾಲಿಂದ । ಕೆಡೆಬೀಳಲೊದೆಯುವೆ ॥ ಬಡವನೆಂದೆನ್ನನ್ನು ಭಿಡೆಯವ ಹಿಡಿಯದಿರುತಿಹೆಯ । ಐಶ್ವರ್ಯ ಭಾರದ ಸಡಗರವೆ ಇಲ್ಲಿ । ಈ ಧೀರನಲ್ಲಿ ॥ ೧ ॥ ಕಳುಹುವೆ ಶಿಷ್ಯರ । ಕೊಳುಗುಳ ಗೈಸುವೆ । ಬಲುಹಿಂದ ನಿನ್ನನು । ಎಳೆಸಿ ತರಿಸುವೆನು ॥ ತಿಳಿವ ತಳೆಯುದೆ ಬಾಯತೀಟೆಯ ಕಳೆಯಲಿರುತಿಹೆಯ ? । ನೀನಿದರ ಫಲವನು ಘಳಿಲನೇ ಪಡೆವೆ । ಇದಕಿನ್ನು ತಡವೇ?॥

ಕೊನೆಗೆ ಎಲ್ಲಿಯಾದರೂ ಒಂದು ರಾಜಾಶ್ರಯವನ್ನು ಸಂಪಾದನೆ ಮಾಡಿಯೇ ಬಿಡಬೇಕೆಂದು ದ್ರೋಣನ ಮನಸ್ಸಿಗೆ ಬಂದಿದೆ. ಏಕೆಂದರೆ—

ಶ್ಲೋ॥ ಗುಣೈಃ ಸರ್ವಜ್ಞಕಲ್ಪೋಽಪಿ ಸೀದತ್ಯೇಕೋ ನಿರಾಶ್ರಯಃ । ಅನರ್ಘಮಪಿ ಮಾಣಿಕ್ಯಂ ಹೇಮಾಶ್ರಯಮಪೇಕ್ಷತೇ ॥ —(ಸು)

ಅ॥ ಗುಣಗಳಿಂದ ಸರ್ವಜ್ಞನಿಗೆ ಸಮಾನನಾದರೂ ಆಶ್ರಯವಿಲ್ಲದೆ ಒಂಟಿಯಾದವನು ನಾಶವಾಗುತ್ತಾನೆ. ರತ್ನವು ಬಹಳ ಬೆಲೆಯುಳ್ಳದ್ದಾದರೂ ಬಂಗಾರದ ಆಶ್ರಯವನ್ನು ಬಯಸುತ್ತದೆ.

ಎಂದು ಕುರುದೇಶದ ಕಡೆಗೆ ಬರುತ್ತ ತನಗಾದ ಅವಮಾನದ ಸಂಕಟದಿಂದ ಅಲ್ಲೊಂದು ಜಿಂಕೆಯನ್ನು ಕಂಡು ದ್ರೋಣನು ಹೇಳಿದ್ದೇನೆಂದರೆ—

ಶ್ಲೋ॥ ಯದ್ವಕ್ತ್ರಂ ಮುಹುರೀಕ್ಷಸೇ ನ ಧನಿನಾಂ ; ಬ್ರೂಷೇ ನ ಚಾಟೂನ್ಮೃಷಾ ; । ನೈಷಾಂ ಗರ್ವವಚಃ ಶೃಣೋಷಿ ; ನ ಚ ತಾನ್ಪ್ರತ್ಯಾಶಯಾ ಧಾವಸಿ; ॥ ಕಾಲೇ ಬಾಲತೃಣಾನಿ ಖಾದಸಿ ; ಪರಂ ನಿದ್ರಾಸಿ ನಿದ್ರಾಗಮೇ ; । ತನ್ಮೇ ಬ್ರೂಹಿ ಕುರಂಗ, ಕುತ್ರ ಭವತಾ ಕಿಂ ನಾಮ ತಪ್ತಂ ತಪಃ? ॥ —(ಸು)

ಅ॥ ಜಿಂಕೆಯೆ, ನೀನು ಧನಿಕರ ಮುಖವನ್ನು ಬಾರಿಬಾರಿಗೂ ನೋಡುವದಿಲ್ಲ : ವ್ಯರ್ಥವಾದ ವಿನೋದದ ಮಾತುಗಳನ್ನಾಡುವದಿಲ್ಲ ; ಅವರ ಸೊಕ್ಕಿನ ಮಾತುಗಳನ್ನು ಕೇಳುವದಿಲ್ಲ ; ಏನಾದರೂ

ಪಡೆಯಬೇಕೆಂದು ಅವರ ಕಡೆಗೆ ಹೋಗುವದಿಲ್ಲ; ಹೊತ್ತು ಹೊತ್ತಿಗೆ ಎಳೇ ಹುಲ್ಲನ್ನು ತಿನ್ನುತ್ತಿ; ನಿದ್ರೆ ಬಂದಾಗ ಮಲಗುತ್ತಿ; ನೀನು ಎಲ್ಲಿ ಯಾವ ತಪಸ್ಸು ಮಾಡಿದ್ದೆ?

ಹೀಗೆ ದ್ರೋಣನು ಹಸ್ತಿನಾಪುರದ ಕಡೆಗೆ ಬರುತ್ತಿರುವಾಗ—

ದಿಂ॥ ಊರ ಮುಂದೆಲ್ಲಾ ಹುಡುಗರಾಡುವಾಗ। ಹಾರಿ ಧರ್ಮಜನುಂಗುರವು ಬೀಳೆ ಬೇಗ॥ ದಾರಿಯೊಳಗಿದ್ದಾ ಬಾವಿಯೊಂದರಲ್ಲಿ। ಬಾರದೆಂದೀಕ್ಷಿಸಿದರ್ನಿರಾಶೆಯಲ್ಲಿ॥

ಈ ಹುಡುಗರು ಹೀಗೆ ಹತ್ತು ದಿಕ್ಕುಗಳನ್ನು ನೋಡುತ್ತಿರುವಾಗ

ಶ್ಲೋ॥ ತೇಽಪಶ್ಯನ್ ಬ್ರಾಹ್ಮಣಂ ಶ್ಯಾಮಮಾಪನ್ನಂ ಪಲಿತಂ ಕೃಶಮ್। ಕೃತ್ಯವಂತಮದೂರಸ್ಥಮಗ್ನಿಹೋತ್ರಪುರಸ್ಕೃತಮ್॥ —(ಸಂ. ಭಾರ)

ಅ॥ ಹತ್ತಿರದಲ್ಲಿಯೇ ಒಬ್ಬ ಕಪ್ಪುಬಣ್ಣದ ಬ್ರಾಹ್ಮಣನು ಆಪತ್ತಿಗೊಳಗಾದವನಾಗಿ ಮುದುಕನಾಗಿ ಬಡವನಾಗಿ ಅಗ್ನಿಹೋತ್ರದೊಡನೆ ಬರುತ್ತಿರುವದನ್ನು ಅವರು ಕಂಡರು.

ಆ ದ್ರೋಣನು ಇವರ ಹತ್ತಿರಕ್ಕೆ ಬಂದು ಇವರನ್ನು ಕುರಿತು ಹೇಳಿದ್ದೇನೆಂದರೆ—

ಕಮಾಚು—ಆಟತಾಳ

ಏನಿಲ್ಲಿ ಯೋಚಿಪಿರಿ। ಅರಗುವರರೆ॥ ಪ॥ ಏನಿಲ್ಲಿ ಯೋಚಿಪಿರಿ। ಅರಗುವರರೆ॥ಅ. ಪ॥ ಚಿಂತೆಯೇನಿಹುದದ। ರಂತರಂಗವ ಹೇಳಿ। ಸಂತಸವಡಿಪೆನು। ಹಿಂತೆಗೆಯಲು ಬೇಡಿ॥ ೧॥ ಬಳಲಿಹಿರೇತಕೆ। ಕಳಕೊಂಡ ಜನರಂತೆ। ಘಳಿಲನೆ ಹೇಳಿರಿ। ಅಳಲುನೀಗವೆನಾನು॥೨॥ ಕಿರಿಯರೆಂದೆಂಬುವ। ಕರುಣವಿ ಕೇಳುವೆ। ಹಿರಿಯನೆಂದರಿತೆನ್ನ। ಮರೆಮಾಚಬೇಡಿರಿ॥ ೩॥

ಬ್ರಾಹ್ಮಣರಾಗಿ ಬಡವರಾಗಿರುವ ನಿಮ್ಮಿಂದ ನಮ್ಮ ಕಾರ್ಯವೆಂತಾಗುವದೆಂದು ಧರ್ಮಜನು ಕೇಳಲು ದ್ರೋಣನೆಂದದ್ದೇನೆಂದರೆ—

ಶ್ಲೋ॥ ಅಕ್ಷರಾಣಿ ಪರೀಕ್ಷ್ಯಂತಾಮಂಬರಾಡಂಬರೇಣ ಕಿಮ್। ಶಂಭುರಂಬರಹೀನೋಽಪಿ ಸರ್ವಜ್ಞಃ ಕಿಂ ನ ಜಾಯತೇ॥ —(ಸು)

ಅ॥ ವಿದ್ಯೆಯನ್ನು ನೋಡಿ; ಬಟ್ಟೆಯ ಆಡಂಬರದಿಂದೇನು ಪ್ರಯೋಜನ? ಶಿವನು ಬಟ್ಟೆಯಿಲ್ಲದವನಾದರೂ ಸರ್ವಜ್ಞನಾಗಿಲ್ಲವೇ?

ಆದ್ದರಿಂದ ಒಪ್ಪತ್ತಿನ ಊಟವನ್ನು ಕೊಟ್ಟರೆ ನಾನು ನನ್ನ ವಿದ್ಯೆಯನ್ನು ತೋರಿಸುತ್ತೇನೆಂದು ದ್ರೋಣನೆಂದದ್ದನ್ನು ಕೇಳಿ ಧರ್ಮಜನು ಹೇಳಿದ್ದು:—

ಕಂ॥ ಬರಿಯೊಂದು ಹೊತ್ತಿನೂಟವ। ನುರೆ ಬೇಡಿದ ನಿಮಗೆ ನಿತ್ಯದೂಟವನೀವೆಂ॥ ಬೆರಳುಂಗುರಮಂ ನೋಲಕೆ। ಬರಿಸಿರೆನಲ್ ಮಗಗೆ ಪೇಳ್ದನವನದಗೆಯ್ಯಲ್॥

ಆಗ ಅಶ್ವತ್ಥಾಮನು—

ಷ॥ ಸರಳ ತೊಡಚಿ, ತದೀಯಮುಣಿಬಂ। ಧುರದ ಮುದ್ರಿಕೆಗೆಚ್ಚು, ಹಿಳು

ಕಿನ । ಶರಕೆ ಶರವಾ ಹಿಳುಕಿನಲಿ ಕಣೆಯೆಚ್ಚು ಬಂಧದಲಿ, ॥ ಸರಳ ಸಂದರ್ಭದಲಿ ನಿಮಿಷಾಂ । ತರಕೆ ಫಣಿಪನ ಹೆಡೆವಣಿಯನು । ದ್ಧರಿಸುವಂತಿರೆ ತೆಗೆದು ಬಿಸುಟನು ರತುನಮುದ್ರಿಕೆಯ ॥ —(ಕ.ಭಾರ)

ಆಗ ಧರ್ಮಜನೂ ಮತ್ತು ಇತರರೂ ದ್ರೋಣಾಶ್ವತ್ಥಾಮರನ್ನು ಆದರಿಸಿ ತಮ್ಮೊಡನೆ ಊರಿಗೆ ಕರೆದುಕೊಂಡು ಹೋಗಿ ತಮ್ಮ ತಾತನಾದ ಭೀಷ್ಮರ ಮುಂದೆಲ್ಲವನ್ನೂ ಹೇಳಿ ಅವರನ್ನು ತಮ್ಮ ಉಪಾಧ್ಯಾಯರಾಗಿ ಮಾಡಿಕೊಡಬೇಕೆನಲು ಭೀಷ್ಮರು ಅವರಿಬ್ಬರನ್ನೂ ಯೋಗ್ಯತೆಯಲ್ಲಿ ರಾಜರಿಗೆ ಸಮರೆಂದು ಭಾವಿಸಲಾಗಿ ದ್ರೋಣನು ಹೇಳಿದ್ದು:—

ಶ್ಲೋ ॥ ಪೃಥುಕಾರ್ತಸ್ವರಪಾತ್ರಮ್ । ಭೂಷಿತನಿಶ್ಶೇಷಪರಿಜನಂ ದೇವ ॥ ವಿಲಸತ್ಕರೇಣುಗಹನಮ್ । ಸಂಪ್ರತಿ ಸಮಮಾವಯೋಃ ಸದನಮ್ ॥ —(ಸು)

ಅ॥ ಈಗ ನಮ್ಮಿಬ್ಬರ ಮನೆಯೂ ಸಮವಾಗಿವೆ. ಹೇಗೆಂದರೆ ನಿಮ್ಮ ಮನೆಯು (ಪೃಥು+ಕಾರ್ತಸ್ವರ+ಪಾತ್ರಂ) ದೊಡ್ಡ ಬೆಳ್ಳಿಯ ಪಾತ್ರೆಗಳುಳ್ಳದ್ದು ; (ಭೂಷಿತ+ನಿಶ್ಶೇಷಪರಿಜನಂ) ಎಲ್ಲ ಪರಿಜನರೂ ಅಲಂಕಾರದಿಂದ ಕೂಡಿರುವಂಥದ್ದು ; (ವಿಲಸತ್+ಕರೇಣು+ಗಹನಂ) ಶೋಭಾಯಮಾನವಾದ ಆನೆಗಳಿಂದ ಹತ್ತಿರ ಬರುವದಕ್ಕಾಗದಂಥದ್ದು. ನಮ್ಮ ಮನೆಯು (ಪೃಥುಕ+ಆರ್ತಸ್ವರ+ಪಾತ್ರಂ) ಮಕ್ಕಳ ಅಳುವಿಕೆಯ ಶಬ್ದಕ್ಕೆ ಭಾಗಿಯಾದದ್ದು ; (ಭೂ+ಉಷಿತ+ನಿಶ್ಶೇಷಪರಿಜನಂ) ಎಲ್ಲ ಪರಿಜನರೂ ನೆಲದ ಮೇಲೆ ಕುಳಿತಿರುವಂಥದ್ದು ; (ವಿಲಸತ್ಕ+ರೇಣು+ಗಹನಂ) ಬಿಲದಲ್ಲಿರುವ ಧೂಳಿಗಳಿಂದ ವ್ಯಾಪ್ತವಾದದ್ದು.

ಈ ಮಾತನ್ನು ಕೇಳಿ ಕನಿಕರಗೊಂಡು ಭೀಷ್ಮಾಚಾರ್ಯರು ದ್ರೋಣನನ್ನು ತಮ್ಮ ಎಲ್ಲ ಹುಡುಗರ ಧನುರ್ವಿದ್ಯಾಶಿಕ್ಷಕನನ್ನಾಗಿ ಮಾಡಿಕೊಂಡು ಅವನಿಗೆ ರಾಜಯೋಗ್ಯವಾದ ಸೌಕರ್ಯಗಳನ್ನೆಲ್ಲ ಮಾಡಿಕೊಟ್ಟರು. ದ್ರೋಣನ ಬಡತನವು ಇಂದು ಬಯಲಾಯಿತು. ಕೌರವರಿಗೂ ಅವರಿಗೂ ಅವರು ಧನುರ್ವಿದ್ಯೆಯನ್ನು ಕಲಿಸಿದ್ದೂ ಆಯಿತು. ಆಚಾರ್ಯರೆನಿಸಿಕೊಂಡ ದ್ರೋಣಾಚಾರ್ಯರು ಅನೋಲೊಂದು ದಿನ ರಾಜಕುಲವನ್ನೆಲ್ಲ ಸೇರಿಸಿ ತಾವು ಕಲಿಸಿದ ವಿದ್ಯೆಯನ್ನೆಲ್ಲ ತೋರಿಸಿದ ಮೇಲೆ ತಮ್ಮ ವಿದ್ಯಾರ್ಥಿಗಳನ್ನೆಲ್ಲ ಕುರಿತು ಹೇಳಿದ್ದೇನೆಂದರೆ—

ಕೇತಾರಗೌಳ—ಅಟತಾಳ

ಕೊಡಬಲ್ಲವರು ಪೇಳಿರಿ । ಗುರುದಕ್ಷಿಣೆಯನು ॥ಪ॥ ಕೊಡಬಲ್ಲವರು ಪೇಳಿ । ಬಿಡದೀಗ ವಿದ್ಯೆಯ । ಪಡೆದುಪಕಾರಕೆ । ದೃಢಚಿತ್ತದಿಂದಲಿ ॥ ಅ. ಪ ॥ ಗುರುಗಳ ಬಳಿಯಲ್ಲಿ । ವಿದ್ಯೆಯನೆಲ್ಲ । ಅರಿತ ಸಜ್ಜನರೆಲ್ಲ ॥ ಧರೆಯ ಗೃಹಸ್ಥರಾಗುವ ಮುನ್ನ ತಾವೆ ಆ । ದರದಿ ದಕ್ಷಿಣೆಯಿಾವುದನು ತಿಳಿದಿಹಿರಲ್ತೆ ॥ ೧ ॥

ವಿದ್ಯೆಯನ್ನು ಕಲಿತದ್ದೆಲ್ಲ ಮುಗಿದ ಮೇಲೆ ಗುರುದಕ್ಷಿಣೆಯನ್ನು ಕೊಡುವದು ನಮ್ಮ ದೇಶದ ಸಂಪ್ರದಾಯ. ಈ ವಿಷಯದಲ್ಲಿ ಒಬ್ಬ ಕವಿ ಹೇಳಿರುವದೇನೆಂದರೆ—

ವೃ ॥ ಮಕ್ಕಳನೋದಲಿಟ್ಟು ; ಬಿಡದೋದಿಸುವರ್ಗೆ ಮನೀಷಿತಾರ್ಥಮಂ । ದೊಕ್ಕನೆ ಕೊಟ್ಟು ಮನ್ನಿಸದೆ, ಬೇಡಿದೊಡೀಯದೆ ವಂಚನೋಕ್ತಿಯಿಂ, ॥ ಕಕ್ಕಸ

ಮಾಗಿ ಕಾಲಮನೆ ನೂಂಕಿ, ಕುಡಲ್ಮನವಿಲ್ಲದಿದ್ದರಾ । ಮಕ್ಕಳ ಬುದ್ಧಿ ಕೆಟ್ಟು ಜಡ ರಪ್ಪರವರ್ಗಳುಮುತ್ತರೋತ್ತರಂ ॥ —(ಪ್ರಾ. ಟೀ)

ಟಿ॥ ಮನೀಷಿತಾರ್ಥ = ಬಯಸಿದ ಧನ. ದೊಕ್ಕನೆ = ಬೇಗ

ಆಗ ಎಲ್ಲರೂ ನಾನು ಮುಂದು ತಾನು ಮುಂದೆಂದು ಬಂದು ದಕ್ಷಿಣೆಯನ್ನು ಬೇಡಿರೆನಲು ದ್ರೋಣರು ಹೇಳಿದ್ದು :—

ಶ್ಲೋ ॥ ಪಾಂಚಾಲರಾಜಂ ದ್ರುಪದಂ ಗೃಹೀತ್ವಾ ರಣಮೂರ್ಧನಿ । ಪರ್ಯಾನಯತ ಭದ್ರಂ ವಃ ಸಾ ಸ್ಯಾತ್ಪರಮದಕ್ಷಿಣಾ ॥ —(ಸಂ. ಭಾರ)

ಅ॥ ಪಾಂಚಾಲರಾಜನಾದ ದ್ರುಪದನನ್ನು ಯುದ್ಧದಲ್ಲಿ ಹಿಡಿದುಕೊಂಡು ಬನ್ನಿ. ಅದೇ ನಿಮಗೆ ಮಂಗಲ. ಅದೇ ದೊಡ್ಡ ದಕ್ಷಿಣೆ.

ಹೀಗೆನ್ನುತ್ತಲೇ ಈ ಕೆಲಸವನ್ನು ಲೀಲಾಜಾಲವಾಗಿ ಮಾಡುತ್ತೇವೆಂದು ಕೌರವರೆಲ್ಲರೂ ಮುಂದಾದರು. ಎಲ್ಲರಿಂದಲೂ ಆಗುವಂಥ ಕೆಲಸಕ್ಕೆ ತಾನು ಹೋಗುವದಿನ್ನೇನೆಂದು ಅರ್ಜುನನು ತನ್ನ ಅಣ್ಣತಮ್ಮಂದಿರೊಡನೆ ಹಿಂದೆಯೇ ಉಳಿದನು. ಅತ್ತ ಕೌರವರ ಸಡಗರವು ಮುಂದು ವರಿದದ್ದೆಂತೆಂದರೆ—

ರ ॥ ಸೋತು ಬಂದರು ಕೌರವರೆಲ್ಲ । ದ್ರುಪದನ ಮಗನಿಂದ ॥ಪ॥ ಜೊತೆಯೊಳು ಚತುರಂಗವು ಬರಲಾಗ । ಅತಿಬೇಗದಿ ತಾವ್ನಡೆದರು ಬೇಗ । ಬರೆ ಪಾಂಚಾಲಕೆ ದ್ರುಪದನು ಕೇಳಿ । ಭರದಿಂ ಬಂದನು ಕೋಪವ ತಾಳಿ । ಬಾಣಪರಂಪರೆ ಸುರಿಯಿತು ಮುಂದೆ । ಭೂರಿಸಿಂಹನಾದವು ಬರೆ ಹಿಂದೆ । ಬಿಳಿಗುದುರೆಯೊಳಾ ಯಾಜ್ಞಸೇನನು । ಗಳಿಲನೆ ಬಾಣವ ಬಿಡುತ್ತೈತಂದನು । ರಣವಾದ್ಯಗಳ್ಳಿದವು ದಿಗಂತವ । ಸೆಣಸಿ ಕೊಂದನಾ ಸೇನೆಯನಂತವ । ಗುಡುಗಾಡಿದನಾ ರಣಭೂಮಿಯೊಳು । ಕಡಿದನು ಕೋದಂಡಗಳನು ಮೊದಲು । ರಥಗಳನೆಲ್ಲವ ಹುಡಿಗುಟ್ಟಿದನು । ಅತಿರಥರನು ತಾ ಹೊಡೆದಟ್ಟಿದನು । ಆನೆಕುದುರೆಗಳನುರೆ ಬೀಳಿಸಿದನು । ತಾನೇ ಧ್ವಜವನು ಹಿಡಿದೇರಿಸಿದನು । ಬಗೆಬಗೆಯಾಯುಧಗಳನುಪಯೋಗಿಸಿ । ಬಿಗಿವಡೆದನು ಕುರುಸೇನೆಯನೋಡಿಸಿ । ಈ ಪರಿಯಾಗಿರಲಪಜಯವಾಗ । ತಾಪದಿ ಪುರಕೈತಂದರು ಬೇಗ ॥

ಆಮೇಲೆ ತನ್ನವರ ಅಪಜಯವನ್ನು ಸಹಿಸದೆ ಅರ್ಜುನನು ಕಾರ್ಯಸಾಧನೆಗೆ ಬಂದಿದ್ದಾನೆ—

ರ ॥ ಜಯಶೀಲನಾಗುತೆ ಬಂದನು ಪಾರ್ಥ । ರಣದೊಳಗೆ ಸಮರ್ಥ ॥ಪ॥ ಬಾಣದ ಮಳೆಯನು ಕಾಣಿಸಿ ಸೇನೆಯ । ನಾನೆ ಕುದುರೆಗಳ ಹಾನಿಗೈದು ಬಿ । ಲ್ಲಾನ ಮಾಡೆ ಸುಜ್ಞಾನಿಯಾಗ ಮುಂ । ದಾನುತಲ್ಲಿಮತ್ತೇನು ಕಂಡರೂ । ಪ್ರಾಣವ ಕಳೆದು ಮ । ಹಾನುಭಾವರೊಳು । ಮಾಸಿತನರಿಯನಧೀನಗೈದು ಸುಜ । ನಾನುರಕ್ತಿನ್ಮೈಗಾಣೆ ದಕ್ಷಿಣೆಯ । ದಾನಕಾಗಿ ಸುವಿಧಾನದಿ ಬಹಳ ನಿ । ದಾನಿಯುಪಜಯವನಾನದೆ ಹಗೆಯೊಳ । ನೂನ ವಿಕ್ರಮವ ಪೂರ್ಣಗೊಳಿಪೆನೆಂ । ಬಾ ನುಡಿ

ಪಸರಿಸೆ ತಾನಾ ದ್ರುಪದನ । ಮೌನಗೊಳಿಸಿ ನಿಜಯಾನದೊಳಿರಿಸು । ತ್ರಾತ ದ್ರುಪದನ ಸು । ಮ್ಮಾನದಿ ಗುರುವಿಗೆ ಕಾಣಿಕೆ ಕೊಡುವೊಡೆ ॥

ಅರ್ಜುನನು ಸೆರೆಹಿಡಿದು ತರುವಾಗ ದ್ರುಪದನಿಗೆ ನೆನಪಾದ ನೀತಿವಾಕ್ಯವೇನೆಂದರೆ—

ಕಂ ॥ ಬಲ್ಲಿದರ ಕೂಡೆ ಕದನಂ । ಸಲ್ಲದು ; ಬಲ್ಲವರ ಕೂಡೆ ವಾದಂ ಸಲ್ಲಂ; ॥ ನಲ್ಲೆಯರ ಕೂಡೆ ವೈರಂ । ಸಲ್ಲಂ; ಗುರುಜನದ ಕೂಡೆ ಗರ್ವಂ ಸಲ್ಲಂ ॥

(ಸ.ಶ)

ಪೀಠಿಕೆಯಲ್ಲಿ ಭಾಗವತರು ಹೇಳಿದ "ಸಿರಿ ಬಂದಕಾಲದಿ" ಎಂದು ಮೊದಲಾಗಿರುವ ನುಡಿಯ ಅರ್ಥವನ್ನು ದ್ರುಪದನು ಮನಸ್ಸಿನನಲ್ಲಿಟ್ಟುಕೊಂಡಿರದೆ ಇದ್ದದ್ದು ಈ ಪಶ್ಚಾತ್ತಾಪಕ್ಕೆ ಕಾರಣವಾಯಿತು.

ಅರ್ಜುನನು ದ್ರುಪದನನ್ನು ತಂದು ಕಾಲಮೇಲೆ ಕೆಡವಿದಾಗ ದ್ರೋಣಾಚಾರ್ಯರು ಅರ್ಜುನನನ್ನು ಶ್ಲಾಘಿಸಿ ದ್ರುಪದನನ್ನು ಕುರಿತು ಹೇಳುತ್ತಾರೆ—

ಕೀ ॥ ಶಾಂತಿಪ್ರಿಯಭೂಸುರನಾಗಿಹ ನಾನೆಂತುಂ ನಿನ್ನನು ಹಿಂಸಿಸೆನೈ; ॥ ಪಂಥವು ಸಂದಿತು; ನೆನೆ ಗೆಳೆತನವನು; । ಭ್ರಾಂತಿಯೆಲ್ಲವಳಿದುದೆ ಪೇಳೈ? ॥

ಅದಕ್ಕೆ ದ್ರುಪಧನ ಉತ್ತರ—

ಸಾ॥ ತಪ್ಪುಗೈದೆ ನಿಮಗಂದಿನ ದಿನವೆಂ । ದೊಪ್ಪಿಕೊಳ್ವೆ ನಾನೀಗ ॥ ಒಪ್ಪಿಸಿಹೆನು ನಿಮಗೆನ್ನನೆ ಈ ದಿನ । ತಪ್ಪದೆ ಪೊರೆಯಿರಿ ಬೇಗ ॥

ಆಗ ದ್ರೋಣರ ಮಾತು—

ದಿಂ ॥ ನಿನ್ನದೆಂಬೆಲ್ಲಂ ನಮ್ಮದೀಗ ನೋಡು । ಮನ್ನಿಸುತ್ತೊರೆವೆಂ ಕೇಳು ಕಟ್ಟುಪಾಡು ॥ ಇನ್ನು ಸಾಕೆಮಗುತ್ತರದೊಳಿರ್ಪ ನಾಡು । ಮುನ್ನಿನಂತಿರೆ ದಕ್ಷಿಣದಿ ರಾಜ್ಯಮಾಡು ॥

ಈ ಪ್ರಕಾರ ಅರ್ಧರಾಜ್ಯವನ್ನು ಕಳೆದುಕೊಂಡ ದ್ರುಪದನು ಆಮೇಲೆ—

ಕೀ॥ ದ್ರೋಣನ ಕೊಲ್ಲುವ ಸುತನನರ್ಜುನಗೆ । ರಾಣಿಯಾಗುತಿಹ ಸುತೆಯನ್ನು ॥ ಮಾಣದೆ ಯಜ್ಞಮುಖದಿ ಪಡೆಯಲ್ಕಾ । ಮಾನವೇಂದ್ರನುಜ್ಜುಗಿಸಿದನು.

ಆ ಯಜ್ಞವನ್ನು ಮಾಡಿಸುವದಕ್ಕೆ ಸಮರ್ಥರಾದ ಬ್ರಾಹ್ಮಣರನ್ನು ಪಡೆಯುವದಕ್ಕಾಗಿ ಅನೇಕಕಡೆ ಹುಡುಕಿ ದ್ರುಪದನು ಕಲ್ಮಾಷೀ ನದೀತೀರದಲ್ಲಿ ಬಹಳ ತಪೋನಿಷ್ಠನಾಗಿದ್ದ ಉಪಯಾಜನೆಂಬುವನ ಬಳಿಗೆ ಬಂದು ಅರ್ಬುದಸಂಖ್ಯೆಯ ಗೋವನ್ನು ಕೊಡುತ್ತೇನೆಂದು ಆಶೆಯನ್ನು ತೋರಿಸಿ ಪ್ರಾರ್ಥಿಸಿದಾಗ ಉಪಯಾಜನು ಹೇಳಿದ್ದು :—

ಸಾ॥ ಫಲವ ಬಯಸಿ ಯಜ್ಞವ ಮಾಡಿಸೆ ಮನ । ಪೊಲಿವವನೇಂ ನಾನಲ್ಲ; ॥ ಇಳೆಯೊಳಗಂಥವರೆಡೆಗೆ ಪೋಗು ನೀಂ । ನಿಲಲಿಲ್ಲೇಂ ಫಲವಿಲ್ಲ ॥

ಹೀಗೆ ಉಪಯಾಜನು ತನ್ನ ನಿಜವಾದ ಬ್ರಾಹ್ಮಣ್ಯವನ್ನು ತೋರಿಸಿಕೊಂಡನು. ದ್ರುಪದನು ಬಹಳವಾಗಿ ಆಶ್ರಯಿಸಿದ್ದರ ಮೇಲೆ ಉಪಯಾಜನು ಅವನಿಗೆ ಫಲಾಪೇಕ್ಷೆಯಿಂದ ಯಜ್ಞವನ್ನು ಮಾಡಿಸುವಂಥ ಒಬ್ಬರ ಹೆಸರನ್ನು ಸೂಚಿಸಿದ್ದೆಂತೆಂದರೆ—

ಷ॥ ಎನಗೆ ಹಿರಿಯನು ಯಾಜನಿರ್ಪನು ; । ವನದೊಳಶುಚಿಸ್ಥಲದೊಳಿಹ ಫಲ । ವನು ಪರಮಲೋಭದಲಿ ಭುಜಿಸಿದನಳುಕನವನಿದಕೆ ; ॥ ಘನತರದ ಗುರು ಸೇವೆಯೊಳಗಿ । ರ್ದನುದಿನವು ಭಿಕ್ಷಾನ್ನದೊಳು ರುಚಿ । ಯನು ಹೊಗಳುತಿಹನವನ ನೀನಾಶ್ರಯಿಸು ಹೋಗೆಂದ ॥ —(ಕ.ಭಾರ)

ಆಗ ದ್ರುಪದನು ಯಾಜನ ಬಳಿಗೆ ಹೋಗಿ ಬೇಡುತ್ತಾನೆ—

ಶಾಹನ—ಅಟತಾಳ

ಅನುಮತಿಪುದು ನೀವು । ಘನಮಹಿಮರೆ ಈಗ । ಮನವು ಮೆಚ್ಚಲು ಯಜ್ಞವನು ಗೈಸಲೆನ್ನಿಂದ ॥ಪ॥ ಎನಗಿಲ್ಲ ಗತಿ ಬೇರೆ । ಅನುಮಿತ್ರಬಂಧುವೆ, । ಮಣಿದು ಬೇಡುವೆ ನಿನ್ನ । ಎಣಿಸಬೇಡನ್ಯವ ॥ಅ. ಪ॥ ಧರೆಯ ಹಾರುವ ದ್ರೋಣ । ಧರಣೀಶನಾದೆನ್ನ । ಪರಿಭವಿಸಿರುವನು । ಪರಿಪರಿಯೊಳಗೆ; ॥ ಬರಿಯಕ್ಷತ್ರಿಯತೇಜ । ದಿರವೆ ಸಾಲದು ದ್ರೋಣ । ಗಿರದೆ ಮುಯ್ಯನು ಗೆಯ್ಯೆ । ಅರಿತು ನೋಡುತ ನೀನು ॥ ೧ ॥ ಬಡ ಹಾರುವನು ತಾನು ಪೊಡವೀಶನಾದೆನ್ನ । ಬಿಡದೆ ಭಂಗಿಸಿದುದ । ತಡೆಯಲಾರೆನು ನಾ ॥ ಎಡೆಬಿಡದವನಿಗೆ । ಪಡಿಗೆಯ್ಯೆ ಮಕ್ಕಳ । ಪಡೆಯಲಿಚ್ಛಿಸುವೆನು । ನೃಡಸಮಾನರು ನೀವು ॥ ೨ ॥

ಟ ॥ ಪಡಿ = ಪ್ರತಿ, ಬದಲು, ಮುಯ್ಯಿ.

ಯಾಜನು ಒಪ್ಪಿ ಬಂದು ಯಜ್ಞವನ್ನು ಮಾಡಿಸಿದಾಗ ದ್ರುಪದನು ಯಜ್ಞನಾರಾಯಣನನ್ನು ಪ್ರಾರ್ಥಿಸಿದ್ದೇನೆಂದರೆ—

ಕಂ ॥ ಬಂಧುರವಿರಿಯುತೆ ನೆಗಳಂ । ಬಂಧುರನೇಹದೊಳೆ ಕರಿಯನೋವಿದ ಜಗದಾ ॥ ಬಂಧು, ರಮಾಪತಿಯವಿಳಂ । ಬಂ ದುರದೃಷ್ಟತೆಯನಳಿವುದೀ ಕಿಂಕರನ ॥ —(ಸೂ.ತಾ)

ಟ ॥ ಬಂದು+ಉರವ+ಇರಿಯುತೆ. ನೆಗಳಂ = ಮೊಸಳೆಯನ್ನು. ಓವಿದ = ಕಾಪಾಡಿದ, ಅವಿಳಂಬಂ = ತಡಮಾಡದೆ.

ಯಾಜನು ಇಷ್ಟದೇವತೆಯ ಪ್ರಸನ್ನತೆಯನ್ನು ಬಯಸಿ ಯಜ್ಞಪುರುಷನನ್ನು ಸ್ತೋತ್ರಮಾಡಿದ್ದೆಂತೆಂದರೆ—

ಚೂ ॥ ಸರ್ವಸ್ವರೂಪ ನೀನೋರ್ವ, ಸರ್ವದರ್ಶನಗಳಲಿ ತೋರ್ವ, ಸರ್ವಭಕ್ತರನು ನೆರೆ ಸಾರ್ವ, ಗರ್ವಿತರ ಗರ್ವವನು ಪೀರ್ವ, ನಿರ್ವಹಿಸಿದಾಟಗಳ ಖರ್ವ । ಸರ್ವಯೋಗದ ಗುರಿಯು ನೀನು, ಸರ್ವವಸ್ತುವನು ತಿಳಿದವನು, ಸರ್ವ ಪ್ರದೇಶದೊಳಗಿರುವನು, ಸರ್ವರೊಳು ದೃಕ್ಛಕ್ತಿ ನೀನು, ಸರ್ವತೋಮುಖವನುಳ್ಳವನು, ಸರ್ವಕಾಮುಗಳ ನೀವವನು । ಯಜ್ಞದಲಿ ಗೂಢನಾಗಿರುವೆ, ಯಜ್ಞಕ್ಕೆ ಬಿಡದೆ

ನೀನೊಲಿವೆ, ಯಜ್ಞದೊಳು ನೀನೆ ಭುಂಜಿಸುವೆ, ಯಜ್ಞಕ್ಕೆ ಫಲವ ದೊರಕಿಸುವೆ । ಕೋಟಿಸೂರ್ಯಸಮಪ್ರಕಾಶ, ಸಾಟಿಯಿಲ್ಲದ ಸದ್ಗುಣಗಳ ಕೋಶ, ಆಟವಾಡುತಿಹ ಯೋಗೀಶ, ಕಾಟಗಳ ಕಳೆವ ದೇವೇಶ, ದಾಟಿಸೈ ದುಃಖವನು ಶ್ರೀಶ, ನಾಟೆನ್ನ ಮನದಿ ಜಗದೀಶ, ಮಾಟವಾಗಿಹ ಶ್ರೀನಿವಾಸ । ಲೀಲಾವತಾರವಹ ಮೂರ್ತಿ, ಕೇಳು ಪೇಳುವೆನು ನನ್ನಾರ್ತಿ, ಆಳು ನಾ ನಿನಗೆ ವಶವರ್ತಿ, ಏಳು ಬೆಳಗೈ ನಿನ್ನ ಕೀರ್ತಿ । ವಿಶ್ವಾಧಿನಾಯಕಾ, ವಿಶ್ವಾಘಬಾಧಕಾ, ವಿಶ್ವೈಕ್ಯಸಾಧಕಾ, ವಿಶ್ವಜನಕಾ। ವಿಶ್ವಜನವಂದಿತಾ, ವಿಶ್ವಗುಣರಂಜಿತಾ, ವಿಶ್ವದೊಳಗೂರ್ಜಿತಾ, ವಿಶ್ವವೇತ್ತಾ ॥

ಈ ಪ್ರಕಾರ ಸ್ತೋತ್ರವನ್ನೂ ಹೋಮವನ್ನೂ ಮಾಡಿದ ಮೇಲೆ ಯಾಜನು—

ಸಾ ॥ ನರಪತಿಸತಿ, ಬಾ ಹೋಮಶೇಷವನು । ನೆರೆ ಭುಂಜಿಸು ನೀನೀಗ ॥ ದೊರೆವರು ಮಗನೂ ಮಗಳೂ; ವಂಶವ । ಪೊರೆವರು ಬಾ ಬಾ ಬೇಗ ॥

ಎನಲು ಮದೋನ್ಮತ್ತಳಾದ ದ್ರುಪದಪತ್ನಿಯು ಹೇಳಿದ್ದು—

ಷ॥ ಮಿಂದು ಮಡಿಯಾಗಿಲ್ಲ ; ನೊಸಲಿನೊ । ಳಂದವಹ ತಿಲಕವನು ತಿದ್ದಿ । ಲ್ಲೆಂದಿನಂತೆ ಸುಗಂಧಗಳ ಪೂಸಿಲ್ಲವೀ ಮೈಗೆ; ॥ ಇಂದು ನಾಂ ಬರದಿರ್ದೊಡಂ ಬೇ । ರೊಂದು ರೀತಿಯೊಳಿಷ್ಟವೆಮಗ । ಪ್ಪಂದದೊಳ್ಮಾಡುವವು ನೀವೆಂದಿತ್ತಳು ತ್ತರವ ॥

ಆಗ ಯಾಜನು ಮಂತ್ರಪೂತವಾದ ಹವ್ಯವು ವ್ಯರ್ಥವಾಗಬಾರದೆಂದು ಅದನ್ನೂ ಯಜ್ಞೇಶ್ವರನಲ್ಲಿಯೇ ಹೋಮಮಾಡಿಬಿಟ್ಟನು. ಒಡನೆ ಆ ಅಗ್ನಿಯಿಂದ—

ಕೀ ॥ ಜ್ವಲನನ ತೆರದೊಳಗೆಃಬ್ಬ ಕುಮಾರನು । ತಳೆದು ಕವಚಖಡ್ಗಾದಿಗಳ ॥ ಬಲುಗರ್ಜಿಸುತುತ್ತಮರಥದೊಡನು । ಜ್ಜ್ವಲಿಸಿ ಬೆಳಗಿದನು ದಿಕ್ಕುಗಳ ॥

ಆಗ ಆಕಾಶವಾಣಿಯಾದದ್ದೇನೆಂದರೆ—

ಶ್ಲೋ ॥ ಧೃಷ್ಟತ್ವಾದತ್ಯಮರ್ಷಿತ್ವಾದ್ದ್ಯುಮ್ನಾದ್ಯುತ್ಸಂಭವಾದಪಿ । ಧೃಷ್ಟದ್ಯುಮ್ನಃ ಕುಮಾರೋಽಯಂ ದ್ರುಪದಸ್ಯ ಭವತ್ವಿತಿ ॥ —(ಸಂ.ಭಾರ)

ಅ॥ ಧಿಟ್ಟನಾದ್ದರಿಂದ, ಕೋಪಿಯಾದ್ದರಿಂದ, ಮತ್ತು ಕವಚ ಮೊದಲಾದ ಧನದೊಡನೆ ಹುಟ್ಟಿದ್ದರಿಂದ ಈ ಹುಡುಗನು ಧೃಷ್ಟದ್ಯುಮ್ನನೆನಿಸಿ ದ್ರುಪದನ ಮಗನಾಗಿರುವನು.

ಆಮೇಲೆ—

ಷ॥ ವೇದಿಮಧ್ಯವನೊಡೆದು ಮೂಡಿದ । ಳಾದರಿಸೆ ಜನವಮಮ ! ಕಾಮನ। ಕೈದುವೋ ! ತ್ರೈಲೋಕ್ಯಮೋಹನಮಂತ್ರದೇವತೆಯೋ ! ॥ ಕಾದುವರೆ ಕರೆ ಹರಿಹರಬ್ರಹ್ಮಾದಿಗಳಿಗೊರೆಯೆಂಬಹಂಕೃತಿ । ಯಾದುದಾ ಕಾಮಂಗೆ ದ್ರುಪದಾತ್ಮಜೆಯ ಜನನದಲಿ ॥ —(ಕ. ಭಾರ)

ಆಗ ಆಕಾಶವಾಣಿಯು—

ಶ್ಲೋ॥ ಕೃಷ್ಣೇತ್ಯೇವಾಬ್ರುವನ್ ಕೃಷ್ಣಾಂ; ಕೃಷ್ಣಾಭೂತ್ಸಾ ಹಿ ವರ್ಣತಃ ।
—(ಸಂ.ಭಾರ)

ಅ॥ ಕೃಷ್ಣನ ಅನುಗ್ರಹದಿಂದ ಹುಟ್ಟಿದ ಆಕೆಯನ್ನು ಕೃಷ್ಣೆ ಎಂದೇ ಕರೆಯಿತು. ಆಕೆಯು ಬಣ್ಣದಲ್ಲಿಯೂ ಕಪ್ಪಾಗಿಯೇ ಇದ್ದಳು.

ದ್ರುಪದನು ಆಕೆಯನ್ನು ಅರ್ಜುನನಿಗಾಗಿ ಮೀಸಲುಮಾಡಿದನು. ದ್ರುಪದನ **ಈ ನಡೆವಳಿಕೆಯನ್ನು ಮನದಲ್ಲಿಟ್ಟುಕೊಂಡೇ ಭಾಗವತಶಿರೋಮಣಿಗಳು ಕಥಾರಂಭದಲ್ಲಿ "ಶತ್ರುವೆನ್ನದೆ ಮಿತ್ರನೆನ್ನದೆ" ಎಂಬ ನುಡಿಯನ್ನು ಜನರಿಗೆ ಉಪದೇಶಮಾಡಿದ್ದು.** ಇಂತು ದ್ರುಪದರಾಜನು ತನ್ನನ್ನು ನಿಗ್ರಹಿಸಿದಂಥ ಅರ್ಜುನನಲ್ಲಿ ಕೂಡ ಗುಣಗ್ರಹಣಮಾಡಿ ಅವನಲ್ಲಿ ಸಂಬಂಧವನ್ನು ಬೆಳೆಸಿದಂತೆ ಜಗತ್ತೆಲ್ಲ ಗುಣಗ್ರಹಣತತ್ಪರವಾಗಲೆಂದೇ **ಕೀರ್ತನಾರಂಭದಲ್ಲಿ ಭಾಗವತಶಿರೋಮಣಿಗಳು "ಬಹುದೊಡ್ಡ ಗುಣವಿದುಜಗದೊಳಗೆ" ಎಂದು ಮೊದಲಾಗಿ ಉಪದೇಶಮಾಡಿರುವರು.**

ದ್ರೌಪದೀಸ್ವಯಂವರ

ಪೀಠಿಕೆ—ವೀರತ್ವಪ್ರದರ್ಶನ

ಶಂಕರಾಭರಣ—ರೂಪಕ

ವೀರವೃತ್ತಿಯ ತೋರೆ ಧನ್ಯನು । ಈ ಲೋಕದೊಳಗೆ ॥ಪ॥ ವೀರವೃತ್ತಿಯ ತೋರಲೊಡನೆ । ಶೌರಿಯಾಶ್ರಯ ಸಾರಿ ಬರ್ಪುದು ॥ ಅ. ಪ ॥ ಮುನಿದು ನೀನು ಕಡಿಮೆಯೆಂದು । ಮನದಿ ಸೊಕ್ಕುತೊಬ್ಬನುಡಿಯೆ ॥ ಘನಶೌರ್ಯವನ್ನು ತೋರಿ । ತನಗೆಣೆಯಿಲ್ಲೆನಿಸುವಂಥ ॥ ೧ ॥ ಪ್ರಾಯ ಬಂದು ಸಂಸಾರದ । ದಾಯದ ಮೇಲಿಚ್ಛೆಯಾಗೆ ॥ ಸ್ತ್ರೀಗೆ ಮುನ್ನಮೇ ಜಯ । ಶ್ರೀಯ ಕೈಯ ಹಿಡಿಯುವಂಥ ॥ ೨ ॥ ಸರ್ವಸಾಮರ್ಥ್ಯಮಿರೆಯು । ಮುರ್ವಿಯೊಳಗೆ ಗುರುಹಿರಿಯರ ॥ ಸರ್ವವಚನಗಳಿಗುನೊಲಿದ । ಖರ್ವಬೆಲೆಯನೀಯುವಂಥ ॥೩॥

ಜಗತ್ತಿನಲ್ಲಿ ಸುಖಕ್ಕೆ ಸಂಸಾರದ ಹೊರತು ಗತ್ಯಂತರವಿಲ್ಲವೆಂದು ತಿಳಿದು ಜನರು ಸುಖದ ಮೇಲೆ ದುಃಖವನ್ನೂ ದುಃಖದ ಮೇಲೆ ಸುಖವನ್ನೂ ಹೊಂದುತ್ತಿರುವದನ್ನು ನೋಡಿ ಪರಮಕಾರುಣಿಕರಾದ ಭಾಗವತಶಿರೋಮಣಿಗಳು ಸಂಸಾರದ ಸುಖದುಃಖಮಿಶ್ರಿತತ್ವವನ್ನು ಅವರಿಗೆ ನೆನಪುಗೊಡುವದಕ್ಕಾಗಿ ನೀತಿಶಾಸ್ತ್ರಕಾರರ ವಾಕ್ಯವನ್ನು ಉದಾಹರಿಸುವದೇನೆಂದರೆ—

ಶ್ಲೋ॥ ಕ್ವಚಿದ್ವಿದ್ವದ್ಗೋಷ್ಠೀ; ಕ್ವಚಿದಪಿ ಸುರಾಮತ್ತಕಲಹಃ; । ಕ್ವಚಿದ್ವೀಣಾವಾದಃ; ಕ್ವಚಿದಪಿ ಚ ಹಾಹೇತಿ ರುದಿತಮ್; ॥ ಕ್ವಚಿದ್ರಮ್ಯಾ ರಾಮಾ;

ಕ್ವಚಿದಪಿ ಜರಾಜರ್ಜರತನು | ರ್ನ ಜಾನೇ ಸಂಸಾರಃ ಕಿಮಮೃತಮಯಃ ಕಿಮು ವಿಷಮಯಃ ॥ —(ಸು)

ಅ॥ ಒಂದುಕಡೆ ಜ್ಞಾನಿಗಳ ಸಹವಾಸ; ಒಂದುಕಡೆ ಹೆಂಡವನ್ನು ಕುಡಿದವರ ಜಗಳ; ಒಂದು ಕಡೆ ವೀಣಾನಾದ; ಒಂದುಕಡೆ ಹಾ! ಹಾ!! ಎಂದು ಅಳುವ ಶಬ್ದ; ಒಂದು ಕಡೆ ಮನೋಹರಳಾದ ಸ್ತ್ರೀ; ಒಂದು ಕಡೆ ಮುಪ್ಪಿನಿಂದ ಗಳಿತವಾದ ದೇಹ—ಇದನ್ನೆಲ್ಲ ನೋಡಿದರೆ ಸಂಸಾರವು ಅಮೃತದಿಂದ ಮಾಡಿದ್ದೋ ವಿಷದಿಂದ ಮಾಡಿದ್ದೋ ಕಾಣೆ.

ಸಂಸಾರವು ಹೀಗಿದ್ದರೂ ಇದರ ಹಣೆಯಬರೆಹವನ್ನು ಗೊತ್ತುಮಾಡುವ ಉದ್ಯೋಗವೇನಾದರೂ ನಡೆದಿರುವದೊ? ಎಂದರೆ—

ಶ್ಲೋ॥ ನಿರ್ವಿವೇಕತಯಾ ಬಾಲ್ಯಂ, ಕಾಮೋನ್ಮಾದೇನ ಯೌವನಂ, ।
ವೃದ್ಧತ್ವಂ ವಿಕಲತ್ವೇನ, ಸದಾ ಸೋಪದ್ರವಂ ನೃಣಾಮ್ ॥ —(ಸು)

ಅ॥ ಬಾಲ್ಯದಲ್ಲಿ ವಿಚಾರಶಕ್ತಿ ಇಲ್ಲದಿರುವಿಕೆ; ಯೌವನದಲ್ಲಿ ಕಾಮಾವೇಶದಿಂದ ಎಚ್ಚರ ತಪ್ಪಿರುವಿಕೆ; ಮುಪ್ಪಿನಲ್ಲಿ ದೌರ್ಬಲ್ಯ—ಹೀಗೆ ಯಾವಾಗಲೂ ಉಪದ್ರವದಿಂದ ಕೂಡಿರುವದೇ ಆಗಿದೆ.

ಹೀಗಾಗಿ ಕೊನೆಗೆ ಆಗಿರುವ ಪರಿಣಾಮವೇನೆಂದರೆ—

ಶ್ಲೋ॥ ದಾರಾಃ ಪರಿಭವಕಾರಾಃ; । ಬಂಧುಜನೋ ಬಂಧನಂ; ವಿಷಂ ವಿಷಯಾಃ; ॥ ಕೋಽಯಂ ಜನಸ್ಯ ಮೋಹೋ ! । ಯೇ ರಿಪವಸ್ತೇಷು ಸುಹೃದಾಶಾ ॥ —(ಸು)

ಅ॥ ಹೆಂಡತಿ ಮೊದಲಾದವರು ತಿರಸ್ಕಾರವನ್ನುಂಟುಮಾಡುವರು; ಬಂಧುಜನಗಳೆಲ್ಲ ನಮ್ಮನ್ನು ತಮ್ಮ ಕಟ್ಟಿಗೊಳಪಡಿಸಿಕೊಂಡವರಾಗಿರುವರು; ವಿಷಯುಗಳೆಲ್ಲ ವಿಷ; ಹೀಗಿದ್ದರೂ ನಮ್ಮ ಹಗೆಗಳನ್ನೆ ಗೆಳೆಯರೆಂದು ಹಾರಯಿಸುವದು ಜನರಲ್ಲಿ ಎಷ್ಟು ದೊಡ್ಡ ಅಜ್ಞಾನ!

ಇದರಿಂದ ನಮಗೆ ಫಲವಾಗುವದೇನೆಂದರೆ—

ಶ್ಲೋ ॥ ಅಶನಂ ಮೇ; ವಸನಂ ಮೇ; । ಜಾಯಾ ಮೇ; ಬಂಧುವರ್ಗೋ ಮೇ;॥ ಇತಿ ಮೇಮೇಕುರ್ವಾಣಮ್। ಕಾಲವೃಕೋ ಹಂತಿ ಪುರುಷಾಜಮ್—(ಸು)

ಅ॥ ನನಗೆ (ಅಥವಾ ನನ್ನ) ಅನ್ನ, ನನಗೆ ಬಟ್ಟೆ, ನನಗೆ ಹೆಂಡತಿ, ನನಗೆ ಬಂಧುಗಳು—ಹೀಗೆ ಮೇ ಮೇ (ನನಗೆ ನನಗೆ) ಎಂಬ ಪುರುಷರೂಪವಾದ ಹೆಣ್ಣು ಆಡನ್ನು ಕಾಲರೂಪನಾದ ತೋಳನು ಕೊಲ್ಲುವನು.

ಆ ಮರಣವನ್ನು ತಪ್ಪಿಸಿಕೊಳ್ಳಬೇಕೆಂದು ದಾಸರು ದೇವರಿಗೆ ಶರಣು ಹೋಗಿರುವದೆಂತೆಂದರೆ—

ಮೋಹನ—ಝಂಪೆ

ಪೂರ್ವಜನ್ಮದಿ ನಾನು ಮಾಡಿದಾ ಕರ್ಮದಿಂ । ಉರ್ವಿಯೊಳು ಜನಿಸಿದೆನೊ ಕೃಷ್ಣಾ ॥ ಕಾರುಣ್ಯನಿಧಿಯೆನ್ನ ಕಾಯಬೇಕಯ್ಯ ಹರಿ । ವಾರಿಜೋದರ ಮುದ್ದು ಕೃಷ್ಣಾ ॥ ಪ ॥ ಹುಟ್ಟಬಂದಾಮೇಲೆ ಸುಖವೆಂಬುದನು ಕಾಣೆ । ಕಷ್ಟಬಟ್ಟೆನು ಕೇಳೊ ಕೃಷ್ಣಾ ॥ ತೊಟ್ಟಿಲಿನ ಶಿಶು ಬಾಯಿ ಬಿಟ್ಟ ತೆರದಿಂದೆ ಕಂ। ಗೆಟ್ಟ

ಕುಳಿತಿಹೆನೊ ಕೃಷ್ಣಾ ॥ ಹುಟ್ಟಲೆಂದಾಶಿಸಿದ ಬಂಧುಜನಗಳು ನನ್ನ । ಅಟ್ಟಿ ಬಡಿಯುವರೊ ಕೃಷ್ಣಾ । ಕಷ್ಟದಾರಿದ್ರ್ಯವನು ಬಿಡಿಸದಿದ್ದರೆ ಯಾರು । ಮುಟ್ಟುವರು ಪೇಳು ಕೃಷ್ಣಾ ॥ ೧ ॥ ಕಾಸುಗಳ ಬಯಸುತಲಿ ಈಸುದಿನಗಳವರೆಗು । ಆಸೆಗುಳಿಯಾದೆ ಕೃಷ್ಣಾ ॥ ಹೇಸಿಗೆಯ ಸಂಸಾರದಲಿ ಬದ್ಧನಾಗಿ ಬಲು । ಗಾಸಿಗೊಳಲಾರೆ ಕೃಷ್ಣಾ ॥ ಗಾಸಿಮಾಡದೆ ಯೆನ್ನ ಪಾಪಗಳ ಪರಿಹರಿಸೊ ।ಕ್ಲೇಶನಾಶಕನೆ ಕೃಷ್ಣಾ। ವಾಸುದೇವನೆ ಎನ್ನ ಕಾಯಬೇಕಯ್ಯ ಹರಿ। ಕಂಸಮರ್ದನನೆ ಕೃಷ್ಣಾ ॥೨॥ ಲೋಕದೊಳು ಎನ್ನ ಪೋಲುವ ಪಾಪಿಗಳು ಉಂಟೆ। ನೀಕಂಡುಬಲ್ಲೆ ಕೃಷ್ಣಾ ॥ ರಾಕೇಂದುಮುಖಿಯು ದ್ರೌಪದೀದೇವಿ ಮೊರೆಯಿಡಲು । ಆಕೆಗಕ್ಷಯವಿತ್ತೆ ಕೃಷ್ಣಾ । ಸಾಕಿನ್ನು ಎನಗೊಂದು ಗತಿಯ ತೋರಿಸಿ ಸದ್ವಿ । ವೇಕಿಯನು ಮಾಡು ಕೃಷ್ಣಾ । ಶ್ರೀಕಾಗಿನೆಲೆಯಾದಿ ಕೇಶವನೆ ನಿನ್ನ ಸುಕ।ಥಾಮೃತವನುಣಿಸು ಕೃಷ್ಣಾ ॥೩॥—(ದಾ)

ಮರಣದ ಭಯವನ್ನು ತಪ್ಪಿಸುವಂಥ ವೇದಾಂತವನ್ನು ಈಗ ಓದುವವರೇ ದಿಕ್ಕಿಲ್ಲ. ಯಾರಾದರೂ ಅಲ್ಲಲ್ಲಿ ಓದಿದರೂ ಅವರು ಈಗ ಯಾವ ಸ್ಥಿತಿಯಲ್ಲಿರುವರೆಂದರೆ—

ಶ್ಲೋ ॥ ಕುಶಲಾಃ ಶಬ್ದವಾರ್ತಾಯಾಂ ವೃತ್ತಿಹೀನಾಃ ಸುರಾಗಿಣಃ । ಕಲೌ ವೇದಾಂತಿನೋ ಭಾಂತಿ ಫಾಲ್ಗುನೇ ಬಾಲಕಾ ಇವ ॥ —(ಸು)

ಅ॥ ಮಾತಾಡುವದರಲ್ಲಿ ಕುಶಲರು; ಆದರಂತೆ ಆಚರಣೆ ಇಲ್ಲ. ಹೀಗೆ ಕಲಿಯುಗದ ವೇದಾಂತಿಗಳು ವಿಷಯಾಸಕ್ತರಾಗಿ ಫಾಲ್ಗುನಮಾಸದ ಬಾಲಕರಂತೆ (ಕಾಮನಹಬ್ಬದಲ್ಲಿ ಹುಡುಗರು ತಮಗೆ ಅನುಭವವಿಲ್ಲದ ಭಂಡಮಾತುಗಳನ್ನಾಡುವಂತೆ) ಇದ್ದಾರೆ.

ಹೀಗಾಗಿರುವ ಕಾರಣವೇನೆಂದರೆ—

ಶ್ಲೋ ॥ ಉಪನಯನವಿವಾಹಾವುತ್ಸವೈಕಪ್ರಧಾನೌ । ಕಲಿವಿಭವತ ಏಷಾಂ ಕಾಲದೇಶಾನಭಿಜ್ಞಾಃ ॥ ವಿಜಹತಿ ನ ಕದಾಚಿದ್ವೇದಪಾಠೈಕಯೋಗ್ಯೇ । ವಯಸಿ ಚ ಯವನಾನೀ ವಾಚನಾಭ್ಯಾಸಮೇತೇ ॥ —(ಸು)

ಅ॥ ಕಲಿಪ್ರಭಾವದಿಂದ ಮುಂಜಿ, ಮದುವೆ—ಎಂಬಿವು ಬರೀ ಉತ್ಸವದಲ್ಲಿ ಮುಗಿದು ಹೋಗತಕ್ಕವುಗಳಾಗಿವೆ. ಯಾವ ಯಾವ ದೇಶಕಾಲಗಳಲ್ಲಿ ಏನೇನು ಮಾಡಬೇಕೆಂಬುದನ್ನರಿಯದ ಈಗಿನವರು ವೇದಪಾಠಕ್ಕೆ ಮಾತ್ರ ಯೋಗ್ಯವಾದ ವಯಸ್ಸಿನಲ್ಲಿ ಕೂಡ ಯವನಭಾಷೆಯ ಅಭ್ಯಾಸವನ್ನೆಂದಿಗೂ ಬಿಡುವದಿಲ್ಲ.

ಟಿ॥ ಯವನಭಾಷೆಯೆಂದರೆ ತುರುಷ್ಕಭಾಷೆ. ಈ ಶ್ಲೋಕವು ತುರುಷ್ಕಭಾಷೆಯ ಪ್ರಾಬಲ್ಯವಿದ್ದಾಗ ಹೇಳಿದ್ದು. ಈಗ ಇದನ್ನು ಇಂಗ್ಲೀಷು ಭಾಷೆಗೆ ಅನ್ವಯಿಸಿಕೊಳ್ಳಬಹುದು.

ಹೀಗೆ ವಿಷಯಾಸಕ್ತಿಯಿಂದ ತತ್ತ್ವಶಾಸ್ತ್ರವನ್ನು ಹಾಳುಮಾಡಿಕೊಂಡಿರುವವರು ಬರೀ ಗೃಹಸ್ಥರು ಮಾತ್ರವೇ ಅಲ್ಲ.

ಶ್ಲೋ ॥ ಭಿಕ್ಷಾಶನಂ; ಭವನಮಾಯತನೈಕದೇಶಃ; । ಶಯ್ಯಾ ಭುವಃ; ಪರಿಜನೋ ನಿಜದೇಹಭಾರಃ ; ॥ ವಾಸಶ್ಚ ಜೀರ್ಣಪಟಖಂಡನಿಬದ್ಧಕಂಥಾ ; । ಹಾಹಾ! ತಥಾಪಿ ವಿಷಯಾನ್ನ ಜಹಾತಿ ಚೇತಃ ॥ —(ಸು)

ಅ॥ ಉಣ್ಣುವದು ಭಿಕ್ಷೆ ; ಇರುವದು ಮನೆಯಲ್ಲೊಂದು ಮೂಲೆ; ಹಾಸಿಗೆ ಭೂಮಿ; ಪರಿಜನರು ದೇಹಮಾತ್ರ ; ಹೊದಿಕೆ ಹಳೆಯುವನ್ನು ಹೊಲಿದದ್ದು. ಆದರೂ ಕೂಡ (ಇಂಥವರ ಮನಸ್ಸೂ) ವಿಷಯಗಳನ್ನು ಬಿಟ್ಟಿಲ್ಲ.

ಮನಸ್ಸನ್ನು ವಿಷಯಗಳ ಕಡೆಯಿಂದ ತಿರುಗಿಸಬೇಕಾದರೇನು ಮಾಡಬೇಕೆಂದರೆ—

ಶ್ಲೋ ॥ ಅಯಿ ಚಿತ್ತಸಮುತ್ಥಪಿತ್ಥವಾದ್ಭ್ರಶಮುತ್ಕ್ಲೇಶಯತೇ ಭವೋ ಯದಿ । ಸಮಸಿತರುಚಿರಾಜ್ಯಸಂಭೃತಮ್।ಭಜ ಶೀಘ್ರಂ ಸುಖದಂ ಮಹಾಗದಮ್॥

—(ಸು.ಲಾ)

ಅ॥ ಎಲೆ ಮನಸ್ಸೆ, ಸಂಸಾರವು ಪಿತ್ಥವೆದ್ದಂತೆ ನಿನಗೆ ತೊಂದರೆಯನ್ನು ಕೊಡುತ್ತಿದ್ದರೆ (೧) (ಸಮ+ಸಿತ+ರುಚಿರ+ಆಜ್ಯ+ಸಂಭೃತಂ) ಸಮಪ್ರಮಾಣದಿಂದ ಬಿಳೀಸಕ್ಕರೆ, ಒಳ್ಳೆ ತುಪ್ಪ-ಇವು ಕೂಡಿದಂಥ (ಮಹಾಗದಂ) ಶುಂಠಿಯನ್ನು ತಿನ್ನು. (೨) (ಸಮ್+ಆಸಿತ+ರುಚಿ+ರಾಜ್ಯಸಂಭೃತಂ) ಒಳ್ಳೆ ನೀಲವಾದ ಕಾಂತಿಯಿಂದ ಜಗತ್ತಿನಲ್ಲೆಲ್ಲ ತುಂಬಿಕೊಂಡಿರುವಂಥ (ಮಹಾಗದಂ) ಮಹಾಗದೆಯುಳ್ಳ ವಿಷ್ಣುವನ್ನಾರಾಧಿಸು.

ಆ ವಿಷ್ಣುವನ್ನು ಕೇಳಿಕೊಳ್ಳಬೇಕಾದ್ದೇನೆಂದರೆ—

ಜುಂಜೋಟಿ—ರೂಪಕ

ತೋರಬಾರದೆ ಚಾರುಮುಖವ । ಸಾರಸಾಕ್ಷನೆ । ದೇವ ॥ ಪ ॥ ಬಾರಿ ಬಾರಿಗು ಹುಡುಕಿ ನಿನ್ನ । ದಾರಿಗಾಣೆನೊ ॥ ಅ. ಪ ॥ ಎಲ್ಲ ಕಡೆಯೊಳಿರುವನೆಂಬ। ಬಲ್ಲಜನಗಳ ॥ (ದೇವ) । ಸೊಲ್ಲು ನಿಶ್ಚಯವಾಗೆ ತೋರು । ಇಲ್ಲಿಯೇ ನೀನು ॥೧॥ ಹಿಂದೆ ಮುಂದೆ ಇಂದೂ ಇರುವೆ । ಎಂದು ಪೇಳ್ವುದು । (ದೇವ) । ಚಂದದಿಂದ ಲೊಪ್ಪುವಂತೆ । ಮುಂದೆ ಬಾ ನೀನು ॥ ೨ ॥ ಎಲ್ಲ ವಸ್ತುಗಳಲ್ಲಿಹುದನು । ಸುಳ್ಳು ಮಾಡದೆ । (ದೇವ) । ನಿಲ್ಲು ದಯೆಯೊಳೆನ್ನ ಹೃದಯ । ದಲ್ಲಿ ಚಿನ್ಮಯ ॥ ೩ ॥

—(ಭಕ್ತಿ ಗೀ)

ತನ್ನ ಸಾಕ್ಷಾತ್ಕಾರದ ಸಾಧನವನ್ನು ಆ ಪರಮಾತ್ಮನೇ ಹೇಳಿರುವದೇನೆಂದರೆ—

ಶ್ಲೋ ॥ ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ । ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥ —(ಭ. ಗೀ)

ಅ॥ ಅರ್ಜುನ, ನನ್ನ ಸಂಬಂಧವಾದ ಕರ್ಮಗಳನ್ನೆ ಮಾಡುವವನಾಗಿ ನನ್ನನ್ನೆ ಹೆಚ್ಚಿನ ಗತಿಯೆಂದು ತಿಳಿದವನಾಗಿ ನನ್ನಲ್ಲಿ ಪ್ರೇಮವಿಶೇಷವನ್ನಿಟ್ಟು ವಿಷಯದ ಆಸಕ್ತಿಯನ್ನು ಬಿಟ್ಟು ಯಾವದರಲ್ಲಿಯೂ ಹಗೆತನವನ್ನಿಡದೆ ಇರುವವನು ನನ್ನನ್ನು ಪಡೆಯುತ್ತಾನೆ.

ಇದೇ ವಿಷಯದಲ್ಲಿ ಉಪನಿಷತ್ತು ಹೇಳುವದೇನೆಂದರೆ—

ಶ್ರು॥ ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ । ಶರಂ ಹ್ಯುಪಾಸಾನಿಶಿತಂ ಸಂದಧೀತ ॥ ಆಯಮ್ಯ ತದ್ಭಾವಗತೇನ ಚೇತಸಾ। ಲಕ್ಷ್ಯಂ ತದೇವಾಕ್ಷರಂ ಸೋಮ್ಯವಿದ್ಧಿ ॥

—(ಮುಂ)

ಅ॥ ಉಪನಿಷತ್ತಿನಲ್ಲಿ ಹೇಳಿದ ಓಂಕಾರವೆಂಬ ಧನುಸ್ಸನ್ನು ತೆಗೆದುಕೊಂಡು ಉಪಾಸನೆ

ಯಿಂದ ಹರಿತವಾದ ತನ್ನ ಜೀವಾತ್ಮನೆಂಬ ಮಹಾಸ್ತ್ರವನ್ನು ಹೂಡಿ ಕಿವಿವರೆಗೆ ಎಳೆದು ಅದೇ ಭಾವನೆಯಲ್ಲಿರುವ ಚಿತ್ತದಿಂದ ಆ ಪರಬ್ರಹ್ಮವನ್ನೆ ಗುರಿಯಾಗಿ ತಿಳಿದುಕೊ.

ಇಂಥ ಚಿತ್ತೈಕಾಗ್ರತೆಯನ್ನು ಪಡೆಯುವದಕ್ಕೆ ಸಾಧನವಾಗಿ ಭಗವದ್ಭಕ್ತರು ಉಪದೇಶಿಸುವದೇನೆಂದರೆ—

ದರ್ಬಾರು—ಆದಿತಾಳ

ನಾಮಸಂಕೀರ್ತನೆ ನಮಗಿರಲೇಗಳೂ ॥ಪ॥ ಮಾಮನೋಹಾರಿ ಶ್ರೀಶೌರಿ ನಾರಾಯಣನ ॥ಅ. ಪ ॥ ಬೆಳಗಿನಜಾವದೊಳಳಿಯಲು ನಿದ್ರೆಯು । ಬೆಳಕುಗಳೆಲ್ಲಕು ಬೆಳಕಹ ದೇವನ ॥೧॥ ಸ್ನಾನಸಂಧ್ಯಾಜಪಧ್ಯಾನದ ಕಾಲದೆ । ಮೌನಿಹೃನ್ಮಂದಿರಜ್ಞಾನದೀಪಾಯತನ ॥ ೨ ॥ ನಡುಹಗಲಾಗಲು ಪಡೆದುದ ಭುಂಜಿಸಿ । ಅಡಿಗಡಿಗಾ ಜಗದೊಡೆಯ ಗೋವಿಂದನ ॥ ೩ ॥ ಜೀವನಯಾತ್ರೆಗೆಂದೇ ವ್ಯವಹಾರವ । ನಾವೆಸಗುತ್ತಿರೆ ಕಾವ ಕರುಣಾಳುವ ॥ ೪ ॥ ಕನಸಿಲಿ ಕಂಡುದ । ನೆನಸುತ ನಾವಿರೆ । ಅನಘತತ್ತ್ವಾರ್ಥವ । ನನುಗೊಳಿಪ ಶಂಕರ ॥ —(ಆ.ಗೀ)

ಟಿ॥ ಮಾಮನೋಹಾರಿ=ಲಕ್ಷ್ಮೀಪತಿ. ಅನುಗೊಳಿಪ=ಕೊಡಿಸುವ, ಅನುಗ್ರಹಿಸುವ.

ನಮಗೆ ಜ್ಞಾನೇಂದ್ರಿಯಗಳಿರುವದಕ್ಕೆ ಇದೇ ಸಾಧಕವೆಂದು ಸರ್ವಜ್ಞನು ಹೇಳಿರುವದೇನೆಂದರೆ—

ತ್ರಿ॥ ಕಣ್ಣು ನಾಲಿಗೆ ಮನವ ಪನ್ನಗಧರ ಕೊಟ್ಟ। ಚೆನ್ನಾಗಿ ಮನವ ನಿಲಿಸುತ್ತ ಬಿಡದೆ ಶ್ರೀ । ಚೆನ್ನನ ನೆನೆಯೊ ಸರ್ವಜ್ಞ ॥ —(ಸ.ಪ)

ಅಂಥವರೇ ನಿಜವಾದ ಸಾಧಕರೆಂದು ಕವಿ ಹೇಳಿರುವದೇನೆಂದರೆ—

ವೃ ॥ ಅದನರಿದಾತನೆಲ್ಲಮರಿದಾತನದೊಂದನೆ ಕಂಡನೆಲ್ಲಮಂ । ಸದರದೆ ಕಂಡನಲ್ಲಿಗೆ ಮನಂ ವಶಮಾದೊಡೆ ಮುಕ್ತಿಸಾಧ್ಯಮಾ ॥ ದುದು; ಹಲವೇಕದೊಂದು ಪೊರಗಾದೊಡೆ ಕಲ್ತು ಸಮಸ್ತಶಾಸ್ತ್ರದಿಂ । ಚದುರರೆನಿಕ್ಕುಮಾತ್ಮಪದಸಾಧಕರೇ ಅವರಾ ಅಪರಾಜಿತೇಶ್ವರಾ ॥ —(ಅ.ಶ)

ಈ ಸ್ಥಿತಿಯನ್ನು ಪಡೆಯುವದಕ್ಕೆ ಸಾಮಾನ್ಯವಾಗಿ ದಾನಧರ್ಮತಪಸ್ಸುಗಳನ್ನು ಮಾಡಹೇಳುವದೇ ಬಹಳವಷ್ಟೆ. ಈ ವಿಷಯದಲ್ಲಿ ನೀತಿಶಾಸ್ತ್ರಕಾರರು ಹೇಳಿರುವದೇನೆಂದರೆ—

ಶ್ಲೋ ॥ ಪ್ರಾಯೇಣ ಸುಕರಂ ದಾನಂ; ಪ್ರಾಯೇಣ ಸುಕರಂ ತಪಃ; । ಪ್ರಾಣಾನಪೇಕ್ಷೀ ವ್ಯಾಪಾರಃ ಪುನರ್ವೀರಸ್ಯ ದುಷ್ಕರಃ ॥ —(ಸು)

ಅ॥ ಬಹುಮಟ್ಟಿಗೆ ದಾನವೂ ಸುಲಭ; ತಪಸ್ಸೂ ಸುಲಭ; ಪ್ರಾಣಕ್ಕೇ ಅಪಾಯವಿರುವಂಥ ವೀರತ್ವದ ನಡೆವಳಿಕೆಯು ಮಾತ್ರ ಕಷ್ಟಸಾಧ್ಯ.

ಇದನ್ನು ಭಗವದನುಗ್ರಹದ ಸಾಧನವಾಗಿ ಭಾಗವತಶಿರೋಮಣಿಗಳು ಪೀಠಿಕೆಯಲ್ಲಿ **"ವೀರವೃತ್ತಿಯ ತೋರೆ ಧನ್ಯನು"** ಎಂದು ಮುಂತಾಗಿ ಉಪದೇಶಮಾಡಿರುವರು. ಅಂಥ ವೀರವೃತ್ತಿಯನ್ನು ತೋರಿಸಿ ಪರಮಾತ್ಮನ ಆಶ್ರಯವನ್ನು ಪಡೆದದ್ದಕ್ಕೆ ಉದಾಹರಣೆಯಾಗಿ ದ್ರೌಪದೀಸ್ವಯಂವರವೆಂಬ ಆಖ್ಯಾನವು ನಿರೂಪಣಮಾಡಲಾಗುವದು.

ಆಖ್ಯಾನ

ಕೀ॥ ಅನಲಮುಖದಿ ಬಂದಾ ದ್ರೌಪದಿ ಯೌವನವನು ಪಡೆಯುತ್ತಿರೆ ಕಂಡು॥ ಅನುವಿಂ ಮದುವೆಯ ಮಾಡಲು ಯೋಚಿಸಿ।ದನು ದ್ರುಪದನು ಚಿಂತೆಯ ಕೊಂಡು॥

ಏಕೆಂದರೆ—

ಸಾ॥ ಕುರುಗಳಿಂದ ಪಾಂಡವರರಗಿನ ಮನೆ । ಯುರಿಯೊಳಳಿದರೆನೆ ಕೇಳ್ದು । ಪುರುಹೂತನ ತನಯನ ಸಂಬಂಧವ । ಸ್ಮರಿಸಿದನಳಲನು ತಾಳ್ದು ॥

ಆಗ ದ್ರುಪದನು ಸಭೆಯನ್ನು ನೆರೆಸಿ ಅದರ ಮುಂದೆ ತನ್ನ ಪಶ್ಚಾತ್ತಾಪವನ್ನು ಪ್ರಕಟಿಸಿದ್ದೆಂತೆಂದರೆ—

ತೋಡಿ—ಅಟತಾಳ

ಹಾರಿತೆ ಎನ್ನ ಸಂಕಲ್ಪವು ॥ ಪ ॥ ಬಹು । ದೂರವಿಚಾರದಿ ಪಡೆದೆ ನಾ ಮಗಳನು ॥ ಅ. ಪ ॥ ಹಿಡಿದೆನ್ನ ಗುರುದ್ರೋಣ । ರಡಿಗಳ ಮೇಲಿಟ್ಟ । ಕಡುಶೂರನಿಗೆ ಮಗಳೀವೆನೆಂದು ॥ ಬಿಡದೆ ಪ್ರತಿಜ್ಞೆಯ । ನುಡಿದೆನ್ನ ಮಾತೀಗ । ಅಡವಿಯಗಾಳಿಯ । ನೊಡಗೂಡಿ ಹೋಯಿತೆ ॥ ೧ ॥ ನರನಂಥ ವೀರರು । ನರಲೋಕದೊಳಗುಂಟೆ? । ತಿರುಗಿ ನಾನವನನು ಪಡೆವೆನೆಂತೊ? ॥ ಅರಗಿನ ಮನೆಯೊಳು ನೆರೆ ಸುಟ್ಟುಹೋದರೆಂ । ಬರು ಧುರ್ಧೀರರಿಗೇನು ಬಂತೊ? ॥೨॥ ಅನುಸರಿಸಿದೆ ನಾನು ಯಾಜೋಪಯಾಜರ । ತನುಜೆಯುಪಡೆಯಲು ಘನಯಜ್ಞದಿ ॥ ನೆನೆದ ಕಾರ್ಯವು ಸಾಗಿತನುವಿಂದಲರ್ಜುನ । ನನೆ ಕಾಣದಿರೆ ಮಾಡಲಿನ್ನೇನ ನಾ ॥೩॥

ಆಗ ಪುರೋಹಿತನು ಸಮಾಧಾನವನ್ನು ಹೇಳಿದ್ದೇನೆಂದರೆ—

ದಿಂ॥ ಅರಸ ಕೇಳೈ ಪಾಂಡವರಿಗಳಿವು ಸಲ್ಲ; । ಪೊರೆವನವರಂ ಕ್ಷೀರಾಬ್ಧಿಸುತೆಯನಲ್ಲ; ॥ ಧರೆಗೆ ಪೇಳೀಗಳ್ಸ್ವಯಂವರವೆನುತ್ತ । ಭರದೊಳವರೆಲ್ಲರ್ಬಿಡದೆ ಬರ್ಪರಿತ್ತ ॥

ಆಗ ಆ ಮಾತಿಗೊಪ್ಪಿ ಸ್ವಯಂವರಕ್ಕೆ ಬಂದವರಲ್ಲಿ ಅರ್ಜುನನನ್ನು ಗುರ್ತಿಸುವದಕ್ಕೆ ತಕ್ಕ ಹಾಗೆ ಇರಬೇಕೆಂದು—

ಷ॥ ಧನುವನೊಂದನು ಸಜ್ಜುಗೊಳಿಸು । ತ್ತನುಗೊಳಿಸಿ ಕಬ್ಬಿಣದ ಹೆದೆಯನು । ಕನಕಮಯವಹ ಮತ್ಸ್ಯಯಂತ್ರವನೊಂದ ನೆರೆ ಗೈಸಿ ॥ ಮೊನೆಯ ಬಾಣಗಳೈದ ಜೋಡಿಸಿ । ತನುಜೆಗದರಿಂ ಲಕ್ಷ್ಯಭೇದನ । ವನೆ ಬೆಲೆಯ ನಿರ್ಣಯಿಸಿ ಮದುವೆಯ ನಿಶ್ಚಯವ ಗೈದ ॥

ಆಮೇಲೆ ದ್ರುಪದನ ಆಜ್ಞೆಯಿಂದ ಊರಲ್ಲೆಲ್ಲ ಸಾರಿದ್ದೇನೆಂದರೆ—

ಸಾಂ॥ ಅನಲಮುಖದಿ ಬಂದ ಸುತೆಗೆ ಸ್ವಯಂವರ । ವನು ಪುಷ್ಯ ಶುಕ್ಲ ರೋಹಿಣಿಯ ॥ ದಿನದೊಳರಸು ಮಾಡುವನು; ಬಂದು ನೋಡಿರಿ । ಘನವೀರನ ಕೈಗಣಿಯ ॥

ಇದರಂತೆ ಎಲ್ಲ ರಾಜರಿಗೂ ಲಗ್ನಪತ್ರಿಕೆಗಳು ಹೊರಟವು. ಇಷ್ಟು ಹೊತ್ತಿಗೆ ಪಾಂಡವರ ಸ್ಥಿತಿ ಏನಾಗಿತ್ತೆಂದರೆ—

ಕೀ॥ ಅರಗಿನಮನೆಯಿಂ ಹೊರಟಾ ಪಾಂಡವ | ರೊರಸಿ ಹಿಡಿಂಬಬಕಾದಿ
ಗಳ ॥ ಮೆರೆದರೇಕಚಕ್ರಾಭಿದಪುರದೊಳು । ಧರಿಸಿ ಭೂಸುರರ ವೇಷಗಳ ॥

ಅವರು ಬ್ರಾಹ್ಮಣರ ವೇಷವನ್ನು ಧರಿಸಿದ್ದೇಕೆಂದರೆ—

ಷ ॥ ವಿದುರನಟ್ಟಿದ ಕನಕನೇ ಮಾ । ಡಿದ ಸುರಂಗದಿ ಹೊರಟು ಪಾಂಡವ।
ರದರ ಕುತ್ತವ ಕಳೆದು; ತಾವಳಿದಂತೆ ಭಾವಿಸುತ ॥ ಮುದಬಡುವ ಕೌರವಗೆ ಕೊರ
ತೆಯ । ನೊದಗಗೊಡಲೇಕೆಂದು ನೋಣ್ದು । ವಿಧಿಯೊಳೆಡಗಿರಲೆಂದು ಭೂಸುರ
ರಾದರವರಂದು ॥

ಟೀ॥ ಅದರ = ಅರಗಿನ ಮನೆಯ. ಕುತ್ತವ = ವಿಪತ್ತನ್ನು.

ಹೀಗೆ ಅವರು ಅಲ್ಲಿರುವಾಗ ಹಸ್ತಿನಾಪುರದಿಂದ ಪಾಂಚಾಲಕ್ಕೆ ಹೋಗುವದಕ್ಕೆ ಬಂದ ಒಬ್ಬ ಬ್ರಾಹ್ಮಣನು ಕುಂತಿಯ ಮುಂದೆ ತನ್ನ ಊರಿನ ವಿಷಯಗಳನ್ನೆಲ್ಲ ಹೇಳುತ್ತ ಪಾಂಚಾಲ ದೇಶದಲ್ಲಿ ಆಗುವ ದ್ರೌಪದೀಸ್ವಯಂವರದ ಸುದ್ದಿಯನ್ನು ತೆಗೆದು ಹೇಳಿದ್ದೇನೆಂದರೆ—

ಷ॥ ಈಕೆಗೆಣೆಯಹ ವರನಸೀ ನರ । ಲೋಕದಲಿ ತಾ ಕಾಣೆನರ್ಜುನ । ನೀ
ಕುಮಾರಿಯ ರಮಣನೆಂದೇ ಮನದ ಸಂಕಲ್ಪ; ॥ ಈಕೆಯಪದೆಸೆಯುದಯದಲಿ
ಕುಂ । ತೀಕುಮಾರಕರನಲಮುಖದಲಿ । ನಾಕದಲಿ ನೆಲೆಗೊಂಡರೆಂದುಮ್ಮಳಿಸು
ವನು ದ್ರುಪದ ॥ —(ಕ.ಭಾರ)

ಈ ಉತ್ಸವವನ್ನು ನೋಡುವದಕ್ಕೆ ನೀವೂ ಹೊರಡಿರೆಂದು ಆ ಬ್ರಾಹ್ಮಣನು ಪ್ರೋತ್ಸಾಹಿಸಿದ್ದೆಂತೆಂದರೆ—

ಬೇಗಡೆ—ರೂಪಕ

ಬನ್ನಿರೆಲ್ಲರು । ಸ್ವಯಂವರಕ್ಕೆ ॥ ಪ ॥ ದ್ರುಪದಸುತೆಯ ಮದುವೆಯಂತೆ ।
ಅಪರಿಮಿತದ ವಿಭವವಂತೆ । ಸುಪವಿತ್ರವರಗೆ ಕೊಡುವ । ಶಪಥವ ಮಾಡಿರುವ
ರಂತೆ ॥ ೧ ॥ ದೇವಗಂಧರ್ವರೆಲ್ಲ । ತಾವಾಗಿಯೇ ಬರುವರಂತೆ । ಭೂವಲಯ ಸುಭಿ
ಕ್ಷವಂತೆ । ಭಾವಿಪ ಜನರಿರ್ಪರಂತೆ ॥ ೨ ॥ ರೂಪಯುತರು ನಿನ್ನ ಸುತರು । ರೂಪ
ವತಿಯ ಮದುವೆ ನೋಡಲಿ ॥ ಆ ಪಟ್ಟಣಕೆಮ್ಮೊಡನೆಯೆ । ನೀ ಪೊರಮಡು ಸುತರ
ಕೂಡಿ ॥ ೩ ॥

ಆಗ ಕುಂತಿಯು ಧರ್ಮರಾಯನಿಗೆ ಹೇಳಿದ್ದೇನೆಂದರೆ—

ಸಾಂ ॥ ಬಹುದಿನ ಕಳೆದೆವಿಲ್ಲಿಯೆ ಭಿಕ್ಷಾನ್ನವು । ಬಹುದೀಗ ಕಡಿಮೆಯಾಗಿ
ಹುದು; ॥ ಬಹುರಮ್ಯವಂತೆ ಪಾಂಚಾಲವಲ್ಲಿಗೆ ಹೋಗ । ಬಹುದೆಂದೆನಗೆ ತೋರು
ವದು ॥

ದ್ರುಪದನು ಅರ್ಜುನನನ್ನು ಬಯಸುವದರಿಂದಲೂ ಕ್ಷತ್ರಿಯರೆಲ್ಲರನ್ನೂ ಒಂದು ಕಡೆ ನೋಡುವ ಅವಕಾಶವು ದೊರೆಯುವದರಿಂದಲೂ ಸ್ವಯಂವರದಲ್ಲಿ ಶೌರ್ಯದ ಪರೀಕ್ಷೆ ಇರುವದರಿಂದಲೂ

ನಾವೆಲ್ಲರೂ ಅಲ್ಲಿಗೆ ಹೋಗತಕ್ಕದ್ದೆಂದು ಪಾಂಡವರು ಬ್ರಾಹ್ಮಣರ ಗುಂಪಿನೊಡನೆ ಸೇರಿ ದಾರಿಯಲ್ಲಿ ಹೋಗುತ್ತಿರುವಾಗ ಒಂದು ದಿನ—

ಕೀ ॥ ನಡುರಾತ್ರಿಯೊಳಗೆ ಗಂಗಾತೀರದಿ । ಹಿಡಿಯುತೆ ಗೊರವಿಯ ಕೊಳ್ಳಿಯನು ॥ ನಡೆಯುವವರನಂಗಾರವರ್ಮನುರೆ । ತಡೆದಟ್ಟಲು ಕೈ ಮಾಡಿದನು ॥

ಅವನು ಪಾಂಡವರಿಗೆ ಹೇಳಿದ್ದೇನೆಂದರೆ—

ಸೀ॥ ಇದು ಮನುಷ್ಯರು ಬರುವ ಸಮಯವಲ್ಲವು; ಬಂದೊ - ಡೆದುರಿಸದೆ ಬಿಡೆವವರ ನಿಲ್ಲಿ ನಾವು; । ಇದೊ ! ಕುಬೇರನ ಗೆಳೆಯನಪ್ಪ ಗಂಧರ್ವ ನಾಂ - ನದಿಯೊಳು ಜಲಕ್ರೀಡೆಯಾಡುತಿಹೆವು; ॥ ಇದು ನನ್ನ ಹೆಸರಿನಿಂದಲೆ ಕರೆಸಿಕೊಳ್ವ ವನವಿದು ನರರ ಸಂಚಾರಕರ್ಹವಲ್ಲ; । ಇದನು ತಿಳಿ ನಾಂ ಚಂಡಕೋಪನೆಂಬುದನು ನ - ನ್ನೆದುರೊಳಗೆ ನೀವಿಹುದು ಯೋಗ್ಯವಲ್ಲ; ॥ ಇದ ಮೀರಿ ಬರೆ ನೀವು ಬಾಳ್ವುದಿಲ್ಲ; । ಇವ ಕೇಳಿ ನಾನೀಗ ಪೇಳ್ವ ಸೊಲ್ಲ; । ಮದವ ತೋರಿದರೆ ತೆಗೆಯುವೆನು ಬಿಲ್ಲ; । ಚದುರರೇ, ಹುಡುಗಾಟವಾಡಸಲ್ಲ ॥

ಅದಕ್ಕೆ ಅರ್ಜುನನು ಹೇಳಿದ ಉತ್ತರವೇನೆಂದರೆ—

ಕಂ ॥ ಇದು ಸಾರ್ವಜನಿಕನಗವನ । ವಿದರೊಳ್ನಿ ನಗಂಜುತಿಲ್ಲಿಯೇ ನಿಲ್ಲುವೆವೇ? ॥ ಇದು ದಿವಿಜನದಿ; ಪವಿತ್ರವಿ । ದಿದರೊಳಗೆ ಮುಳುಂಗದೀಗ ಪಿಮ್ಮೆಟ್ಟುವೆವೇ? ॥

ಎಂದು ಅರ್ಜುನನು—

ಸಾ ॥ ಗೊರವಿಯ ಕೊಳ್ಳಿಯನಭಿಮಂತ್ರಿಸುತಿಡ । ಉರಿದುದಾ ಹಗೆಯತೇರು; ॥ ನೆರೆ ಮೂರ್ಛೆಯ ಪಡೆದನು ಗಂಧರ್ವನು; । ಸುರಪಸುತನಿಗಿದಿರಾರು? ॥

ಅರ್ಜುನನ ಈ ಧೈರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ಪೀಠಿಕೆಯಲ್ಲಿ **" ಮುನಿದು ನೀನು ಕಡಿನೊಯೆಂದು "** ಎಂದು ನೊಡಲಾಗಿರುವ ನುಡಿಯ ಉಪದೇಶವು ಬಂದಿರುವದು.

ಮುಂದೇನಾಯಿತೆಂದರೆ ಆ ಗಂಧರ್ವನ ಪತ್ನಿಯು ಬಹಳ ದೈನ್ಯದಿಂದ—

ಷ॥ ಬಂದು ಯಮನಂದನನ ಚರಣ। ದ್ವಂದ್ವದಲಿ ಚಾಚಿದಳು ನೊಸಲನು;। ತಂದೆ, ಕರುಣಿಸು ಕಾಂತಭಿಕ್ಷವ ಕರುಣಿಸೆನಗೆನಲು ॥ ಮುಂದುವರಿಯದಿರೆಲೆ ಧನಂಜಯ, । ಕೊಂದರೆನ್ನಾಣೇಕೆಯರಸನ । ತಂದುಕೊಡು ಬೇಗದೊಳಗುಪಸಂಹರಿಸು ಶಿಖಿಶರವ ॥ —(ಕ. ಭಾರ)

ಅದರಂತೆ ಅರ್ಜುನನು ಆಗ್ನೇಯಾಸ್ತ್ರವನ್ನು ಪಸಂಹಾರಮಾಡಿ ಅಂಗಾರವರ್ಮನಿಗೆ ಜೀವದಾನವನ್ನು ಮಾಡಿದ ಮೇಲೆ ನಡೆದದ್ದೇನೆಂದರೆ—

ಕೀ ॥ ಜೀವದಾನಕೀಡಾಗಿಹ ವಿದ್ಯೆಯ । ನೀವೆನೆನಲು ಗಂಧರ್ವನು ತಾ ॥ ಆವ ಬಗೆಯ ದಾನವನುಂ ಕೊಳ್ವವ । ರಾವಲ್ಲೆಂದನು ಸುರಪಸುತ ॥

ಅರ್ಜುನನು ಪರಿಗ್ರಹವನ್ನು ದೋಷವಾಗೆಣಿಸಿದ್ದಕ್ಕೆ ಆಗಿನ ಕಾಲಕ್ಕೆ ಅವನ ಕ್ಷಾತ್ರತೇಜಸ್ಸು.

ಕಾರಣವಾಗಿರಬಹುದು. ಈಗ ನಮಗಂತು ಅದು ಒಳ್ಳೆ ಉಪದೇಶವಾಗಿದೆ. ಪರಿಗ್ರಹದಿಂದ ಕಲಿಯುಗದಲ್ಲಿ ಎಷ್ಟು ದೊಡ್ಡ ನಷ್ಟವಾಗಿದೆ. ನೋಡಿ !

ಶ್ಲೋ ॥ ಪರಾನ್ನೇನ ಮುಖಂ ದಗ್ಧಂ; ಹಸ್ತೌ ದಗ್ಧೌ ಪ್ರತಿಗ್ರಹಾತ್; ।
ಪರಸ್ತ್ರೀಭಿರ್ಮನೋ ದಗ್ಧಂ; ಕುತಃ ಶಾಪಃ ಕಲೌ ಯುಗೇ ॥ —(ಸು)

ಅ॥ ಕಂಡವರ ಮನೆಯ ಊಟದಿಂದ ಬಾಯ ಬಲ ಬೆಂದುಹೋಗಿದೆ; ಕಂಡವರ ಪದಾರ್ಥದ ದಾನವನ್ನು ಹಿಡಿದು ಕೈಯ ಬಲ ಬೆಂದುಹೋಗಿದೆ; ಪರಸ್ತ್ರೀಯರನ್ನು ಇಚ್ಛಿಸಿ ಮನಸ್ಸಿನ ಬಲ ಬೆಂದು ಹೋಗಿದೆ; ಕಲಿಯುಗದಲ್ಲಿ ಶಾಪದ ಮಾತಿನ್ನೆಲ್ಲಿಯದು !

ಅವರಿಬ್ಬರಿಗೂ ಮಾತು ನಡೆದು ಕೊನೆಗೆ ಆದದ್ದೇನೆಂದರೆ—

ಸಾ॥ ನರನಾಗ್ನೇಯಾಸ್ತ್ರವ ಗಂಧರ್ವಗೆ । ಹರುಷದಿಂದ ಕೊಡಲಾಗ ॥ ನರನಿಗವನು ದಿವ್ಯಾಶ್ವಗಳಿತ್ತನು । ಮೆರೆಯೆ ಗೆಳೆತನದ ಯೋಗ ॥

ಆ ಕುದುರೆಗಳನ್ನು ಮುಂದೆ ತೆಗೆದುಕೊಳ್ಳುವೆವೆಂದು ಅಲ್ಲಿಯೇ ಇಟ್ಟು ಅಲ್ಲಿಂದ ಮುಂದೆ ಪ್ರಯಾಣಮಾಡಿ ಪಾಂಡವರು ದ್ರುಪದನ ರಾಜಧಾನಿಯನ್ನು ಸೇರುತ್ತಲೆ ಅವರಿಗೆ ಶುಭಶಕುನವಾದದ್ದೇನೆಂದರೆ—

ಶ್ಲೋ ॥ ಭೂದೇವೇಷ್ವತಿನಿಬಿಡೇಷು ಮಧ್ಯಭಾಜಾಮ್ । ಪಂಚಾನಾಮಪಿ
ಯುಗಪತ್ ಪೃಥಾಸುತಾನಾಮ್ ॥ ಪುಸ್ಫೋರ ದ್ರುಪದಪುರಂ; ಪುರಪ್ರವೇಶೇ ।
ವಕ್ತ್ರಾಬ್ಜೇ ಸರಭಸಮಕ್ಷಿ ದಕ್ಷಿಣಂ ಚ —(ಭಾರ. ಚಂ)

ಅ॥ ದಟ್ಟವಾಗಿ ಹೋಗುತ್ತಿದ್ದ ಬ್ರಾಹ್ಮಣರ ನಡುವೆ ಇದ್ದ ಪಾಂಡವರೈವರಿಗೂ ಒಮ್ಮೆಗೇ ದ್ರುಪದನ ರಾಜಧಾನಿಯೂ ಕಂಡಿತು ಮತ್ತು ಆ ಪುರವನ್ನು ಪ್ರವೇಶ ಮಾಡುತ್ತಲೆ ಮುಖಕಮಲಗಳಲ್ಲಿದ್ದ ಬಲಗಣ್ಣು ವೇಗವಾಗಿ ಹಾರಿತು.

ಇದೇ ಸಮಯದಲ್ಲಿಯೇ ಅನೇಕ ರಾಜರೂ ಬ್ರಾಹ್ಮಣರೂ ಅಲ್ಲಿಗೆ ಬಂದಿಳಿಯುತ್ತಿದ್ದಾರೆ. ಬ್ರಾಹ್ಮಣರ ಮನಸ್ಸಿನ ಕಲ್ಪನೆಯೇನೆಂದರೆ—

ಷ॥ ಮಾಡಿದರೆ ಶತಯಾಗವನು ಕೈಗೂಡುವಳು ಶಚಿ; ಮಖಸಹಸ್ರವ ಮಾಡಿ ಮೇಣ್ಣುನಿಸಿದೊಡೇ ಬಹಳೇ ದ್ರೌಪದಾದೇವೀ! ॥ ನೋಡುವೆವು; ಬಹು ಜನ್ಮಶತದಲಿ । ಕೂಡಿ ಕೊಬ್ಬಿದ ಪುಣ್ಯಫಲ ಕೈ । ಗೂಡುವದು ತಪ್ಪೇನೆನುತ ನೆರೆದುದು ಬುಧಸ್ತೋಮ॥ —(ಕ. ಭಾರ)

ಇತ್ತ ಪಾಂಡವರು—

ದಿಂ॥ ಒಳಿತೆನಿಪ್ಪೆಡೆಯಂ ಹುಡುಕಿ ಕಾಣೆವೆಂದು । ಇಳಿದರೊಂದೆಡೆ ಕುಂಬಾರಮನೆಯೊಳಂದು ॥ ತೊಳಲಿದರ್ತಾವ್ಬೀದಿಯೊಳು ಭಿಕ್ಷಕೆಂದು । ನಲಿದು ನೋಡಿದರಾ ಊರ ಸೊಬಗ ನಿಂದು ॥

ಅವರ ಮನಸ್ಸನ್ನಾಕರ್ಷಣೆ ಮಾಡಿದ ಸ್ವಯಂವರ ಮಂಟಪವೆಂತಿತ್ತೆಂದರೆ—

ರ॥ ಕಾಣಬಂದುದು ಬಹುರೂಪ । ಆ ಮದುವೆಯ ಮಂಟಪ ॥ಪ॥ ಬಗೆಬಗೆ ಕೋಟೆಯು ಮಿಗೆ ಕೊತ್ತಲುಗಳು । ಸೊಗಸಿನ ತೋರಣವಗಣಿತಮೇಲ್ಕ

ಟ್ಟುಗಳು, ಸುಗಂಧಾಂಬುಗಳ ಸಾರಣೆಯು । ಒಗೆದಿಹ ಬೆಳ್ಳಿಯನಗದಂತುಪ್ಪರಿ । ಗೆಗಳಿಗೆ ಮಣಿಮಯ ಜಗುಲಿಯನೇರ । ಲೊಪ್ಪಗಸಹ ಸೋಪಾನಗಳಿರೆ ಹರಿಪೀ । ಠಗಳ ಬಳಿಯ ಮಾರ್ಗಗಳೊಪ್ಪಲು ಸ । ತ್ತಿಗೆಗಳಿಟ್ಟಣಿಸೆ ಸುಗಮನೆಂದು ನಗು । ನಗುತ ಜನಾವಲಿ ಜಗಕಿದು ಪೊಸತೆನೆ । ಮಗಮಗಿಸುತ ನೆಟ್ಟಗೆ ಸುರಸಭೆಯನು । ಮಿಗೆ ಜರಿಯುತ್ತಿರೆ ಮುಗಿಲಮುಟ್ಟಿ ಮಗ । ಮಗಿಸುತ ದೇವಾದಿಗಳಿಗೆ ತಮ್ಮಯ ಬಗೆಯ ತೋರಿಸುತ ಸೊಗಸಿಂ ಮೆರೆಯುತ ॥

ಆ ಸ್ವಯಂವರಮಂಟಪಕ್ಕೆ ಸಮಸ್ತ ರಾಜರೂ ಬಂದು ಅವರವರ ಸ್ಥಲದಲ್ಲಿದ್ದಾರೆ; ಪಾಂಡವರು ಬ್ರಾಹ್ಮಣರ ಗುಂಪಿನಲ್ಲಿದ್ದಾರೆ. ಆ ಸಮಯದಲ್ಲಿ ಧೃಷ್ಟದ್ಯುಮ್ನನು ಸಭಾಮಧ್ಯದಲ್ಲಿ ನಿಂತು ಹೇಳುತ್ತಾನೆ:—

ಷ॥ ಇದೆ ಮಹಾಧನು;ಬಾಣಪಂಚಕ । ವಿದೆ; ನಭೋಗ್ರದ ಯಂತ್ರಹೊಳೆವು। ತ್ತಿದೆ ; ವಿಭಾಡಿಸಿ ಮೆರೆವನಾವನು ಬಾಹುವಿಕ್ರಮನು ॥ ಇದುಪೆ ಕಬ್ಬಿನ ಬಿಲು ; ಶರಾವಳಿ । ಯಿದು ಕುಸುಮಮಯ ; ಯಂತ್ರವಬಲೆಯ । ಹೃದಯವಾತನೆ ರಮಣನಾತನೆ ಕುಸುಮಶರನೆಂದ ॥ —(ಕ. ಭಾರ.)

ಟಿ॥ ವಿಭಾಡಿಸಿ = ಲಕ್ಷ್ಯಭೇದವನ್ನು ಮಾಡಿ.

ಲಕ್ಷ್ಯಭೇದ ಮಾಡಿದವರನ್ನು ವರಿಸುವದಕ್ಕಾಗಿ ದ್ರೌಪದಿಯು ಪುಷ್ಪಮಾಲಿಕೆಯೊಡನೆ ಸಿದ್ಧಳಾಗಿದ್ದಾಳೆ. ಆಕೆ ಹೇಗೆ ಕಾಣುತ್ತಿದ್ದಳೆಂದರೆ—

ಕಂ॥ ಎಳೆಲತೆಯನೆ ಬಿದಿ ಲೋಕಮ । ನಳಲಿಸಲೆಂದರ್ತಿವಟ್ಟು ವನಿತಾರೂಪಂ ॥ ಗಳಿಯಿಸಿದನರಿದೆನಲ್ಲದೊ । ಡುಳಿದಂತಂಗನೆಯರಿಂತು ಚೆಲ್ವೆಯರೊಳರೇ ॥ —(ಧ. ಫ.)

ಆ ಸೌಂದರ್ಯವನ್ನು ಕವಿ ವರ್ಣಿಸಿರುವದೆಂತೆಂದರೆ—

ಶ್ಲೋ॥ ಲಾವಣ್ಯದ್ರವಿಣವ್ಯಯೋ ನ ಗಣಿತಃ; ಕ್ಲೇಶೋ ಮಹಾನಾರ್ಜಿತಃ;। ಸ್ವಚ್ಛಂದಂ ಚರತೋ ಜನಸ್ಯ ಹೃದಯೇ ಚಿಂತಾಜ್ವರೋ ನಿರ್ಮಿತಃ; ॥ ಏಷಾಪಿ ಸ್ವಗುಣಾನುರೂಪರಮಣಾಭಾವಾದ್ವರಾಕೀ ಹತಾ; । ಕೋಽರ್ಥಶ್ಚೇತಸಿ ವೇಧಸಾ ವಿನಿಹಿತಸ್ತನ್ವೀಮಿಮಾಂ ತನ್ವತಾ ॥ —(ಸು)

ಅ॥ ಈ ಸ್ತ್ರೀಯನ್ನು ಸೃಷ್ಟಿಮಾಡುವಾಗ ಬ್ರಹ್ಮನು ಸೌಂದರ್ಯದ ವಸ್ತುಗಳ ವೆಚ್ಚವನ್ನು ಲೆಕ್ಕಕ್ಕೆ ತಂದುಕೊಳ್ಳಲಿಲ್ಲ; ಈ ರೂಪವನ್ನು ಮಾಡುವದಕ್ಕೆ ಬಹಳ ಕಷ್ಟಪಡಬೇಕಾಯಿತು; ತಮ್ಮಿಷ್ಟಕ್ಕೆ ತಾವು ಓಡಾಡುವ ಜನರ ಮನಸ್ಸಿನಲ್ಲಿ ಚಿಂತೆಯೆಂಬ ಜ್ವರವನ್ನುಂಟುಮಾಡಿದಂತಾಯಿತು; ಈಕೆಯಾದರೂ ತನಗೆ ತಕ್ಕ ಗಂಡಸಿಲ್ಲದ್ದರಿಂದ ದೀನಳಾಗಿ ಸೊರಗಬೇಕಾಯಿತು; ಕಾಮುಕರಾದ ಪುರುಷರ ಮನಸ್ಸಿನಲ್ಲಿ ಬ್ರಹ್ಮನು ಕ್ರೋಧವನ್ನಿಟ್ಟಂತೆ ಆಯಿತು.

ಮತ್ತೊಬ್ಬ ಕವಿ ಆಕೆಯನ್ನು ಚಮತ್ಕಾರದಿಂದ ವರ್ಣಿಸಿರುವದೆಂತೆಂದರೆ—

ಶ್ಲೋ॥ ಸ್ತ್ರೀ ಸತೀಯಂ ಮಮಾಸ್ತ್ರೀತಿ ಪ್ರತಿಭಾತಿ ವಿನಿಶ್ಚಿತಮ್ । ಭವಂತಿ ಮೂರ್ಛಿತಾಃ ಶೂರಾಃ ಅಪಿ ಯದ್ಗವಲಕ್ಷಿತಾಃ ॥ —(ಸು,ಲಾ)

ಅ॥ ಈಕೆಯು ಹೆಂಗುಸಾಗಿದ್ದರೂ (ಪುಮ+ಅಸ್ತ್ರೀ+ಇತಿ) ಸ್ತ್ರೀಯಲ್ಲವೆಂದು ಅಥವಾ ಅಸ್ತ್ರವನ್ನು ಪ್ರಯೋಗಮಾಡಬಲ್ಲ ಪುರುಷನೆಂದು ನನಗೆ ತೋರುತ್ತದೆ. ಏಕೆಂದರೆ ಈಕೆಯು ಕಡೆಗಣ್ಣ ನೋಟದ ಬಾಣದಿಂದ ಶೂರರು ಕೂಡ ಮೂರ್ಛಿತರಾಗುತ್ತಾರೆ.

ಇಂಥ ಸ್ತ್ರೀಗಾಗಿ ನಾನು ಮುಂದು ತಾನು ಮುಂದೆಂದು ರಾಜಪುತ್ರರು ಒಟ್ಟೊಟ್ಟರಾಗಿ ಮುಂದೆ ಬಂದು ಕೈ ತೋರಿಸಿದಾಗ ಆದದ್ದೇನೆಂದರೆ—

ಕಂ॥ ಹೆದೆಯೇರಿಸಲುಂ ಕೈಲಾ । ಗದೆ ಭುಜಬಲಗರ್ವವನ್ನು ತೊರೆಯುತೆ ಬಹುವೇ ॥ ಗದ ಬಿಲ್ಲ ಪೆಟ್ಟನಿಂ ಬಿ । ಳ್ದೊದರುತೆ ಪಲ್ಗಿರಿದು ಪೊರಳುತಿರ್ದರ್ನೆಲ ಲೊಳ್ ॥

ಷ ॥ ಹಾರ ಹರಿದುದು ; ಕರ್ಣಪೂರದ । ಚಾರುಮಣಿಗಳು ಸಡಿಲಿದವು; ಪದ । ವೀರನೇವುರ ನೆಗ್ಗಿದವು; ತಗ್ಗಿದವು ನೆನಹುಗಳು; ॥ ನಾರಿಯರ ಕೈಹೊಯ್ಲ ನಗೆಯ ನಿ । ಹಾರ ಜಡಿದುದು; ಮುಸುಕುದಲೆಯ ಮ । ಹೀರಮಣರೋಸರಿಸಿ ಸಿಂಹಾಸನವ ಸಾರಿದರು ॥ —(ಕ.ಭಾರ)

ಟಿ॥ ಪದವೀರನೇವುರ = ವೀರ್ಯಸೂಚಕವಾದ ಕಾಲುಂಗುರ. ನಿಹಾರ = ಮಂಜು.

ಆಮೇಲೆ ಕೆಲವರು ಹೆಚ್ಚಿನ ಪ್ರಯತ್ನವನ್ನು ಮಾಡಿದ್ದೆಂತೆಂದರೆ—

ಸೀ ॥ ಶಿಶುಪಾಲನುದ್ದಿನಷ್ಟೈತ್ತಿ ತೊಲಗಿದನಾಚೆ - ಗುಸಿರೆತ್ತದಿನ್ನೊಮ್ಮೆ ಲಜ್ಜೆಯಿಂದ; । ಹೆಸರಕಾಳಷ್ಟೆತ್ತಿದನು ಜರಾಸಂಧನಾ - ಯಸಗೊಂಡು ಕೆಲಸವಿದ ಸಾಧ್ಯವೆಂದ; ॥ ಮುಸಗಿ ಮದ್ರಾಧೀಶನಹ ಶಲ್ಯ ಬಂದಾಗ - ನಸು ಮಿಸುಕಿ ತನಗಿದೇಂ ಬೇಡವೆಂದ; । ಕಸುವುಳ್ಳವರ ಪಾಡ ನೋಡಿ ನಮಗೇತಕೇ - ವ್ಯಸನವೆಂದರು ಕೆಲಬರರ್ಥಿಯಿಂದ; ॥ ಪೊಸಬಗೆಯ ನೋತುವವರೆಂದು ಕೆಲರು, । ಪೊಸಬರೀವೃತ್ತಿಗಾವೆಂದು ಕೆಲರು, । ಪೊಸತನಾವೊಲ್ಲೆವೀಗೆಂದು ಕೆಲರು, । ಪೊಸಮಾತುಗಳ ಪೇಳ್ದರಮಿತಬಲರು ॥

ಆಗ ಕರ್ಣನು ಬರುತ್ತಲೆ—

ಶ್ಲೋ ॥ ದೃಷ್ಟ್ವಾತು ತಂ ದ್ರೌಪದೀ ವಾಕ್ಯಮುಚ್ಚೈಃ । ಜಗಾದ ನಾಹಂ ವರಯಾಮಿ ಸೂತಮ್ ॥ ಸಾಮರ್ಷಹಾಸಂ ಪ್ರಸಮೀಕ್ಷ್ಯ ಸೂರ್ಯಮ್ । ತತ್ಯಾಜ ಕರ್ಣಃ ಸ್ಫುರಿತಂ ಧನುಸ್ತತ್ ॥ —(ಸಂ.ಭಾರ)

ಅ॥ ಅವನನ್ನು ನೋಡಿ ದ್ರೌಪದಿಯು "ನಾನು ಸೂತಜಾತಿಯವನನ್ನು ವರಿಸುವುದಿಲ್ಲ" ಎಂದು ಗಟ್ಟಿಯಾಗಿ ಹೇಳುತ್ತಲೆ ಕರ್ಣನು ಸಿಟ್ಟಿನಿಂದಲೂ ನಗೆಯಿಂದಲೂ ಸೂರ್ಯನನ್ನು ನೋಡಿ ಆ ಧನುಸ್ಸನ್ನು ಕೈಬಿಟ್ಟನು.

ಟಿ॥ ಕರ್ಣನಿಗೆ ತಾನು ಸೂರ್ಯಸುತನಾದರೂ ಸೂತಜಾತಿಯವನಾಗಿ ಬೆಳೆದಿರುವದಕ್ಕೆ ಸಿಟ್ಟೂ ತನ್ನ ಮೂಲವು ಹೀಗೆ ಎರಡು ಬಗೆಯಾಗಿರುವದಕ್ಕೆ ನಗೆಯೂ ಉಂಟಾದವು.

ಆಗ ಬಲರಾಮನು ಏಳಲು ಅವನಿಗೆ ಕೃಷ್ಣನು ಹೇಳಿದ್ದೇನೆಂದರೆ—

ಸುರಟಿ—ಆದಿತಾಳ

ಏಳಬೇಡವೊ ! ಬಲರಾಮದೇವ ॥ ಪ ॥ ಈ ಧನುವ ಗೆಲಲು ॥ಅ. ಪ ॥ ಕುಂತಿಯತ್ತೆಯೆಂಬ । ಚಿಂತೆಯನ್ನು ತಂದು ॥ ನಿಂತು ನೋಡು ನೀನು । ಇಂತು ಮಾಡಸಲ್ಲ ॥ ೧ ॥ ಪಾಂಡುತನುಜರ । ತಂಡ ಮೈದುನರು ॥ ಗಂಡರೀಕೆಗೈಸೆ । ಕಂಡುಬಲ್ಲೆ ನಾನು ॥೨॥ ತಂಗಿಯಲ್ಲವೆ ಈ । ಭೃಂಗಕುಂತಲೆಯು ॥ ಇಂಗಿತವನರಿ। ಮಂಗಳಾತುಮನೆ ॥ ೩ ॥

ಕೃಷ್ಣನ ಮಾತಿನಿಂದ ಪಾಂಡವರು ಬದುಕಿ ಬಂದಿರುವರೆಂದರಿತು ಬಲರಾಮನು ಬೆರಗಾಗಿರಲು ಧೃಷ್ಟದ್ಯುಮ್ನನು ಕ್ಷತ್ರಿಯರಲ್ಲಿನ್ನು ವೀರರಿಲ್ಲನೆಂದು ತಿಳಿದು ಬ್ರಾಹ್ಮಣರ ಗುಂಪಿನ ಕಡೆಗೆ ತಿರುಗಿ ಹೇಳುತ್ತಾನೆ—

ಷ॥ ಬೆರಸುವರು ಪಾರ್ಥಿವರು ಪಾರ್ಥಿವ । ವರರೊಡನೆ ; ತದಲಾಭಪಕ್ಷಾಂ1ತರಕೆ ಪಾರ್ಥಿವಸುತೆಯ ನೀವುದು ವಿಪ್ರಜಾತಿಯಲಿ ; ॥ ಪುರುಷರನುಲೋಮದಲಿ ಕನ್ಯಾ । ವರಣವಹುದು; ವಿಲೋಮದಲಿ ವಿ । ಸ್ತರಿಸಲೇ ಕಿದ ? ನೀವು ಬಲ್ಲಿರಿ ಶಾಸ್ತ್ರನಿರ್ಣಯವ ॥ —(ಕ.ಭಾರ)

ಆಗ ಬ್ರಾಹ್ಮಣರು ಹೇಳುತ್ತಾರೆ.—

ಜಯಂತಶ್ರೀ—ಆದಿತಾಳ

ಗೆಲ್ಲಲಾರೆವೊ । ಈ ಯಂತ್ರವನು ॥ ಪ ॥ ಬಲ್ಲಿದ ಕ್ಷತ್ರಿಯ । ರೆಲ್ಲ ಸೋತು ಹೋದ । ಬಿಲ್ಲ ಹಿಡಿಯೆ ನಾವ್ । ಬಲ್ಲೆವೆಂತು ಪೇಳೋ ॥ ಅ. ಪ ॥ ವೇದಶಾಸ್ತ್ರಗಳ ವಾದಿಪುದರಲ್ಲಿ । ಮೋದದಿಂದರ್ಥವ ಸಾಧಿಪುದರಲ್ಲಿ ॥ ಓದುವದರಲ್ಲಿ ತತ್ತ್ವಾರ್ಥವನು । ಶೋಧಿಪುದರಲ್ಲಿ ಹಾದಿಯರಿತ ನಾವು ॥ ೧ ॥ ಭರತವಿದ್ಯೆಯಲಿ ಸರಸಕವಿತೆಯಲಿ । ಸುರುಚಿರದಲಂಕಾರಶಾಸ್ತ್ರದಲಿ ॥ ಪರಮಮಂತ್ರತಂತ್ರ ವಿರಚನೆಗಳಲ್ಲಿ । ಕರೆಸಿ ನೋಡಲಚ್ಚರಿ ಮಾಳ್ಪ ನಾವು ॥೨ ॥ ಬಗೆಬಗೆಯಹ ಭಕ್ಷ್ಯ ಭೋಜ್ಯಗಳ । ಸೊಗಸಾಗಿರುವ ಲೇಹ್ಯ ಚೋಹ್ಯಗಳ ॥ ಮಿಗೆ ಚಪ್ಪರಿಪ ಬಿಗುಹಿರುವೆಮ್ಮ ಬಗೆಯನ್ನು ಬಿಟ್ಟೀ ಹಗರಣವೇಕೆ ? ॥೩॥

ಹೀಗೆಂದೊಡನೆ—

ಶ್ಲೋ॥ ದೃಷ್ಟ್ವಾsಥ ರಾಜಕಮಿದಂ ದ್ವಿಜಸಂಘಮಧ್ಯಾ। ನ್ನಿರ್ಗತ್ಯ ಸಂಸದಿ ನಿಲಿಂಪಪತೇಃ ಕುಮಾರಃ ॥ ಚಾಪೇ ಶರಂ ಕರಧೃತೇ, ಸಮಧತ್ತ ಲಜ್ಜಾಮ್ । ಭೂಪೇಷು, ಭೂರಿಕುತುಕಂ ವಸುಧೇಂದ್ರಪುತ್ರ್ಯಾಮ್ ॥ —(ಭಾರ. ಚಂ)

ಅ॥ ಆಮೇಲೆ ರಾಜರನ್ನೆಲ್ಲ ನೋಡಿ ಬ್ರಾಹ್ಮಣರ ಗುಂಪಿನಿಂದ ಅರ್ಜುನನು ಎದ್ದು ನಿಂತು ಕೈಲಿರುವ ಬಿಲ್ಲಿನಲ್ಲಿ ಬಾಣವನ್ನೂ ರಾಜರಲ್ಲಿ ನಾಚಿಕೆಯನ್ನೂ ದ್ರೌಪದಿಯಲ್ಲಿ ಹೆಚ್ಚಿನ ಕುತೂಹಲವನ್ನೂ ಇಟ್ಟನು.

ಆವನನ್ನು ನೋಡಿ ಬ್ರಹ್ಮಚಾರಿಗಳೆಲ್ಲ ಹೇಳಿದ್ದೇನೆಂದರೆ—

ಷ॥ ಏನುಸಿದ್ಧಿಯುಪಾಧ್ಯಯರಿದ್ದಿರಿ । ದೇನು ? ಧನುವಿಂಗಲ್ಲಲೇ ? ತಾ । ನೇನು ಮನದಂಘವಣೆ ? ಬಯಸಿದಿರೇ ನಿತಂಬಿನಿಯ ?॥ ವೈನತೇಯನ ವಿಗಡಿಸಿದ ವಿಷ । ವೇನು ಸದರವೆ ಹಾವಡಿಗರಿಗಿ । ದೇನು ನಿಮ್ಮುತ್ಸಾಹವೆಂದುದು ಧೂರ್ತವಟುನಿಕರ ॥ —(ಕ. ಭಾರ)

ಆಗ ಸ್ತ್ರೀಯರು ಹಾಸ್ಯಮಾಡಿದ್ದೆಂತೆಂದರೆ—

ಬೇಗಡೆ—ರೂಪಕ

ಧನುವ ಧರಿಪನೆಂತೊ । ಸ್ಮರಸುಂದರ ಭೂದೇವ ॥ ಪ ॥ ಮನದೊಳಿವಂ ಪುಷ್ಪಂಗಳ । ಧನುವೆಂದೇ ಅರಿತನೇನೊ ॥ಅ. ಪ॥ ಧನುವನಿದನು ತಾನು ಕೃಷ್ಣಾ । ಜಿನವೆನುತ್ತ ತಿಳಿದನೇನೊ । ವನದ ದರ್ಭಕುಶಸಮಿತ್ತು । ನನುವಿದೆಂದು ಬಗೆದನೇನೊ॥ಗಣಿಸಲಿದೊಂದೂದುಗೊಳವಿ । ಯೆನುತಲೆ ತಾನೆನೆದನೇನೊ ॥೧॥ ಸುಲಭನೆಂತೊ ನೋಡಲೀತ । ಗಲಘುಯಂತ್ರವಿದನು ಹಿಡಿಯೆ । ಭಳಿರೆ ತನ್ನೊಳಿರುವ ಶಕ್ತಿ । ಯಳವನರಿಯದಿಂತು ಬಂದ ॥ ಸಲೆ ಸೌಂದರ್ಯಕೆ ಧನು ತಾ । ಸಿಲುಕುವದೇ ಧಾರಿಣಿಯೊಳು ॥೨॥

ಈ ಪ್ರಕಾರ ಹೇಳುತ್ತಿರುವಾಗ

ಶ್ಲೋ॥ ಪ್ರಣಮ್ಯ ಶಿರಸಾ ದೇವಮೀಶಾನಂ ವರದಂ ಪ್ರಭುಮ್ । ಕೃಷ್ಣಂ ಚ ಮನಸಾ ಕೃತ್ವಾ ಜಗೃಹೇ ಚಾರ್ಜುನೋ ಧನುಃ ॥ —(ಸಂ. ಭಾರ)

ಅ॥ ವರಪ್ರದನಾದ ಶಿವನಿಗೆ ತಲೆಯನ್ನು ಬಗ್ಗಿಸಿ ನಮಸ್ಕಾರಮಾಡಿ ಕೃಷ್ಣನನ್ನೂ ಮನಸ್ಸಿನಲ್ಲಿ ಧ್ಯಾನಮಾಡಿ ಅರ್ಜುನನು ಕೈಗೆ ಧನುಸ್ಸನ್ನು ತೆಗೆದುಕೊಂಡನು.

ಒಡನೆ ಆದದ್ದೇನೆಂದರೆ—

ಷ॥ ತೂಗಿ, ಕಿವಿವರೆಗುಗಿದು ಯಂತ್ರವ । ತಾಗಿಸಿದ ನಂಬಿನಲಿ; ಪಾರ್ಥನ! ಲಾಗುವೇಗವನಾರು ಬಲ್ಲರು ಯಂತ್ರಭೇದದಲಿ ? ॥ ಜಾಗು! ಧಣುಧಣು! ಪೂತು! ಕಾರ್ಮುಕ । ಯೋಗಸಿದ್ಧನೆ, ಮಝುರೆ! ಕೋದಂ । ಡಾಗಮ ತ್ರಿಪುರಾರಿಯೆಂದುದು ವಂದಿಸಂದೋಹ ॥ —(ಕ. ಭಾರ)

ಆಗ ದ್ರೌಪದಿಯು—

ಶ್ಲೋ ॥ ಜನನಾಂತರನೇತ್ರವಾರಿಸೃಷ್ಟ । ತ್ರಿಪಥಾಹೇಮಪಯೋಜಗುಂಫಿತೇವ ॥ ಬಲವೈರಿಭುವಸ್ತಯಾಧಿಕಂಠಮ್ । ವರಣೇ ಚಂಪಕಮಾಲಿಕಾ ವಿತೇನೇ॥ —(ಭಾರ. ಚಂ)

ಅ॥ ಪೂರ್ವಜನ್ಮದಲ್ಲಿ (ಗಂಡನು ದೊರೆಯದ್ದರಿಂದುಂಟಾದ) ತನ್ನ ಕಣ್ಣೀರಿನಿಂದ ಗಂಗಾನದಿಯಲ್ಲಿ ಹುಟ್ಟಿದ ಕಮಲಗಳನ್ನು ಪೋಣಿಸಿದಂತಿರುವ ಸಂಪಗೆಯ ಹೂವಿನ ಮಾಲೆಯನ್ನು ಅರ್ಜುನನ ಕೊರಳಿಗೆ ಹಾಕಿದಳು.

ಈ ಪ್ರಕಾರ ಮಾಲೆಯನ್ನು ಹಾಕಿ ದ್ರೌಪದಿಯು ವರನ ಬಳಿಯಲ್ಲಿ ನಿಂತಿದ್ದಾಗ—

ಷ॥ ಕೊರಳ ಹೂವಿನ ದಂಡೆಯಲಿ, ನಿಜ । ಕರದ ಭಾರಿಯ ಧನುವಿನಲಿ ತನು । ಪರಿಮಳದ ನಿಟ್ಟಿಸಳುಗಂಗಳ ಕೆಲದ ಯುವತಿಯಲಿ ॥ ವರನ ಪರಿ ಹೊಸ ತಾಯ್ತು ; ಹೊತ್ತನು । ಹರನ ಹಗೆ ಹಾರುವ ತನುವ; ನ । ಮ್ಮರಸಿ ನೆರೆ ಹಾರುವತಿಯೆಂದರು ನಗುತ ಚಪಲೆಯರು॥ —(ಕ. ಭಾರ)

ಟಿ॥ ಹರನ ಹಗೆ = ಮನ್ಮಥ. ಹಾರುವತನವ= ಬ್ರಾಹ್ಮಣರ ವೇಷವನ್ನು.

ದ್ರೌಪದಿಯು ಹೀಗೆ ಬ್ರಾಹ್ಮಣನಿಗೆ ದಕ್ಕಿದ್ದನ್ನು ನೋಡಿ ಕೌರವನು ಅಸೂಯೆಯಿಂದ—

ಷ॥ ಹಳೆಯ ಹರಧನುವಿದನು ಹಾರುವ । ಸೆಳೆದ ಗಡ! ಕೌಳಿಕದ ಯಂತ್ರವ। ಗೆಲಿದ ಗಡ !ಗರುವಾಯಿಗೆಡಿಸಿದ ಗಡ ಮಹೀಶ್ವರರ! ॥ ನಳಿನಮುಖಿ ಹಾಯ್ಕಿದಳು ಗಡ ತಿರು । ಕುಳಿಯ ,ಕೊರಳಲಿ ಮಾಲೆಯನು ! ನೀ । ವೊಲಿದು ಮದುವೆಯ ಮಾಡಿರೆಂದನು ಬೈದು ಭೂಮಿಪರ ॥ —(ಕ.ಭಾರ)

ಕೀ ॥ ಒಡನೆ ರಾಜರೆಲ್ಲರು ದಂಡೆತ್ತಲು । ಬಿಡದೆ ದ್ರುಪದನಾ ಬ್ರಾಹ್ಮಣರ॥ ಅಡಿಯ ಹಿಡಿದು ಶಾಂತಿಯ ಗೊಳಿಸಿರೆನಲ್ । ತಡೆದನರ್ಜುನನು ಭೂಭುಜರ ॥

ಆಗ—

ರ॥ ಬಲು ಗೈದುಗಾರನು ನರನು । ಸಲೆ । ಸೋಲಿಸಿದನನಿಬರನು ॥ ಪ ॥ ತಡೆದನೆಲ್ಲ ಬ್ರಾಹ್ಮಣರನು ಹಿಂದೆ । ಬಿಡದೆ ಧನುವ ಕೊಂಡಾದನು ಮುಂದೆ । ಹಾರ್ವತನವೆಲ್ಲಿಯೊ ಮರೆಯಾಯಿತು । ವೀರಕ್ಷತ್ರಿಯತೇಜವು ಬೀರಿತು । ಗುರಿಯಿಡಲರ್ಜುನ ಕೆಲವು ಬಾಣಗಳ । ತರಿದವವುಗಳರಿಗಳ ಗೋಣುಗಳ । ಸೊರಗುತೆ ಹಿಮೆಟ್ಟಲು ಸೈನಿಕರು । ಭರದಿ ಕರ್ಣನೈತಂದಿರಲಿದಿರು । ಸದೆದನೊಮ್ಮೆ ಕರ್ಣನನಾ ನರನು । ಒದಗಲೊಮ್ಮೆ ಮೂರ್ಛೆಯನು ತಾಳಿದನು । ಮತ್ತೆ ಯತ್ನದಿಂ ಮೇಲೇರಿದನು । ಮತ್ತದಂತಿಯಂದದಿ ಕಾದಿದನು । ಜರಿದರೊಬ್ಬರೊಬ್ಬರನಾಹವದಿ । ಮೆರೆದರು ತಪ್ಪದೆ ಕೋಪಾವೇಶದಿ । ಹೆದರಲಿಲ್ಲವರು ಬಾಣಂಗಳಿಗೆ । ಎದೆಗೊಟ್ಟರು ವಿವಿಧಾಯುಧಗಳಿಗೆ । ನರನು ಕತ್ತರಿಸೆ ಕರ್ಣನ ಧನುವನು । ಧುರದಿ ಹಾರುವರ ಕೈ ಹಿರಿದೆಂದನು । ನರನ ಮುಂದುಗಡೆಯೊಳು ನಿಲಲಾರದೆ । ಅರಸರೋಡಿದರು ಮುಖವನು ತೋರದೆ ॥

ಏಕಾಂಗಿಯಾಗಿ ಇಷ್ಟು ಯುದ್ಧ ಮಾಡುವದಕ್ಕೆ ಅರ್ಜುನನಲ್ಲಿದ್ದ ಹೆಚ್ಚುಗಾರಿಕೆಯೇನೆಂದರೆ-

ಶ್ಲೋ ॥ ಲಕ್ಷ್ಮಣೋ ಲಘುಸಂಧಾನೋ; ದೂರಪಾತೀ ಚ ರಾಘವಃ; । ಕರ್ಣೋ ದೃಢಪ್ರಹಾರೀ ಚ; ಪಾರ್ಥಸ್ಯೈತೇ ತ್ರಯೋ ಗುಣಾಃ ॥ —(ಸು)

ಅ॥ ಲಕ್ಷ್ಮಣನು ಸುಲಭವಾಗಿ ಗುರಿಯಿಡಬಲ್ಲವನು ; ರಾಮನು ದೂರಕ್ಕೆಸೆಯಬಲ್ಲವನು ; ಕರ್ಣನು ಬಲವಾಗಿ ಹೊಡೆಯಬಲ್ಲವನು—ಅರ್ಜುನನಿಗೆ ಈ ಮೂರು ಗುಣಗಳೂ ಉಂಟು.

ವೀರವೃತ್ತಿಯು ಹೀಗಿರಬೇಕೆಂದೇ ಪೀಠಿಕೆಯಲ್ಲಿ ಸಜ್ಜನರು "**ಪ್ರಾಯ ಬಂದು ಸಂಸಾರದ**" ಎಂದು ಮೊದಲಾಗಿರುವ ನುಡಿಯನ್ನು ಹೇಳಿರುವರು.

ಈ ಪ್ರಕಾರ ಶತ್ರುಗಳನ್ನೆಲ್ಲ ಹಿಮ್ಮೆಟ್ಟಿಸಿದಮೇಲೆ ಬ್ರಾಹ್ಮಣರಿಂದವೇನೆಂದರೆ—

ಶ್ಲೋ ॥ ಬಹವಃ ಪಂಗವೋಽಪೀಹ ನರಾಃ ಶಾಸ್ತ್ರಾಣ್ಯಧೀಯತೇ । ವಿರಲಾ ರಿಪುಖಡ್ಗಾಗ್ರಧಾರಾಪಾತಸಹಿಷ್ಣವಃ ॥ —(ಸು)

ಅ॥ ಎಷ್ಟೋ ಜನ ಕುಂಟರು ಕೂಡ ಶಾಸ್ತ್ರಗಳನ್ನು ಓದುತ್ತಾರೆ. ಶತ್ರುಗಳ ಶಸ್ತ್ರದ ಪೆಟ್ಟನ್ನು ತಡೆಯಬಲ್ಲವರು ಕಡಿಮೆ.

ಹೀಗೆನ್ನುತ್ತಿರುವಾಗ ಪಾಂಡವರು ತಾವಿಳಿದಿದ್ದ ಮನೆಗೆ ದ್ರೌಪದಿಯೊಡನೆ ಬಂದು—

ಷ ॥ ತಾಯೆ, ಬಿನ್ನಹವಿಂದು ಧ ಣೀ । ರಾಯರೆಲ್ಲರ ಗೆಲಿದು ತಂದೆನು । ನಾಯಕವನನುಪವಿತವಮೌಲ್ಯವನಮಲಮೌಕ್ತಿಕವ; ॥ ತಾಯೆ, ಚಿತ್ತೈಸಿದಿರೆ ಎನೆ ಕಡೆ।ವಾಯಿದಳು ತನಿಹರುಷದಲಿ; ಲೇ । ಸಾಯಿತೈವರು ಕೂಡಿ ಭೋಗಿಪುದೆಂದಳಾ ಕುಂತಿ ॥ —(ಕ.ಭಾರ)

ಟಿ॥ ನಾಯಕವ=ಶ್ರೇಷ್ಟವಾದದ್ದನ್ನು. ಕಡೆವಾಯಿದಳು=ತೇಲಾಡಿದಳು

ಆ ಮಾತನ್ನು ಕೇಳಿ—

ಕಂ ॥ ತಾಯನುಡಿ ವಿಚಾರಲರಿದೆಂ । ದಾ ಯಮಜಂ ಧರ್ಮಸೂಕ್ಷ್ಮಮಂ ಪರಿಕಿಸುತಂ ॥ ಆಯತಲೋಚನೆಯೈವರ । ಜಾಯೆಯೆನಲ್ಕಾಯ್ತು ಸರ್ವಸಮ್ಮತವವರೊಳ್ ॥

ಸಾ ॥ ಮರೆಯೊಳು ಧೃಷ್ಟದ್ಯುಮ್ನನು ನೋಡುತ । ಲಿರಲಾ ಐವರು ಬೇಗ ॥ ತರಲಂದಿನ ಭಿಕ್ಷಾನ್ನವ ಹೊರಟರು । ಸರಭಸದಿಂದಾಗ ॥

ರಾಜಪುತ್ರರಾಗಿ ರಾಜಪುತ್ರಿಯನ್ನು ಗೆದ್ದಿದ್ದರೂ ಭಿಕ್ಷೆಯ ದೈವ ತಪ್ಪಲಿಲ್ಲ. ದೈವಲೀಲೆಯೇ ಹೀಗೆ. ಶಾಸ್ತ್ರಕಾರರು ಹೇಳಿರುವದೇನೆಂದರೆ—

ಶ್ಲೋ ॥ ಸಚ್ಛಿದ್ರೋ ಮಧ್ಯಕುಟಿಲಃ ಕರ್ಣಃ ಸ್ವರ್ಣಸ್ಯ ಭಾಜನಮ್ । ಧಿಗ್ದೈವಂ ನಿರ್ಮಲಂ ಚಕ್ಷುಃ ಪಾತ್ರಂ ಕಜ್ಜಲಭಸ್ಮನಃ ॥ —(ಸು)

ಅ॥ ತೂತುಳ್ಳದ್ದಾಗಿ ನಡುವೆ ಡೊಂಕಾಗಿರುವ ಕಿವಿಯು ಪಾಲಿಗೆ ಬಂಗಾರ; ನಿರ್ಮಲವಾದ ಕಣ್ಣಿನ ಪಾಲಿಗೆ ಕಾಡಿಗೆ ಮತ್ತು ಬೂದಿ. ಈ ದೈವಕ್ಕೆ ಧಿಕ್ಕಾರವಿರಲಿ.

ಅದರಂತೆ ದೈವವು ಯಾರಿಗೂ ತಪ್ಪಿದ್ದಲ್ಲ.

ಶ್ಲೋ ॥ ರಾಜರಾಜಸಖಾಪ್ಯೇಷ ಮಹಾದೇವೋಽಪಿ ಭಿಕ್ಷತೇ । ವಕ್ರೇ ವಿಧೌ ಲಲಾಟಸ್ಥೇ ತತ್ರಾನ್ಯೇಷಾ ತು ಕಾ ಕಥಾ ॥ —(ಸು.ಲಾ)

ಅ॥ ಕುಬೇರನ ಮಿತ್ರನಾದರೂ ಮಹಾದೇವನಾದರೂ ಕೂಡ ಅವನೂ ಭಿಕ್ಷೆಯನ್ನು ಬೇಡುತ್ತಾನೆ. ಹಣೆಯ ಬರಹವು ವಕ್ರವಾಗಿದ್ದರೆ ಉಳಿದವರ ಮಾತಿನ್ನೇನು!

ಭಿಕ್ಷೆಯನ್ನು ತಂದಮೇಲೆ ಕುಂತಿಯು ದ್ರೌಪದಿಗೆ ಭಿಕ್ಷಾನ್ನವಿಭಾಗಕ್ರಮವನ್ನು ತಿಳಿಸುತ್ತಾಳೆ:—

ದಿಂ ॥ ಒಂದು ಭಾಗಂ ವೈಶ್ವದೇವಕೆಂದಾಗೆ । ಒಂದು ಭೂಸುರರ್ಗನ್ನೊಂದು ಭಿಕ್ಷುಕರ್ಗೆ ॥ ನಿಂದುದರೊಳರ್ಧಂ ಭೀಮಸೇನಗಾಗೆ । ಬಂದನಿತು ನಮ್ಮೆಲ್ಲರಿಗೆ ನಿಂತ ಭಾಗ ॥

ದ್ರೌಪದಿಯು ಈ ಪ್ರಕಾರ ವಿಭಾಗವಮಾಡಿ ಗಂಡಸರ ಊಟವಾದ ಮೇಲೆ ಅತ್ತೆಗಿಟ್ಟು ಆಮೇಲೆ ತಾನುಂಡು—

ಕಂ ॥ ಪುರುಷರ ಕಾಲಿನ ಕೆಳಗಡೆ । ವಿರಚಿಸಿ ದರ್ಭಾಸನವನು ಬ್ರಾಹ್ಮಣರೆಂಬಾ ॥ ಕೊರತೆಗೆಡೆಗೊಡದೆ ವೀರರ । ವರಸಂಭಾಷಣೆಯ ಕೇಳುತಿರ್ದಳ್ ನಿಶಿಯೊಳ್ ॥

ಧೃಷ್ಟದ್ಯುಮ್ನನು ಇದನ್ನೆಲ್ಲ ನೋಡಿಕೊಂಡು ಬಂದಾಗ ದ್ರುಪದನು ಆತುರದಿಂದ ಮಗನನ್ನು ಕೇಳಿದ್ದೇನೆಂದರೆ—

ಶಂಕರಾಭರಣ— ಆದಿತಾಳ

ತಿಳಿದೆಯಾ ಸುಕುಮಾರ, । ಅವನಿರವನೆಲ್ಲ ॥ ಪ ॥ ಕುಲದೊಳು ಹೀನನೊ । ಕುಲಜನೊ ಆತನ । ನೆಲವಾವುದಿಲ್ಲಿಯ ನೆಳಲಾವುದು ॥ ಅಳಿಕುಂತಳೆಯೊಳೆಂತು । ಒಲುಮೆದೋರುವನಾತ । ಬಳಿಸಂದ ಪರಿವಾರ । ದೊಲವೆಂತೆಂಬುದ ನೀನು ॥೧॥ ಪೃಥೆಯ ಸುತನ ನಾನು । ಹಿತದಿ ಬಯಸುತಿರ್ದೆ । ಸುತೆಯನಾತನ ಕೈಯೊಳಿಡುವೆನೆಂದು ॥ ಹತಭಾಗ್ಯನಾದೆನು । ಗತಿಯಿಲ್ಲವಾದೊಡ । ಮತಿಶೂರನಿವನಾರ । ಸುತನೊ ನಾ ಕಾಣೆನು ॥ ೨ ॥

ಆಗ—

ಕೀ ॥ ಅವರು ಪಾಂಡವರ ತೆರದಿಂದಲಿ ತೋ । ರುವರೆನೆ ಮಗನಾ ದ್ರುಪದನು ತಾ ॥ ಆವರನೆ ಕೇಳೆ ಪುರೋಹಿತರಿಗೆ ನಿಯ । ಮವ ಕೊಟ್ಟನು ತಿಳಿಯುವದೆನುತ ॥

ಅದರಂತೆ ಬಂದ ಪುರೋಹಿತರು ಧರ್ಮರಾಯನಿಂದ ಸತ್ಕಾರವನ್ನು ಪಡೆದು ಕುಲಗೋತ್ರಗಳ ಪ್ರಶ್ನೆಯನ್ನು ಮಾಡಲು ಧರ್ಮರಾಯನು ಹೇಳುತ್ತಾನೆ—

ಸಾ॥ ಧನುವಿಗೆ ಹೆದೆಯೇರಿಸಿ ಲಕ್ಷ್ಯವ ನೆ । ಟ್ಟನೆ ಬೀಳಿಪುದೆಂಬೊಂದೇ ॥ ಪಣವಲ್ಲದೆ ಕುಲಗೋತ್ರಸಮಯವಿ । ಲ್ಲೆನಲಿನ್ನೇನಿದರಿಂದೆ ॥

ಆಗ ಪುರೋಹಿತರು ಉಪಾಯಾಂತರವರಿಯದೆ ಪಾಂಡವರನ್ನು ಭೋಜನಕ್ಕೆಂದು ಅರಮನೆಗೆ ಕರೆದುತರಲು ಭೋಜನಾದಿಗಳಾದ ಮೇಲೆ ದ್ರುಪದನಿಗೂ ಧರ್ಮರಾಯನಿಗೂ ಮಾತು ನಡೆದದ್ದೇನೆಂದರೆ—

ದಿಂ.॥ ಮದುವೆಗೆಯ್ಯಲ್ಕೇಳುವೆನು ಕುಲವನೀಗ । ಚದುರನೇ ಪೇಳೆಂದಾಡೆ ದ್ರುಪದನಾಗ ॥ ಹೆದರಬೇಡೈ ಪಾಂಡವರು ನಾವೆನುತ್ತ । ಮುದದಿ ಪೇಳ್ದಂ ಧರ್ಮಜನು ತಾ ನಗುತ್ತ ॥

ಇದರಿಂದ ದ್ರುಪದನು ಸಂತೋಷಗೊಂಡು ಮರುದಿನ ವಿವಾಹವನ್ನು ಗೊತ್ತುಮಾಡಿ ಹಸೆಯ ಜಗುಲಿಗೆ ಕರೆಯುತ್ತಲೆ—

ಕಂ ॥ ನರನಿಂದಂ ಕೂಡಿರ್ದೈ । ವರುಮಾ ವೇದಿಕೆಯನೇರಿ ಬರೆ ಪೀಠಕೆಸ ॥ ರ್ವರಿಗಚ್ಚರಿಯಾದುದಿದೇಂ। ಪರಿಯೋರ್ವಳಿಗೈವರುಂಟೆ ಗಂಡರ್ಜಗದೊಳ್? ॥

ಆಗ ದ್ರುಪದನು ಪ್ರಶ್ನೆ ಮಾಡಿದ್ದಕ್ಕೆ ಧರ್ಮರಾಯನು ಹೇಳಿದ್ದೇನೆಂದರೆ—

ಸಾಂ॥ ಹಿರಿಯರಿಗಾಗದೆ ಕಿರಿಯನ ಮದುವೆಯ। ವಿರಚಿಸುವದು ಧರ್ಮವಲ್ಲ ; ॥
ನೆರೆ ನಮ್ಮ ತಾಯ ಮಾತನು ನಡೆಸುವೊಡೈ । ವರು ಬರಲಿದು ನಿಂದ್ಯವಲ್ಲ ॥

ಅಷ್ಟರಲ್ಲಿ ವ್ಯಾಸರು ಬರಲು ದ್ರುಪದನು ಅವರಿಗೆ ಸತ್ಕಾರವನ್ನು ಮಾಡಿ ಈ ಪ್ರಶ್ನೆಯನ್ನು ಅವರ ಮುಂದಿಟ್ಟನು. ಅವರು ಅದರ ಸಮಾಧಾನವನ್ನು ಧರ್ಮರಾಯನ ಬಾಯಿಂದಲೇ ಹೇಳಿಸುತ್ತೇನೆಂದು ಹೇಳಿ ಧರ್ಮರಾಯನನ್ನು ಕೇಳಿದಾಗ ಅವನು ಹೇಳಿದ್ದೇನೆಂದರೆ—

ಸೀ ॥ ಎನ್ನ ಮನವೆಂದಿಗುಮಧರ್ಮಕ್ಕೆ ಪೋಗದೆಂ - ದೆನ್ನ ನಿಶ್ಚಯವಿ
ದನು ಬಿಡಲರಿಯೆನು; । ಮುನ್ನ ಜಟಿಲನ ತನುಜೆಯೇಳುಮಂದಿಯ ಹಸ್ತ-ವನ್ನು
ಹಿಡಿದಿರ್ದಳೆನೆ ಕೇಳಿರುವೆನು; ॥ ಇನ್ನುಂ ಪ್ರಚೇತಸರ ಹತ್ತುಮಂದಿಯುಮೋರ್ವ-
ಳನ್ನು ಕೈಗೊಂಡರೆಂದರಿತಿರುವೆನು;.। ಮನ್ನಿಸದೆ ಬಿಡುವೊಡಾಗದು ತಾಯ ಮಾತೆಂ
ಬು - ದುನ್ನತವಿದೆಲ್ಲಕೆಂದೆಣಿಸುತಿಹೆನು; ॥ ಅನ್ಯಾಯವಿದರೊಳಗೆ ತೋರದೆನಗೆ; ।
ಮಾನ್ಯರಿಗೆ ಮಾನ್ಯರಾಗಿಹಿರಿ ಧರೆಗೆ; । ಉನ್ನತದ ಧರ್ಮವಿದ ಪೇಳ್ವುದಿಳೆಗೆ;।
ಚೆನ್ನಾಗಿ ವರ್ಧಿಸಲು ಕುಶಲವೆಮಗೆ ॥

ಧರ್ಮರಾಯನ ಈ ನಡೆವಳಿಕೆಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಕೀರ್ತನಾರಂಭದಲ್ಲಿ ಭಗವದ್ಭಕ್ತರು "**ಸರ್ವಸಾಮರ್ಥ್ಯವಿರೆಯು**" ಎಂದು ಮೊದಲಾಗಿರುವ ನುಡಿಯನ್ನು ಹೇಳಿದ್ದು.

ಆಗ ವ್ಯಾಸರು ಸರ್ವಸಂಶಯಗಳೂ ಪರಿಹಾರವಾಗುವಂತೆ ದ್ರೌಪದಿಯ ಪೂರ್ವವೃತ್ತಾಂತವನ್ನು ಹೇಳುತ್ತಾರೆ—

ಷ ॥ ಇವಳು ಪೂರ್ವದಿ ನಳನರೇಂದ್ರನ । ಕುವರಿ ನಾಲಾಯಿನಿಯು ಹೆಸರಿಂ।
ದಿವಳ ಪತಿ ಮೌದ್ಗಲ್ಯನೆಂಬನು ಕುಷ್ಠರೋಗಿಷ್ಠ;॥ಅವನೆ ದೈವವೆನುತ್ತೆ ತಿಳಿದಿವ।
ಳವನು ಬಿಟ್ಟನ್ನದಲಿ ಬಿದ್ದ । ದ್ದವನ ಬಿಟ್ಟನು ತೆಗೆದು ತಿನೆ ವರವೀಯಲನು
ವಾದ ॥

ಆಗ ದ್ರೌಪದಿ ಕೇಳಿದ್ದೇನೆಂದರೆ—

ಸಾಂ ॥ ಬೇರೆಬೇರೈದು ರೂಪದೊಳು ಭೋಗಿಸಿ ಸುಖ । ದೋರೆನಗತಿಹ
ರ್ಷವಾಗೆ; ॥ ನೀರನೆ, ನೀನೊಬ್ಬನಾಗಿದ್ದು ಕಾಮವಿ । ಕಾರವು ತಾ ಶಾಂತವಾಗೆ॥

ಆ ನಾಲಾಯಿನಿಯೇ ಈಗ ದ್ರೌಪದಿಯಾಗಿರುವದರಿಂದ ಅವಳಿಗೆ ಹಿಂದಿನ ಸಂಸ್ಕಾರದ ಬಲದಿಂದ ಐವರು ಪುರುಷರಾಗುವ ಯೋಗವಿದೆ. ಇಷ್ಟೇ ಅಲ್ಲ. ನಾಲಾಯಿನಿಯು ಇಷ್ಟದಂತೆ ಭೋಗಿಸುತ್ತಿದ್ದು—

ಕಂ ॥ ಕೆಲದಿನದಿ ತನ್ನ ಚರ್ಯೆಗೆ । ಸಲೆ ನಾಚಿದ ಮೌನಿ ತಪಕೆ ಪೊರಡಲ್ಬಿ
ಡದೀ ॥ ಲಲನೆ ತಡೆಗೆಯ್ಯೆ ಕಾಮದಿ । ತಳೆಯೆಂದಂ ಮುಂದೆ ಪಂಚಪತಿಗಳ ನಿಳೆ
ಯೊಳ್ ॥

ಆಮೇಲೆ ದ್ರೌಪದಿಯು ಪಂಚಪತಿಗಳಾಗುವರೆಂಬ ಮಾತಿನಿಂದ ಕ್ಲೇಶವನ್ನು ಹೊಂದಿ ಕಠಿನ ವ್ರತವನ್ನು ವಹಿಸಿ ಶಿವನನ್ನು ಕುರಿತು ತಪಶ್ಚರ್ಯೆಗಾರಂಭಿಸಿ ಸ್ತೋತ್ರಮಾಡಿದ್ದೇನೆಂದರೆ—

ಚೂ॥ ಶರಣಜನಗಳವೇಲೆ ಕರುಣಾಕಟಾಕ್ಷವನು ಹರಡುತ್ತ ಪೊರೆಯುತಿಹ ಹರನೆ, ಮಹೇಶ್ವರನೆ, ಚಂದ್ರಶೇಖರನೆ । ಕರಿಚರ್ಮವನು ಹೊದ್ದು ತಿರಿದುಣ್ಣುವವನಾಗಿ ಪರಮಪಾವನನೆನಿಸಿ ಮೆರೆಯುವವನೆ, ಶಿವನೆ, ಭವನೆ । ತೊಡೆಯಲ್ಲಿ ಪಾರ್ವತಿಯ ಜಡೆಯಲ್ಲಿ ಗಂಗೆಯನು ಬಿಡದೆ ತಾಳ್ದವನಾಗಿ ಸುಡುಗಾಡಿನಲ್ಲಿದ್ದು ಪೊಡಮಟ್ಟವರಿಗೆಲ್ಲ ಪೊಡವಿಯೊಡೆತನವೀವ ಮೃಡನೆ, ಪರಿವೃಢನೆ, ಪೊರೆಯೆನ್ನನೊಡನೆ। ಪಶುವಾಗಿಹೆನು ನಾನು ; ಪಶುಪತಿಯೆನಿಪೆ ನೀನು ; ಪೊಸದಾಗಿ ಪೇಳಲೇನು, ಸ್ಥಾಣು, ನಾನಿನ್ನ ಪದರೇಣು ; ನೀನೆನ್ನ ಮುಂದೆ ಕಾಣು ; ಉದಾಸೀನತೆಯ ಮಾಣು । ಜಗದಿ ನೀನಲ್ತೆ ಭೂತೇಶ, ಹಗರಣವ ಕಡೆಹಾಯಿಸೀಶ, ಹಗಲಿರುಳುಮೆನ್ನ ಮನದೊಳಗಿರಲಿ ನಿನ್ನವಾಸ, ಗಿರೀಶ, ಗಿರಿಶ, ಕೃತ್ತಿವಾಸ । ದೀನರಾದವರ ತಾರಕನೆ, ತಾರಕಾಸುರಗೆ ಮಾರಕನೆ, ಮಾರನಂಗದ ವಿದಾರಕನೆ, ಕುಬೇರಸಖನೆ, ಪಂಚಮುಖನೆ, ಭಕ್ತಪೋಷಕನೆ, ನತಸಹಾಯಕನೆ । ಕಳೆಯೆನ್ನ ಮನದ ದುಃಖವನು; ತಳೆಯೆನ್ನ ಮೇಲೆ ಪ್ರೇಮವನು; ಪೊಳೆಯೆನ್ನ ಮುಂದೀಗ ನೀನು; ಬೇಡುವೆನು ನಾನು ॥

ಆಗ ಪ್ರತ್ಯಕ್ಷನಾದ ಶಿವನನ್ನು —

ಷ॥ ತರುಣಿ ವೈಯಿಕ್ಕಿದಳು; ಕರದಲಿ । ಶಿರವ ನೆಗಹಿದನಬುಜಲೋಚನೆ, ವರವ ಕೊಟ್ಟೆನು; ಬೇಡಿಕೊಳ್ಳೆನೆ ತರುಣಿತಲೆವಾಗಿ ॥ ಹರ, ಪತಿಂದೇಹಿ; ಪ್ರಭೋ, ಶಂ । ಕರ, ಪತಿಂದೇಹಿ; ಪ್ರಭೋ, ಎಂ । ದರಸಿಬೇಡಿದಳೈದು ಬಾರಿ ಮಹೇಶನಲಿ ವರವ ॥ —(ಕ.ಭಾರ)

ಆಗ ಶಿವನು ಹೇಳಿದ್ದು :—

ಸಾಂ॥ ಧಿಟ್ಟೆ ನೀನಿಳೆಯೊಳಗರಸನ ಮಗಳಾಗಿ । ಹುಟ್ಟುತ್ತೈವರು ಪತಿಗಳಿಗೆ॥ ಪಟ್ಟದರಸಿಯಾಗಿ ದೇವಕಾರ್ಯವ ನೀನು ನೆಟ್ಟಗೆ ಸಾಧಿಪೆ ಇಳೆಗೆ ॥

ಮತ್ತೆ ನಾಲಾಯಿಸಿಯು ಐವರು ಪತಿಗಳೆಂಬ ಮಾತೇ ತನಗೆ ಕ್ಲೇಶದಾಯಕವೆನ್ನಲು ಶಿವನು ಹೇಳಿದ್ದು :—

ಕಂ॥ ಒಲಿದೈದು ಬಾರಿ ಕೇಳಿದ । ಫಲವಿದು; ಮುನಿಶಾಪವಳಿಯಲರಿಯದು; ತಪಮಂ ॥ ಸಲೆಗೈದ ನಿನ್ನ ಶುದ್ಧತೆ । ಯಳಿಯದು ಬಹುಪತಿಗಳಿಂದಮೆಂದುಂ ಧರೆಯೊಳ್ ॥

ಇದನ್ನು ಇಷ್ಟು ತಿಳಿಸಿದ ವ್ಯಾಸರು ದ್ರುಪದನಿಗೆ ಹೇಳಿದ ಕೊನೆಯ ಮಾತೇನೆಂದರೆ—

ಕೀ॥ ದೇವಾಂಶದವರು ಪಾಂಡವರೈವರು । ದೇವಿಯಯೋನಿಜೆಯದರಿಂದ ॥ ಭಾವಿಸದೇನುಂ ದೋಷವ ನೆರೆ ಸಂ । ಭಾವಿಸು ಮದುವೆಯ ಮುದದಿಂದ ॥

ಒಡನೆ ಮದುವೆಯ ಸಂಭ್ರಮವು ನಡೆದು—

ಸುರಟಿ—ಆದಿತಾಳ

ಮದುವೆ ದ್ರುಪದ ಸುತೆಗೆ । ಆಯಿತು । ಮುದದಿ ಪಾಂಡವರಿಗೆ ॥ಪ॥ ಪದುಮನಾಭನಂದೊದಗಿ ಬಂದು ಮಾ । ಡಿದನು ಹರ್ಷಮಂದೊದಗೆ ಸರ್ವರಿಗೆ॥ಅ.ಪ॥ ಮಂಗಲಸ್ನಾನವನು । ಗೈಸಿದ । ರಂಗನೆಯರು ಬಂದು ॥ ಭೃಂಗಕುಂತಲೆಗೆ ತುಂಗವಿಕ್ರಮರಿಗೆ । ಮಂಗಲಾಂಗಿಯರು ಶೃಂಗಾರ ಗೆಯ್ಯಲು ॥೧॥ ನೆರೆದರಾಗ ಸಭೆಗೆ । ಕೂಡಲೆ । ಪುರಜನ ಪರಿಜನರು ॥ ವರಮಣಿಹಾರದಿ । ಮಿರುಗುವ ಸಭೆಯೊಳು । ಪರಿಪರಿವಿಭವವ । ಸಿರದೀಕ್ಷಿಸುತಿರೆ ॥ ೨ ॥ ಕಟ್ಟೆ ಕಂಕಣವನು । ಯಜ್ಞೇಶನ । ನೆಟ್ಟನೆ ಬಲವಂದು ॥ ಇಟ್ಟು ಹೋಮವನು । ಕೊಟ್ಟು ದಾನಗಳ । ಸೃಷ್ಟಿಯೊಳ್ಮೇಲಿನ ಮೆಟ್ಟಲೆನಿಸಿದರು ॥ ೩ ॥

ಇಷ್ಟೆಲ್ಲಾ ಆಗಿ ಬೀಗರು ಒಬ್ಬರಿಗೊಬ್ಬರು ಉಡುಗೆರೆ ಕೊಟ್ಟದ್ದಾದ ಮೇಲೆ—

ಸಾ ॥ ಬಗೆಬಗೆ ವಸ್ತ್ರವ ಕೃಷ್ಣನು ಪಾಂಡವ । ರಿಗೆ ಕೊಟ್ಟನು ತಾನಾಗ ॥ ಮಿಗೆ ಕುಂತಿಯು ಮಕ್ಕಳ ಕೃಷ್ಣನ ಮಡಿ । ಲಿಗೆ ತಾನಿಟ್ಟಳು ಬೇಗ॥

ಹೀಗೆ ಪರಮಾತ್ಮನ ಆಶ್ರಯವನ್ನು ಪಡೆಯಲೆಂದೇ ಕೀರ್ತನಾರಂಭದಲ್ಲಿ ಭಗವದ್ಭಕ್ತರು "**ವೀರವೃತ್ತಿಯ ತೋರಲೊಡನೆ**" ಎಂದುಪದೇಶಮಾಡಿರುವದು.

ಕೃಷ್ಣಾನುಗ್ರಹಕ್ಕೆ ಪಾತ್ರರಾದ ಪತಿಗಳನ್ನು ಪಡೆದ ದ್ರೌಪದಿಯನ್ನು ಆಗ ಜನರೆಲ್ಲರೂ ಹೊಗಳಿದ್ದೇನೆಂದರೆ—

ದರ್ಬಾರು—ರೂಪಕ

ಏನು ಧನ್ಯಳೋ । ನೀನು । ಏನು ಮಾನ್ಯಳೊ! ॥ಪ॥ ಮಾನಿನಿಯೇ, ದ್ರೌಪದಿಯೆ, । ಮಾನವೇಂದ್ರದ್ರುಪದತನಯೆ, ॥ಅ.ಪ॥ ಅತ್ತೆ ಕುಂತಿಗೇಳು ಮಂದಿ । ಮತ್ತೆ ನಿನಗೈದು ಮಂದಿ ॥ ಉತ್ತಮಪತಿಗಳನೆ ಪೊಂದಿ । ಮತ್ತಕಾಸಿನಿ ಬಾಳ್ವಕತವಿ ॥೧॥ ಚರಾಚರಾಣುರೇಣುಕಾಷ್ಠ । ಪರಿಪೂರ್ಣನಾದ ಶ್ರೇಷ್ಠ ॥ ಹರಿಗೆ ತಂಗಿಯಾದ ಮೇಲೆ । ಸರಿಯಾರು ನಿನಗೆ ಸುಶೀಲೆ ॥ ೨ ॥ ಪ್ರೇಮದ ಹದಿನಾರು ಸಾವಿರ । ಕಾಮಿನಿಯರ ಸಾಲದೇ ವರ ॥ ಭೂಮಿಲಕ್ಷ್ಮೀದೇವಿಯರು । ನೇಮದ ನಿನಗತ್ತಿಗೆಯರು ॥ ೩ ॥ ಪರಮಗುರುವು ವೇದವ್ಯಾಸ । ವರಮುನೀಂದ್ರ; ನಿನ್ನ ವಂಶ ॥ ಶರಧಿಜಾತನದು; ಚಾರು । ಸಿರಿಗೆ ನೀನು ತೌರೂರು ॥ ೪ ॥ ದೇವರಾಜ ಸಂಯಮನೀ । ದೇವ ಮಾರುತಾಶ್ವಿನೀ ॥ ದೇವತೆಗಳು ಪಾಂಡುರಾಜ । ಮಾವಂದಿರು ನಿನಗೆ ತರುಣಿ ॥ —(ಮಂ.ಗೀ)

ಬರೀ ಇಷ್ಟೇ ಹೊಗಳುವದೇನೆಂದು ಒಬ್ಬ ಕವಿ ತನ್ನ ಅಭಿಪ್ರಾಯವನ್ನು ಪ್ರಕಟಮಾಡಿರುವದೇನೆಂದರೆ—

ಶ್ಲೋ ॥ ಸರ್ವಪಾರ್ಥಪ್ರಿಯತಮಾ ನೀಲೋತ್ಪಲದಲಪ್ರಭಾ । ಭಿದ್ಯತೇ ಕೃಷ್ಣತಃ ಕೃಷ್ಣಾ ಸ್ತ್ರೈಕಾರೇಣೈವ ನಾನ್ಯಥಾ ॥ —(ಸು.ಛಾ)

ಅ॥ ಪಾಂಡವರೆಲ್ಲರಿಗೂ ಬಹಳ ಪ್ರೀತಿಪಾತ್ರಳಾದಂಥ, ನೀಲಕನುಲದ ದಳದಂತೆ ಕಾಂತಿಯುಳ್ಳಂಥ ದ್ರಾಪದಿಯು ಕೃಷ್ಣನಿಗಿಂತ ಸ್ತ್ರೀರೂಪದಲ್ಲಿ ಮಾತ್ರ ಭೇದವುಳ್ಳವಳಾಗಿದ್ದಳೇ ಹೊರತು ಬೇರೆ ಇಲ್ಲ.

ಈ ಪ್ರಕಾರ ಪಾಂಡವರು ಅರಗಿನ ಮನೆಯು ದಾಹವಾದ ಮೇಲೆ ದ್ರೌಪದೀಸ್ವಯಂವರದಲ್ಲಿ ಕಾಣಿಸಿಕೊಂಡು ತಮ್ಮ ಪರಾಕ್ರಮುವನ್ನೂ ತೋರಿಸಿದ್ದನ್ನು ನೋಡಿ ಕೌರವರು ಇನ್ನು ಅವರನ್ನು ಒಳಗು ಮಾಡಿಕೊಳ್ಳದಿದ್ದರೆ ಆಗುವದಿಲ್ಲವೆಂದು ಪಾಂಡವರಿಗೆ ಅರ್ಧರಾಜ್ಯವನ್ನು ಕೊಟ್ಟದ್ದಾರೆ. ಆಮೇಲೆ ಪಾಂಡವರು ಸುಖದಿಂದ ರಾಜ್ಯಭಾರಮಾಡುತ್ತಿದ್ದಾರೆ. ವೀರವೃತ್ತಿಯಿಂದ ಪಾಂಡವರಿಗೆ ಇಷ್ಟೆಲ್ಲ ಲಾಭವಾದದ್ದನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಕೀರ್ತನಾರಂಭದಲ್ಲಿ ಭಾಗವತ ಶಿರೋಮಣಿಗಳು "**ವೀರವೃತ್ತಿಯು ತೋರೆ ಧನ್ಯನು**" ಎಂದು ಮುಂತಾಗಿ ಉಪದೇಶ ಮಾಡಿರುವರು.

ದ್ರೌ ಪ ದೀ ವ ಸ್ತ್ರಾ ಪ ಹ ರ ಣ

ಪೀಠಿಕೆ—ನೀತಿಯುಲ್ಲಂಘನೆ

ಪಂತವರಾಳಿ—ಆದಿತಾಳ

ಇದ ಕೇಳೊ ಮಾನವ । ಜನನೀತಿಜ್ಞಾನವ ॥ಪ॥ ಘನನೀತಿಗಳನು । ಗಣಿಸದೆ ಹೋದರೆ । ಘನತರದುಃಖಕೆ । ಹೊಣೆಯಾಗುವೆ ॥ಅ. ಪ॥ ದ್ಯೂತಾದಿಗಳೀ। ಧಾತ್ರಿಯೊಳಹಿತವು । ಪಾತಕವೊದಗುವ ರೀತಿಯಹವು ॥ ೧ ॥ ಪತಿವ್ರತೆಯರ ಸು। ಸ್ಥಿತಿಯ ಕೆಡಿಸೆ ದು ॥ ರ್ಗತಿಯಾಗಲೆ ಬಹುದತಿಜವದಿಂ ॥ ೨ ॥ ಪರರ ಹಾನಿಯನು । ನೆರೆ ಬಯಸಲು ನೀ ॥ ನಿರದದು ನಿನಗೇ । ತಿರುಗುವದೈ ॥ ೩ ॥

ಭೂಲೋಕದಲ್ಲಿ ಜನರು ಸುಖದ ಮೇಲೆ ದುಃಖವನ್ನೂ ದುಃಖದ ಮೇಲೆ ಸುಖವನ್ನೂ ಪಡೆಯುತ್ತಲೆ ಕೋಟಲೆಗೊಳ್ಳುತ್ತಿರುವದನ್ನು ನೋಡಿ ಅವರ ಸಮಾಧಾನಕ್ಕಾಗಿ ನೀತಿಶಾಸ್ತ್ರಕಾರರು ಹೇಳಿರುವದೇನೆಂದರೆ—

ಶ್ಲೋ॥ ದಿನಮೇಕಂ ಶಶೀ ಪೂರ್ಣಃ ಕ್ಷೀಣಸ್ತು ಬಹುವಾಸರಾತ್ ॥ ಸುಖದುಃಖಂ ಸುರಾಣಾಮಪ್ಯಧಿಕಂ ಕಾ ಕಥಾ ನೃಣಾಮ್ ॥ —(ಸು)

ಅ॥ ಚಂದ್ರನು ಮೈದುಂಬಿಕೊಂಡಿರುವದು ಒಂದು ದಿನ ಮಾತ್ರ. ಅವನು ಬಡವಾಗಿರುವದು ಬಹು ದಿನಗಳು. ಸುಖದುಃಖಗಳು;ದೇವತೆಗಳಿಗೂ ಕೂಡ ಹೆಚ್ಚಾಗಿರುವಾಗ ಮನುಷ್ಯರದಿನ್ನೇನು!

ಈ ಸುಖದುಃಗಳಿಗೆಲ್ಲ ಮನುಷ್ಯನು ವಿಷಯಾಭಿಮುಖನಾಗಿರುವದೇ ಕಾರಣ. ಸುಖವನ್ನು ಕೊಡತಕ್ಕ ಭಗವಂತನ ಸ್ವರೂಪವಿರಲು ಅದನ್ನು ಬಿಟ್ಟು ದುಃಖಕರವಾದ ವಿಷಯಗಳ ಕಡೆಗೇ ಮನಸ್ಸು ಒಲಿಯುವದನ್ನು ನೋಡಿ ಜ್ಞಾನಿಗಳು ಒಂದು ಉದಾಹರಣೆಯನ್ನು ಸ್ಮರಣೆಗೆ ತಂದು ಕೊಡುವದೇನೆಂದರೆ—

ಶ್ಲೋ॥ ಸರ್ವಲೋಕಪರಿತೋಷಕಾರಿಣಿ, ಸ್ವರ್ಧುನೀವಿಮಲವಾರಿಣಿ ಸ್ಥಿತೇ।
ಪೂತಿಗಂಧವತಿ ಪಲ್ವಲೋದಕೇ ಸೂಕರಂ ಸುಖಮತೀವ ಮನ್ಯತೇ ॥ —(ಸು)

ಅ॥ ಸಮಸ್ತಲೋಕಗಳಿಗೂ ಸುಖವನ್ನುಂಟುಮಾಡುವಂಥ ಶುದ್ಧವಾದ ಗಂಗಾಜಲವಿರುವಾಗ ಹಂದಿಯು ದುರ್ಗಂಧವಾದ ಕೆಸರಿನಲ್ಲಿ ಆಗುವ ಸುಖವು ಹೆಚ್ಚೆಂದು ತಿಳಿಯುತ್ತದೆ.

ವಿಷಯಸುಖಕ್ಕಾಗಿ ಹಣವನ್ನು ಬಯಸಿ ಆ ಹಣಕ್ಕಾಗಿ ಹೆಣಗುವವರ ದುರವಸ್ಥೆಯೇನೆಂದರೆ—

ಶ್ಲೋ॥ ಸೇವಯಾ ಧನಮಿಚ್ಛದ್ಭಿಃ ಸೇವಕೈಃ ಪಶ್ಯ ಯತ್ಕೃತಮ್ । ಸ್ವಾತಂತ್ರ್ಯಂ ಯಚ್ಛರೀರಸ್ಯ ಮೂಢೈಸ್ತದಪಿ ಹಾರಿತಮ್ ॥ —(ಸು)

ಅ॥ ಸೇವೆಮಾಡಿ ಧನವನ್ನು ಪಡೆಯಬೇಕೆಂದು ಬಯಸುವ ಸೇವಕರು ಮಾಡಿದ್ದೇನೆಂಬುದನ್ನು ನೋಡಿರಿ. ಮೂಢರಾದ ಅವರು ತಮ್ಮ ಶರೀರದ ಮೇಲೆ ತಮಗಿರುವ ಸ್ವಾತಂತ್ರ್ಯವನ್ನು ಕಳೆದುಕೊಂಡಿರುತ್ತಾರೆ.

ಭಗವಂತನನ್ನು ಬಿಟ್ಟು ವಿಷಯಗಳನ್ನು ಧ್ಯಾನಿಸುವದರ ಪರಿಣಾಮವನ್ನು ಒಬ್ಬ ಕವಿ ಚಮತ್ಕಾರವಾಗಿ ವರ್ಣಿಸಿರುವದೇನೆಂದರೆ—

ಶ್ಲೋ॥ ಮೋದಿಷ್ಯಸೇ ಮನಶ್ಚೇತ್ಸ್ಮರಸಿ ತ್ವಂ ಸದಾಮೋದರಸದ್ರವಮ್ ।
ರೋದಿಷ್ಯಸಿ ತ್ವಂ ಹೃದಯದಾರಕಾರ್ತಸ್ವರಂ ಧ್ರುವಮ್ ॥ —(ಸು. ಲಾ)

ಅ॥ ಎಲೆ ಮನಸ್ಸೆ, ನೀನು (ಸ+ದಾಮೋದರ+ಸತ್+ರವಂ) ದಾಮೋದರನಾಮಕನಾದ ಶ್ರೀಕೃಷ್ಣ ಭಗವಂತನ ಉತ್ತಮವಾದ ನಾಮಸ್ಮರಣೆಯನ್ನು ಮಾಡಿದರೆ ನಿಜವಾಗಿ (ಸದಾ+ಮೋದ+ರಸ+ದ್ರವಂ) ಯಾವಾಗ್ಯಲೂ ಆನಂದದಲ್ಲಿಯೇ ಇರುವಂಥವನಾಗುತ್ತಿ. ಮತ್ತು ನೀನು (ಹೃದಯ+ದಾರ+ಕಾರ್ತಸ್ವರಂ) ಮನಸ್ಸಿನಲ್ಲಿ ಹಣ ಮತ್ತು ಹೆಂಗಸು ಇವರ ಧ್ಯಾನದಲ್ಲಿ ಯಾವಾಗಲೂ ಮಗ್ನನಾದರೆ ನಿಜವಾಗಿ (ಹೃದಯ+ದಾರಕ+ಆರ್ತಸ್ವರಂ) ಹೃದಯವನ್ನು ಭೇದಿಸುವಂಥ ದೀನ ಧ್ವನಿಯಿಂದ ಅಳುತ್ತಿರಬೇಕಾಗುತ್ತದೆ.

ಅದ್ದರಿಂದ ವಿಷಯಕ್ಕಾಗಿ ಸೇವಾವೃತ್ತಿಯನ್ನು ವಹಿಸುವದು ನಿಂದ್ಯವೆಂದು ನೀತಿಶಾಸ್ತ್ರಜ್ಞರು ಹೇಳುವದೇನೆಂದರೆ—

ಶ್ಲೋ॥ ಜೀವಂತೋऽಪಿ ಮೃತಾಃ ಪಂಚ ಶ್ರೂಯಂತೇ ಕಿಲ ಭಾರತೇ ।
ದರಿದ್ರೋ ವ್ಯಾಧಿತೋ ಮೂರ್ಖಃ ಪ್ರವಾಸೀ ನಿತ್ಯಸೇವಕಃ ॥

ಅ॥ ಭರತಖಂಡದಲ್ಲಿ ಐದು ಜನರು ಬದುಕಿದ್ದರೂ ಸತ್ತವರು. ಅವರು ಯಾರೆಂದರೆ ಬಡವ, ರೋಗಿ, ಮೂರ್ಖ, ಪ್ರಯಾಣದಲ್ಲಿರುವವನು, ಯಾವಾಗಲೂ ಸೇವಾವೃತ್ತಿಯಲ್ಲಿರುವವನು.

ಆದಕಾರಣ ಧನದ ಮೇಲಿನ ಇಚ್ಛೆ ಮೊದಲಾದ ಆರು ವೈರಿಗಳನ್ನು ಹಿಮ್ಮೆಟ್ಟಿಸುವದಕ್ಕೆ ವಿವೇಕಿಗಳು ಯತ್ನಿಸುವದೆಂತೆಂದರೆ—

ಖರಹರಪ್ರಿಯ—ಆದಿತಾಳ

ದಾರಿಯ ಬಿಡಿ ನೀವೀಗ । (ಇನ್ನು) ॥ ಪ ॥ ದೂರಕೆ ಸರಿಯಿರಿ ಬೇಗ ॥ಅ.ಪ॥ ಆರುಮಂದಿಯು ಸೇರಿ । ಗಾರುಗೆಡಿಸಿದಿರಿ ॥ ಸೇರುವೆ ನಾ ಮುರ। ವೈರಿಯ ಬೇಗದಿ ॥೧॥ ಸಂಕಲ್ಪಮಾಡುತೆ। ಮಂಕನಾದೆನು॥ ಸಂಕಟಹರ ಶ್ರೀವ। ತ್ಸಾಂಕನ ಸೇರುವೆ ॥೨॥ ಕ್ರೋಧಾದಿರೂಪವಿ । ಭೇದವನೊಂದುತೆ ॥ ಹಾದಿಯ ಕಟ್ಟಿದಿ । ರೇ ದುರುಳರೆ ಇನ್ನು ॥ ೩ ॥ ಇನ್ನು ನೀವೆನ್ನನು । ಬನ್ನಬಡಿಸಲಾರಿ ॥ ರೆನ್ನೊಡೆಯನು ಸಿರಿ । ರನ್ನ ಕಾಪಾಡುವ ॥ ೪ ॥ ಶರಣೆಂದಿರುವೆ ಶಂ । ಕರನಾಮ ಶ್ರೀಹರಿ ॥ ಗರುಷಡುವರ್ಗಕೆ । ಬರಿದೆ ಬೆದರುವೆನೆ ॥ ೫ ॥ —(ಅ. ಗೀ.)

ಟಿ॥ ಗಾರುಗೆಡಿಸಿದಿರಿ - ಕಷ್ಟಪಡಿಸಿದಿರಿ. ಕ್ರೋಧಾದಿ - ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.

ಹಾಗಾದರೆ ದುಃಖವು ಯಾವಾಗ ಇಲ್ಲದೇ ಹೋಗುವದೆಂದರೆ—.

ಶ್ಲೋ ॥ ಅತೀವಖೇದಾಃ ಖಲು ಕರ್ಮಕಾಲೇ; । ಕೋ ವೇದ ಭಾವೀನಿ ಸುಖಾನಿ ಕಾನಿ; ॥ ಕಂಸಾರಿಸಂಸೇವನಕಾಲ ಏವ । ಸಂಸಾರಖೇದಾಃ ಪ್ರಶಮಂ ಪ್ರಯಾಂತಿ ॥ —(ಸು)

ಅ॥ (ಧನವನ್ನು ಬಯಸಿ) ಕರ್ಮವನ್ನು ಮಾಡುವಕಾಲದಲ್ಲಿ ಬಹಳ ದುಃಖವಾಗುವದು. ಮುಂದೆ ಎಂಥ ಸುಖವಾಗುವದೊ.ಯಾರು ಬಲ್ಲರು? (ಆದರೆ) ಶ್ರೀಕೃಷ್ಣನ ಸೇವೆಯನ್ನು ಮಾಡುತ್ತಲೆ ಸಂಸಾರದ ದುಃಖವೆಲ್ಲ ತಣ್ಣಗಾಗುವದು.

ಹೆಚ್ಚು ಜನರು ಶ್ರೀ ಕೃಷ್ಣನ ಸೇವೆಯನ್ನು ಮಾಡುತ್ತಿಲ್ಲವಲ್ಲ! ಎಂದರೆ—

ವೃ ॥ ಗೋವಿಂದಸೇವನಮಿದಂ ಯದಿ ನಾದ್ರಿಯಂತೇ । ದುಷ್ಟಾ ನಿಕೃಷ್ಟಮತಯೋ ವಿಷಯೈಕನಿಷ್ಠಾಃ ॥ ಕಿಂ ತಾವತಾ ಜ್ವರವತಾಮರುಚಿರ್ನ ಜಾತು । ದುಗ್ಧಸ್ಯ ಶುದ್ಧಮಧುರಸ್ಯ ವಿದೂಷಣಂ ಸ್ಯಾತ್ ॥ —(ಸು)

ಅ॥ ಕೀಳುಬುದ್ಧಿಯುಳ್ಳ ಕೆಟ್ಟಜನರು ವಿಷಯಗಳನ್ನೇ ಹೆಚ್ಚಿನವುಗಳೆಂದು ಭಾವಿಸಿ ಗೋವಿಂದನ ಸೇವೆಯನ್ನು ಆದರಿಸದೆ ಹೋದಮಾತ್ರಕ್ಕೇ ಏನು! ಜ್ವರವುಳ್ಳವರಿಗೆ ಅರುಚಿಯಾಗಿ ಕಂಡಮಾತ್ರಕ್ಕೇ ಒಳ್ಳೆ ಮಧುರವಾದ ಹಾಲೇನಾದರೂ ಕೆಟ್ಟದ್ದೆನಿಸೀತೇ?

ಧನಾದಿಗಳಿಲ್ಲದವನನ್ನು ಜನರು ಕಡೆಗಾಣುವರೆಂದರೆ—

ವೃ ॥ ಕೇಚಿದ್ವದಂತಿ ಧನಹೀನಜನೋ ಜಘನ್ಯಃ ; । ಕೇಚಿದ್ವದಂತಿ ಗುಣಹೀನಜನೋ ಜಘನ್ಯಃ; ॥ ವ್ಯಾಸೋ ವದತ್ಯಖಿಲಲೋಕವಿಶೇಷವಿಜ್ಞೋ । ನಾರಾಯಣಸ್ಮರಣಹೀನಜನೋ ಜಘನ್ಯಃ ॥ —(ಸು)

ಅ॥ ಕೆಲವರು ಹಣವಿಲ್ಲದವನನ್ನು ಕೀಳೆನ್ನುತ್ತಾರೆ; ಕೆಲವರು ಗುಣವಿಲ್ಲದವನನ್ನು ಕೀಳೆನ್ನುತ್ತಾರೆ. ಎಲ್ಲವೇದಗಳ ಅರ್ಥವಿಶೇಷವನ್ನೂ ಚೆನ್ನಾಗಿ ತಿಳಿದಿರುವಂಥ ವ್ಯಾಸರು ಹೇಳುವದೇನೆಂದರೆ—ನಾರಾಯಣಸ್ಮರಣೆ ಇಲ್ಲದವನು ಕೀಳು.

ಪರಮಾತ್ಮನ ನಾಮಸ್ಮರಣೆಯೊಂದು ಸಾಕೆಂದು ಒಬ್ಬ ದಾಸರು ಹೇಳಿರುವದೇನೆಂದರೆ—

ಪ ॥ ಬರಿದೆ ಹಂಕಾರದಲಿ ತತ್ತ್ವದ । ಕುರುಹ ಕಾಣದೆ, ನಿನ್ನ ದಾಸರ । ಜರಿದು, ವೇದಪುರಾಣಶಾಸ್ತ್ರಗಳೋದಿ ಫಲವೇನು ? ॥ ನರರು ದುಷ್ಕರ್ಮದಲಿ ಮಾಡಿದ । ದುರಿತವಡಗುವ ನಿನ್ನ ನಾಮ । ಸ್ಮರಣೆಯೊಂದೇ ಸಾಕು; ರಕ್ಷಿಸು ನಮ್ಮ ನನವರತ ॥ —(ಹ.ಭ)

ಟಿ॥ ಹಂಕಾರದಲಿ = ಅಹಂಕಾರದಿಂದ.

ಪರಮಾತ್ಮನ ನಾಮುವನ್ನು ಮನಸ್ಸಿಗೆ ತಂದುಕೊಂಡು ಅವನನ್ನು ಬೇಡಬೇಕಾದ್ದೇನೆಂದರೆ—

ಪ ॥ ಎತ್ತಿದೆನು ನಾನಾಶರೀರವ; । ಹೊತ್ತು ಹೊತ್ತಲಸಿದೆನು ; ಸಲೆ ಬೇ । ಸತ್ತು ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನು ; ॥ ಸತ್ತು ಹುಟ್ಟುವ ಹುಟ್ಟಿ ಹಿಂಗುವ । ಸುತ್ತ ತೊಡಕನು ಮಾಣಿಸೆಲೆ ಪುರು । ಷೋತ್ತಮನೆ, ಮನವೊಲಿದು ರಕ್ಷಿಸು ನಮ್ಮನನವರತ ॥ —(ಹ.ಭ)

ಒಬ್ಬ ದಾಸರು ಬೇಡಿರುವದೇನೆಂದರೆ—

ಶಂಕರಾಭರಣ—ಅಟತಾಳ

ಪಾಲಿಸೊ । ಶ್ರೀ ಹರಿಯೆ । ಪಾಲಿಸೊ ॥ ಪ ॥ ಪಾಲಿಸೊ ಪರಮ ಪಾವನ್ನ ॥ ಕಮ । ಲಾಲೋಲ ನಂಬಿದೆ ನಿನ್ನ ॥ಆಹ॥ ಬಾಲೇಂದುಕೋಟಿಯ । ಸೋಲಿಪ ನಖತೇಜ, । ಮೂಲೋಕದರಸೆ, ನಿ । ನ್ನಾಲಯವನು ತೋರಿ ॥ಅ.ಪ॥ ಹರಣದಲ್ಲಿ ನಿನ್ನ ರೂಪ । ತೋರಿ । ಪರಿಹರಿಸೈ ಎನ್ನ ಪಾಪ; । ದೂರ । ಬಿರುತಿಹ ಹರಿ, ಸಪ್ತ ದ್ವೀಪಾ । ಧಿಪ, । ಸಿರಿಪತಿ, ಭಕ್ತಸಲ್ಲಾಪ ॥ಆಹ॥ ಮರಣಜನನಗಳ । ತರಿದು ಬಿಸುಟ ನಿನ್ನ । ಶರಣರ ಸಂಗದೊ । ಳಿರಿಸಿ ಉದ್ಧರಿಸೆನ್ನ ॥೧॥ ಮಾನಸಪೂಜೆಯ ದಯದಿ । ಇತ್ತು । ಶ್ರೀನಾಥ, ಕಳೆ ಭವವ್ಯಾಧಿ । ಕಾಯೊ । ಅನಾಥಬಂಧು, ಸು ವೇದಿ, । ಚತು । ರಾನನಪಿತ, ಕೃಪಾಂಬುಧಿ ॥ ಆಹ ॥ ನಾನಿನ್ನೊಬ್ಬರನರಿಯೆ । ಗಾನವಿನೋದನೆ, । ಏನೆಲ್ಲಮಾಡುವ । ಸಾಧನೆ ನಿನ್ನದು ॥೨॥ ಶರಣಪಾಲಕನೆಂಬ ಬಿರುದು । ಕೇಳಿ । ತ್ವರಿತದಿ ಬಂದೆನು ಅರಿದು; । ಪರ । ತರನೆ, ನೋಡೆನ್ನ ಕಣ್ದೆ ರೆದು । ಎನ್ನ । ಪರಿಪರಿ ಅಪರಾಧ ಮರೆದು ॥ ಆಹ ॥ ಕರಣಶುದ್ಧನ ಮಾಡಿ । ಕರೆಯೊ ನಿನ್ನಯ ಬಳಿಗೆ । ಸುರವಂದ್ಯ ನಿನ್ನಯ । ಚರಣ ಆಶ್ರಯಿಸಿದೆ ॥ ೩ ॥ ಸಂಸಾರಸಾಗರದೊಳಗೆ । ಎನ್ನ । ಹಿಂಸೆಗೊಳಿಸುವರೆ ಹೀಗೆ? । ಎಲೊ । ಕಂಸಾರಿ, ಮಣಿಯೆನನ್ಯರಿಗೆ। ಇನ್ನು । ಸಂಶಯವಿಲ್ಲೀ ಮಾತಿಗೆ ॥ ಆಹ ॥ ಹಂಸದಿಂಬಕರನ್ನು । ಧ್ವಂಸಮಾಡಿದ ಶೌರಿ,।ಶಿಂಶುಮಾರಮೂರ್ತಿ, । ದಿವಸದಿವಸದಲ್ಲಿ ॥೪॥ ನಿನ್ನ ಸಂಕಲ್ಪವಲ್ಲದೆ ।ಮತ್ತೆ। ಅನ್ಯಥಾ ಆಗಬಲ್ಲದೆ । ಹೀಗೆ । ಚೆನ್ನಾಗಿ ನಾನು ತಿಳಿಯದೆ । ಮಂದ । ಮಾನವನಾಗಿ ಬೇಡಿದೆ ॥ ಆಹ ॥ ಎನ್ನಪರಾಧಗ । ಳನ್ನು ನೀನೋಡದೆ। ಮನ್ನಿಸು ದಯದಿ ಜ । ಗನ್ನಾಥವಿಠ್ಠಲ ॥೫॥ —(ದಾ)

ಸರ್ವಪ್ರಾಣಿಗಳ ಹೃದಯವೆಂಬ ಗುಹೆಯಲ್ಲಿರುವ ಆ ಪರಮಾತ್ಮನು ನಮಗೆ ಹೇಗೆ ಒಲಿಯುವನೆಂದರೆ.—

ಶ್ಲೋ॥ ಪುರುಷಃ ಸ ಪರಃ ಪಾರ್ಥ, ಭಕ್ತ್ಯಾ ಲಭ್ಯಸ್ತ್ವನನ್ಯಯಾ ॥

—(ಭ.ಗೀ)

ಅ॥ ಹೆ ಅರ್ಜುನ, ಆ ಪರಮಪುರುಷನು ಮತ್ತೊಬ್ಬರ ಅವಲಂಬನೆ ಇಲ್ಲದಂಥ ಭಕ್ತಿಗೆ ದೊರೆಯುವನು.

ಮತ್ತೊಂದರ ಅವಲಂಬನೆ ಇಲ್ಲದೆ ಅಖಂಡಭಕ್ತಿಯಿಂದ ಮಾಡುವ ಧ್ಯಾನವನ್ನು ಕುರಿತು ಒಬ್ಬ ಕವಿ ಹೇಳಿರುವದೇನೆಂದರೆ-

ವೃ॥ ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ, । ಕುಂಭಿಜಮೂರು ಬೃಂಹಿಸುತೆ ಗರ್ಜಿಸುತುಂ ಬರೆ ಬಲ್ಪುಗುಂದದೇ,॥ ಜೃಂಭಿಸಿ ಕಾಡುಕಿಚ್ಚು ಕವಿಯುತ್ತಿರೆ ಬುದ್ಧಿಕಲಂಕದೇ, ಶಿಲಾ । ಸ್ತಂಭವೆನಲ್ಕೆಯೆನ್ನೊಳಗೆ ನಿಲ್ವೆನದೆಂದಪರಾಜಿತೇಶ್ವರಾ ॥

—(ಅ. ಶ)

ಟಿ॥ ಕುಂಭಿಜಮೂರು = ಆನೆಗಳ ದಂಡು.

ಹೀಗೆ ಬರುವ ವಿಷಯಗಳ ಉಪರತಿಯಾದರೂ ಚಿಕ್ಕಂದಿನಲ್ಲಿಯೇ ಬರಬೇಕೆಂದು ಹೇಳುತ್ತಾನೆ:—

ಶ್ಲೋ॥ ನವೇ ವಯಸಿ ಯಃ ಶಾಂತಃ ಸ ಶಾಂತ ಇತಿ ಮೇ ಮತಿಃ; । ಧಾತುಷು ಕ್ಷೀಯಮಾಣೇಷು ಶಾಂತಿಃ ಕಸ್ಯ ನ ಜಾಯತೇ! ॥

—(ಸು)

ಅ॥ ತಾರುಣ್ಯದಲ್ಲಿ ಶಾಂತನಾದವನೇ ಶಾಂತನೆಂದು ನನ್ನ ಅಭಿಪ್ರಾಯ; ಧಾತುಗಳು ಸೊರಗಿದಮೇಲೆ ಉಪರತಿ ಯಾರಿಗೆ ಬರುವದಿಲ್ಲ !

ವಿಷಯದಲ್ಲಿ ಉಪರತಿಯನ್ನು ಹೊಂದಿ ಭಜಿಸುವದಕ್ಕೆ ತಕ್ಕ ಪರಮಪುರುಷನು ಯಾರೆಂದರೆ-

ಶ್ಲೋ॥ ಕವಯಃ, ಕಥಯತ ಕೋಽನ್ಯಃ । ಕೃಷ್ಣಾತ್ಕರುಣಾಕರಾದ್ವಿನೈಕಸ್ಮಾತ್ ॥ ಕರಕಮಲಕೋರಕೇ ಸ್ವೇ । ಕಾಮಂ ಕುರ್ವೀತ ನರಕಭೀರುಜನಮ್॥

—(ಸು.ಲಾ)

ಅ॥ ಹೆ, ಕವಿಜನರೆ (೧) ನರಕಕ್ಕೆ ಹೆದರಿದ ಮನುಷ್ಯರನ್ನು ಉದಾರಬುದ್ಧಿಯಿಂದ ಕಮಲದಂತಿರುವ ಕೈಗಳಿಂದ ಹಿಡಿಯುವವರು ಕೃಷ್ಣನೊಬ್ಬನ ಹೊರತು ಬೇರೆಯಾರು ? (೨) ನರಕಾಸುರನಿಗೆ ಹೆದರಿದ್ದ ಹದಿನಾರುಸಾವಿರ ಸ್ತ್ರೀಯರನ್ನು ಕೃಷ್ಣನ ಹೊರತು ಯಾರು ಕೈ ಹಿಡಿಯುವರು !

ಆ ಕೃಷ್ಣನ ಕಡೆಗೆ ಮನಸ್ಸು ಒಲಿಯಬೇಕಾದರೆ ಆ ಮನಸ್ಸು ನೀತಿಯ ನಿಯಮಗಳನ್ನು ಚೆನ್ನಾಗಿ ನಡೆಸುವಂಥದ್ದಾಗಿರಬೇಕು. ನಡೆಸಬಾರದ ಕೆಲವು ಅನೀತಿಗಳಲ್ಲಿ ಮೊದಲನೆಯದಾಗಿ ಭಾವಿಸಿ ಕೀರ್ತನಾರಂಭದಲ್ಲಿ ಭಾಗವತಶಿರೋಮಣಿಗಳು **"ದ್ಯೂತಾದಿಗಳೀ ಧಾತ್ರಿಯೊಳ ಹಿತವು"** ಎಂದು ಉಪದೇಶಮಾಡಿರುವರು. ವಿವೇಕವಿಲ್ಲದ ಕೆಲವರಿಗೆ ದ್ಯೂತಾದಿಗಳು ನೀತಿಸಮ್ಮತವಾಗಿಯೂ ಕಾಣಬಹುದು. ಹೇಗೆಂದರೆ—

ಶ್ಲೋ॥ ಪ್ರಾತರ್ದ್ಯೂತಪ್ರಸಂಗೇನ, ಮಧ್ಯಾಹ್ನೇ ಸ್ತ್ರೀಪ್ರಸಂಗತಃ,। ರಾತ್ರೌ ಚೋರಪ್ರಸಂಗೇನ ಕಾಲೋ ಗಚ್ಛತಿ ಧೀಮತಾಮ್ ॥

—(ಸು)